ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೯೮
ವಿಚಾರ ಸಾಹಿತ್ಯಮಾಲೆ – ೧೯
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ. ವಿ. ನರಸಿಂಹಮೂರ್ತಿ**

# ಗಾಂಧೀಜಿ ಅರ್ಥಶಾಸ್ತ್ರ

## ಭವನದ ಗ್ರಂಥ ವಿಶ್ವವಿದ್ಯಾನಿಲಯ

ಮಾಲೆಯ
ಮೂಲ ಸಂಪಾದಕರು
**ಕೆ.ಎಂ. ಮುನ್ಷಿ**
**ಆರ್.ಆರ್. ದಿವಾಕರ್**

ವ್ಯವಸ್ಥಾಪಕ ಮಂಡಳಿ
**ಲೀಲಾವತಿ ಮುನ್ಷಿ** – ಅಧ್ಯಕ್ಷೆ
**ಕೆ.ಕೆ. ಬಿರ್ಲಾ** – ಸದಸ್ಯರು
**ಎಸ್.ಜಿ. ನೇವಾತಿಯ** – ಸದಸ್ಯರು
**ಜಿ.ಎಚ್. ದವೆ** – ಸದಸ್ಯರು
**ಎಸ್. ರಾಮಕೃಷ್ಣನ್** – ಸದಸ್ಯರು

**ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ**

**ಎನ್. ರಾಮಾನುಜ** – ಅಧ್ಯಕ್ಷರು
(ಅಧ್ಯಕ್ಷರು, ವಿದ್ಯಾ ಭವನ, ಕರ್ನಾಟಕ)

**ಡಾ. ಮತ್ತೂರು ಕೃಷ್ಣಮೂರ್ತಿ**
(ಕಾರ್ಯಕಾರಿ ನಿರ್ದೇಶಕರು, ವಿದ್ಯಾ ಭವನ, ಬೆಂಗಳೂರು)
**ಎಚ್.ಎನ್. ಸುರೇಶ್**
(ನಿರ್ದೇಶಕರು, ಕಾರ್ಯಕ್ರಮ ಮತ್ತು ಯೋಜನೆಗಳು
ವಿದ್ಯಾ ಭವನ, ಬೆಂಗಳೂರು)
**ಡಾ. ಎ.ವಿ. ನರಸಿಂಹಮೂರ್ತಿ**
(ಅಧ್ಯಕ್ಷರು, ವಿದ್ಯಾ ಭವನ, ಮೈಸೂರು)



# ಗಾಂಧೀಜಿ ಅರ್ಥಶಾಸ್ತ್ರ

ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ
(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)
–ಋಗ್ವೇದ, I. ೮೯–೧

ಮೂಲ
**ಕೆ. ವಾಸುದೇವನ್**

ಅನುವಾದ
**ಪ್ರೊ. ದೇ. ಜವರೇಗೌಡ**

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು
ಮತ್ತು
**ಭಾರತೀಯ ವಿದ್ಯಾ ಭವನ,** ಮೈಸೂರು

**Gandhiji Arthashastra :** Kannada translation of *Gandhian Economics* by **K. Vasudevan;** Kannada translation by **Prof. D. Javare Gowda** ; Editor-in-Chief: **Dr. Pradhan Gurudatta**; Editor of the series : **Dr. A.V. Narasimha Murthy;** published under the joint auspices of **Kuvempu Bhasha Bharati Pradhikara**, Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara : 2010; Pp. xxviii + 61; Price: Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೦
ಪುಟಗಳು : xxviii + ೬೧
ಬೆಲೆ : ರೂ. ೧೦/–

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ|| ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್‌ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೫–೮–೨೦೦೯
ಸಿಎಂ/ಪಿಎಸ್/೧೪೭/೦೯

## ಮೊದಲ ಮಾತು

ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು–ಆಯಾಮದ ಅದರ ಚಟುವಟಿಕೆಗಳು ಅರಳಿ ನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ–ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ–ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ–ಸೂಚನೆ–ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ–ವಿದೇಶಗಳ ಗಮನವನ್ನೂ ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ–ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.

ಭಾರತೀಯ ವಿದ್ಯಾಭವನದಂಥ ರಾಷ್ಟ್ರೀಯ ಮಹತ್ವದ ಸಂಸ್ಥೆಯ ಸಹಯೋಗದೊಂದಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾಲಯ ಮಾಲೆಯ ಪುಸ್ತಕಗಳನ್ನು ಹೊರತರುವ ಯೋಜನೆಯನ್ನು ಹಾಕಿಕೊಂಡಿರುವುದು ಸಂತೋಷದ ಬೆಳವಣಿಗೆಯೇ ಆಗಿದೆ. ಈ ಮಾಲೆಯ ಪುಸ್ತಕಗಳು ಕುವೆಂಪು ಭಾಷಾ ಭಾರತಿ ಮತ್ತು ಭಾರತೀಯ ವಿದ್ಯಾಭವನದ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದೂ ಸಂತೋಷದ ಸಂಗತಿಯೇ ಆಗಿದೆ.

(ಬಿ.ಎಸ್.ಯಡಿಯೂರಪ್ಪ)

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ
ಜವಳಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

## ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

**ಗೋವಿಂದ ಎಂ. ಕಾರಜೋಳ**



ಕರ್ನಾಟಕ ಸರ್ಕಾರ

**ರಮೇಶ್ ಬಿ.ಝಳಕಿ,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಕಾಸ ಸೌಧ
ಬೆಂಗಳೂರು – ೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ನಾಡಿನ ಜನಸಮುದಾಯದ ಗಮನವನ್ನು ಸೆಳೆಯುವ ದಿಕ್ಕಿನಲ್ಲಿ ಮುನ್ನಡೆಯುತ್ತಿರುವುದು ತುಂಬ ಸಂತೋಷದ ಸಂಗತಿಯೇ ಆಗಿದೆ. ಪ್ರಾಧಿಕಾರದ ಒಂದು ಭಾಗವೇ ಆಗಿ ಕಲ್ಪಿಸಿಕೊಳ್ಳಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಹೊರತರಲಾಗಿದ್ದ ಸುಮಾರು ೬೦ ಗ್ರಂಥಗಳ ಜೊತೆಗೆ, ಪ್ರಾಧಿಕಾರ ಮತ್ತಷ್ಟು ಮಹತ್ವಪೂರ್ಣ ಗ್ರಂಥಗಳನ್ನು ಹೊರತರುತ್ತಿದ್ದು, ಸದ್ಯದಲ್ಲಿಯೇ ಈ ಸಂಖ್ಯೆ ನೂರರ ಗಡಿಯನ್ನು ದಾಟಲಿದೆ. 'ಭಾರತೀಯ ವಿದ್ಯಾಭವನ'ದಂಥ ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಂಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಪ್ರಾಧಿಕಾರ ಮುನ್ನಡೆಯಲಿರುವುದು ಪ್ರಾಧಿಕಾರದ ಚಟುವಟಿಕೆಗಳಿಗೆ ಹೊಸ ಆಯಾಮವನ್ನೇ ನೀಡಲಿದೆ ಎಂದು ನಂಬಿದ್ದೇನೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೪ ಸಂಪುಟಗಳ ಕನ್ನಡ ಅನುವಾದದ ಪರಿಷ್ಕರಣ, ೧೫ ರಿಂದ ಮುಂದಿನ ಸಂಪುಟಗಳ ಅನುವಾದ ಕಾರ್ಯ, ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರ ಸಂಚಯಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳ ಪ್ರಕಟಣೆ – ಇವೇ ಮೊದಲಾದ ಮಹತ್ವದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರ ಹಮ್ಮಿಕೊಂಡಿರುವುದು ಸ್ತುತ್ಯರ್ಹವಾದ ಸಂಗತಿಯೇ ಆಗಿದೆ. 'ಕಾವೇರಿ ನ್ಯಾಯಾಧಿಕರಣ'ದ ತೀರ್ಪಿನ ಕನ್ನಡ ಆವೃತ್ತಿಯೂ ಸದ್ಯದಲ್ಲಿಯೇ ಹೊರಬರಲಿದೆ. ವೈಜ್ಞಾನಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಹಿತ್ಯ ಪ್ರಕಟಣೆಯತ್ತಲೂ ಪ್ರಾಧಿಕಾರ ಗಮನಹರಿಸಿದೆ. ಪ್ರಾಧಿಕಾರದ ಮುನ್ನಡೆಗೆ ಕರ್ನಾಟಕ ಸರ್ಕಾರದ ಎಲ್ಲ ಬಗೆಯ ನೆರವೂ ಲಭಿಸಲಿದೆ.

ಈ ಎಲ್ಲ ಚಟುವಟಿಕೆಗಳು ಕನ್ನಡಿಗರ ಆದರ, ಮೆಚ್ಚಿಕೆ, ಸಂತೋಷಗಳಿಗೆ ಪಾತ್ರವಾಗುತ್ತದೆಂದು ನಂಬಿದ್ದೇನೆ.

(ರಮೇಶ್ ಬಿ.ಝಳಕಿ)

ಕರ್ನಾಟಕ ಸರ್ಕಾರ

**ಮನು ಬಳಿಗಾರ್**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ದಿನಾಂಕ : ೦೭.೦೮.೨೦೦೯

# ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ ೨೦೦೫ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ ಬಹುಭಾಷಾ ವಿದ್ವಾಂಸರಾದ ಡಾ. ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು,



ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.

ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಸಂಸ್ಥೆಯ ಉದ್ಘಾಟನೆಯ ಹೊತ್ತಿಗೆ ಅದರ ಅನೇಕ ಪ್ರಕಟಣೆಗಳು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಭಾರತೀಯ ಸಂಸ್ಕೃತಿ, ಇತಿಹಾಸ ಸಾಹಿತ್ಯಕ ಕ್ಷೇತ್ರಗಳಿಗೆ ತನ್ನ ಪ್ರಕಟಣೆಗಳ ಮೂಲಕ ಹಾಗೂ ಶೈಕ್ಷಣಿಕ ಕಾರ್ಯಗಳ ಮುಖೇನ ಸ್ಮರಣೀಯ ಸೇವೆಯನ್ನು ಸಲ್ಲಿಸುವ ಮೂಲಕ ಭಾರತೀಯ ವಿದ್ಯಾಭವನ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿ ಪರಿಣಮಿಸಿದೆ. 'ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' ಮಾಲೆಯ ಸಂಪುಟಗಳ ಮೂಲಕ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳ ನೈಜ ಚಿತ್ರಣವನ್ನು ಮುಂದಿರಿಸಿದ ಹಿರಿಮೆಯೂ ಅದರದಾಗಿದೆ. ಜನಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು ರಚಿಸಲಾದ ಅದರ 'ಬುಕ್ ಯೂನಿವರ್ಸಿಟಿ' ಮಾಲೆಯ ಪುಸ್ತಕಗಳ ಕನ್ನಡ ಆವೃತ್ತಿ ಭಾರತೀಯ ವಿದ್ಯಾಭವನ ಮತ್ತು ಕುವೆಂಪು ಭಾಷಾ ಭಾರತಿಯ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷ ಸಮಾಧಾನಗಳನ್ನು ತಂದಿದೆ. ಈ ಪುಸ್ತಕಗಳನ್ನು ಕನ್ನಡ ಜನತೆ ಎಂದಿನಂತೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್
(ಮನು ಬಳಿಗಾರ್)

## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು. ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು, 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು ಎಕರೆಗಳಷ್ಟು ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ



ಶಿಲಾನ್ಯಾಸ ಕಾರ್ಯಕ್ರಮ ದಿನಾಂಕ: ೦೧–೦೯–೨೦೦೫ ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್.ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿದೆ. ಇದೇ ದಿನಾಂಕ: ೧೯–೦೮–೨೦೦೯ರ ಬೆಳಗ್ಗೆ ೧೧–೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಈ ಕಟ್ಟಡ–ಸಮುಚ್ಚಯದ ಉದ್ಘಾಟನ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು
(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
(ಇ) ಪ್ರಕಟಣೆಗಳು

### (ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :

(i) "ಕನ್ನಡ ಸಾಹಿತ್ಯ ಹಿರಿಮೆ–ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.
(೨) ಭಾಷಾಂತರದಲ್ಲಿ ಎಂ.ಫಿಲ್ ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು
(೩) ಪತ್ರಿಕೋದ್ಯಮ ಮತ್ತು ಭಾಷಾಂತರ
(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ
(೫) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು
(೬) ತೌಲನಿಕ ಸಾಹಿತ್ಯ
(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ – ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು

ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀಣೀ, ಆಫ್ರಿಕನ್ ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗ ಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಶನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

**(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :**

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ 'ರವೀಂದ್ರ ಸಂಚಯ'ವನ್ನು ಹೊರತಂದಿರುವ ರೀತಿಯಲ್ಲಿಯೇ 'ಕುವೆಂಪು ಸಂಚಯ' ಮತ್ತು 'ಪು.ತಿ.ನ ಸಂಚಯ'ಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರಲಾಗುತ್ತದೆ. ಮುಂಬರುವ ದಿನಗಳಲ್ಲಿ ಜಿ.ಎಸ್. ಶಿವರುದ್ರಪ್ಪ ಮೊದಲಾದ ಕನ್ನಡದ ಮಹತ್ವದ ಕವಿಗಳ ಸಂಕಲನಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ತರುವ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮಕೈಗೊಳ್ಳಲಾಗುತ್ತದೆ. ಉದಾ: ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ (ಹಿಂದೀ), ವಿಶ್ವನಾಥ ಸಂಚಯ (ತೆಲುಗು), ಆಶಾಪೂರ್ಣಾದೇವಿ ಸಂಚಯ (ಬಂಗಾಳಿ), ಶಿವಶಂಕರ ಪಿಳ್ಳೈ ಮತ್ತು ಎಂ.ಟಿ. ವಾಸುದೇವ ನಾಯರ್ ಸಂಚಯ (ಮಲಯಾಳಂ) ಇತ್ಯಾದಿ.

ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ



ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.

ರಾಷ್ಟ್ರೀಯ ಪ್ರಶಸ್ತಿ : ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

**(ಇ) ಪ್ರಕಟಣೆಗಳು :**

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕಳೆದ ವರ್ಷವಷ್ಟೇ ೫೬ ಪುಸ್ತಕಗಳನ್ನು ಹೊರತಂದಿದ್ದು, ಕಳೆದ ೮ ತಿಂಗಳ ಅವಧಿಯಲ್ಲಿ ಸುಮಾರು ೧೦.೦೦ ಲಕ್ಷ ರೂಗಳನ್ನು ಮಾರಾಟದ ಮೂಲಕವೇ ಗಳಿಸಿಕೊಂಡಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ.ಡಿ. ಬರ್ನಾಲ್ ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಾಂಟ್ ಅವರ 'ಸ್ಟೋರಿ ಆಫ್ ಸಿವಿಲಿಜೇಷನ್'ನ ಎಂಟು ಸಂಪುಟಗಳು (೪ರಿಂದ ೧೧), ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಶಾಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. ಭಾರತೀಯ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾನಿಲಯ ಮಾಲಿಕೆಯ ಮೊದಲಕಂತಿನಲ್ಲಿ ಈ ಮಾಲಿಕೆಯ ೨೫ ಪುಸ್ತಕಗಳು ಸಂಯುಕ್ತ ಪ್ರಕಟಣೆಗಳಾಗಿ ಬರಲಿವೆ. 'ಅಂತರರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆ ಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

ಖಾಸಗಿ ಪ್ರಕಾಶಕರ ಸಹಭಾಗಿತ್ವ : ಖಾಸಗಿ ಪ್ರಕಾಶಕರ ಸಹಾಯ–ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಗೊಳಿಸುವ

ಸಲುವಾಗಿ ರಾಜ್ಯ ಸರ್ಕಾರ ವಿಶೇಷ ಯೋಜನೆಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇಲ್ಲದಿದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯ ಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ–ಸಾಹಿತ್ಯ ವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯ ನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ–ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯ ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ ಸಾಹಿತ್ಯಿಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವತ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ॥ ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ



ಅಧ್ಯಕ್ಷರಾಗಿರುವ ಡಾ॥ ಎ.ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ ವಿದ್ಯಾ ಭವನದ ಬೆಂಗಳೂರು ಶಾಖೆಯ ಕಾರ್ಯಕಾರಿ ನಿರ್ದೇಶಕರಾಗಿರುವ ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಅವರಿಗೂ, ಕಾರ್ಯಕ್ರಮ ಮತ್ತು ಯೋಜನೆಗಳ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಭಾರತೀಯ ವಿದ್ಯಾ ಭವನದ ಕೇಂದ್ರ ಕಛೇರಿಯ ಪದಾಧಿಕಾರಿಗಳಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಅರುವತ್ತರ ದಶಕದಲ್ಲಿ ಈ ಮಾಲೆಯನ್ನು ಆರಂಭಿಸಿದಾಗ ಇದನ್ನು 'ಒಂದು ರೂಪಾಯಿ ಮಾಲೆ' ಎಂದೇ ಕರೆಯಲಾಗಿತ್ತು. ಈಗಲೂ ಜನಸಾಮಾನ್ಯರಿಗೆ ಸುಲಭ ದರದಲ್ಲಿ ಈ ಪುಸ್ತಕಗಳನ್ನು ತಲುಪಿಸುವ ಉದ್ದೇಶದಿಂದ ಈ ಮಾಲೆಯ ಎಲ್ಲ ಪುಸ್ತಕಗಳಿಗೂ ಹತ್ತು ರೂ.ಗಳ ಸಾಂಕೇತಿಕ ದರವನ್ನೇ ಗೊತ್ತುಪಡಿಸಲಾಗಿದೆ. ಪ್ರಕಟಣೆಯ ವೆಚ್ಚದ ಒಂದು ಭಾಗವನ್ನು ವಿದ್ಯಾ ಭವನ ಭರಿಸಿರುವುದು ಇದಕ್ಕೆ ಕಾರಣವಾಗಿದೆ. ಈ ಸೌಹಾರ್ದತೆಗಾಗಿಯೂ ನಾವು ವಿದ್ಯಾ ಭವನದ ಎಲ್ಲ ಪದಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಬಯಸುತ್ತೇವೆ.

ಈ ಮಾಲೆಯ ೨೫ ಪುಸ್ತಕಗಳು ಒಮ್ಮೆಗೇ ಹೊರ ಬರುತ್ತಿರುವುದಕ್ಕೆ ಬೆಂಗಳೂರು ಕೇಂದ್ರದ ತ್ರಿಮೂರ್ತಿಗಳ ಸಹಾಯ ಸಹಕಾರ ಮತ್ತು ಮಾರ್ಗದರ್ಶನಗಳು ಮಾತ್ರವಲ್ಲದೆ ಡಾ॥ ಎ. ವಿ. ನರಸಿಂಹಮೂರ್ತಿಯವರ ದಕ್ಷ ಸಂಪಾದಕತ್ವ ಮತ್ತು ಕಾರ್ಯಪಟುತ್ವಗಳು ಕಾರಣವಾಗಿವೆ. ಇದು ನಮಗೆ ಸಂತೋಷವನ್ನೂ ಹೆಮ್ಮೆಯನ್ನು ತಂದುಕೊಟ್ಟಿದೆ. ಇವನ್ನು ಸುಂದರವಾಗಿ ಹೊರತರುವಲ್ಲಿಯೂ ಅವರಿಂದ ನಮಗೆ ಸಲಹೆ ಸೂಚನೆಗಳು ದೊರೆತಿವೆ. ಈ ಎಲ್ಲ ಕೃಪೆಗಾಗಿ ನಾನು ಆ ಎಲ್ಲ ಮಹನೀಯರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಪುಸ್ತಿಕೆಯ ಕನ್ನಡ ಆವೃತ್ತಿಯನ್ನು ಸಿದ್ಧಪಡಿಸಿಕೊಟ್ಟಿರುವ ಪ್ರೊ. ದೇ. ಜವರೇಗೌಡ ಅವರಿಗೂ, ಕರಡುಗಳ ಪರಿಶೀಲನೆಯಲ್ಲಿ ಸಹಕರಿಸಿರುವ ಶ್ರೀ ಎಚ್.ಎಂ. ನಾಗರಾಜರಾವ್ ಅವರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**
ಅಧ್ಯಕ್ಷ

## ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾ ಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಪ್ರಸ್ತುತ, 'ಗಾಂಧೀಜಿ ಅರ್ಥಶಾಸ್ತ್ರ' ಎಂಬ ಪುಸ್ತಕ ಖ್ಯಾತ ಲೇಖಕರಾದ ಪ್ರೊ. ದೇ. ಜವರೇಗೌಡ ಅವರು ಮಾಡಿಕೊಟ್ಟ ಅನುವಾದ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

**ಎನ್. ರಾಮಾನುಜ**
ಅಧ್ಯಕ್ಷರು
ಭಾರತೀಯ ವಿದ್ಯಾಭವನ, ಕರ್ನಾಟಕ

**ಎ. ವಿ. ನರಸಿಂಹಮೂರ್ತಿ**
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ



## ಮೂಲ ಸಂಪಾದಕರ ಪ್ರಸ್ತಾವನೆ

ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳು ವಿಶೇಷ ಸಾಫಲ್ಯವನ್ನು ಕಂಡಿವೆ. ಈ ಹನ್ನೊಂದು ವರ್ಷಗಳಲ್ಲಿ ಸುಮಾರು ಒಂದೂಕಾಲು ಮಿಲಿಯನ್ ಪುಸ್ತಕಗಳು ಮಾರಾಟಗೊಂಡಿವೆ. ಆದರೂ ಭವನವು ಆಗಾಗ್ಗೆ ಪ್ರಕಾಶನಗೊಳಿಸುತ್ತಿರುವ ಕಡಿಮೆ ಬೆಲೆಯ ಕೆಲವು ಬಿಡಿ ಪುಸ್ತಕಗಳಿಗೆ ವಿಶೇಷ ಬೇಡಿಕೆ ಇದೆ. ಇದನ್ನು ಪೂರೈಸುವ ದೃಷ್ಟಿಯಿಂದ ಹೊಸ ಒಂದು ರೂಪಾಯಿ ಪುಸ್ತಕಗಳನ್ನು ಹಾಗೂ ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳನ್ನೂ ಒಟ್ಟೊಟ್ಟಿಗೆ ಪ್ರಕಟಿಸಲು ತೀರ್ಮಾನಿಸಿದೆ.

ಈ ಹೊಸ ಒಂದು ರೂಪಾಯಿ ಮಾಲಿಕೆಯ ಪುಸ್ತಕಗಳು, ಇತರ ಮಾಲಿಕೆಯ ಪುಸ್ತಕಗಳಂತೆ ಸಾಫಲ್ಯವನ್ನು ಪಡೆದು ಭಾರತೀಯ ಸಂಸ್ಕೃತಿಯ ಮೌಲ್ಯದಲ್ಲಿ ಆಸಕ್ತಿ ಇರುವವರಿಗೆ ಇಷ್ಟವಾಗಿ, ಹೆಚ್ಚಿನ ಓದುಗರನ್ನು ತಲಪುತ್ತದೆ ಎಂದು ನಾನು ಭಾವಿಸಿದ್ದೇನೆ.

**ಭಾರತೀಯ ವಿದ್ಯಾಭವನ**
ಚೌಪಾಟಿ ರೋಡ್, ಬೊಂಬಾಯಿ–೭
ವಿಜಯದಶಮಿ, ಸೆಪ್ಟೆಂಬರ್ ೨೮, ೧೯೬೩

**ಕೆ. ಎಂ. ಮುನ್ಷಿ**

## ಮೂಲ ಲೇಖಕರ ಮುನ್ನುಡಿ

೧೯೬೩–೬೪ನೆಯ ವರ್ಷದ ಫಾದರ್ ಪಿ ಕಾರ್ತಿ ದತ್ತಿ ಉಪನ್ಯಾಸ ಮಾಲೆಯಲ್ಲಿ ಭಾಷಣ ನೀಡಲು ಮದ್ರಾಸ್ ವಿಶ್ವದ್ಯಾನಿಲಯ ನನ್ನನ್ನು ಆಹ್ವಾನಿಸಿತು. ಪ್ರಸಕ್ತ ಪುಸ್ತಕದ ವಿಷಯವೇ ನನ್ನ ಉಪನ್ಯಾಸಗಳ ವಸ್ತುವಾಗಿತ್ತು.. ಭಾರತೀಯ ಆರ್ಥಿಕ ಚಿಂತನೆಗೆ ಮತ್ತು ನೀತಿಗೆ ಸಂದ ಗಾಂಧೀಜಿಯ ಕೊಡುಗೆಯನ್ನು ವಿವರಿಸಿ, ಮೌಲ್ಯ. ಮಾಪನ ಮಾಡಲು ಈ ಭಾಷಣಗಳಲ್ಲಿ ಪ್ರಯತ್ನಿಸಲಾಗಿದೆ.

ನನ್ನ ಪ್ರಿಯ ಮಿತ್ರರಾದ ಪ್ರೊ. ಪಿ. ಶಂಕರನಾರಾಯಣನ್ ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಅವರ ಉತ್ತೇಜನ ಮತ್ತು ನಿರಂತರ ಆಸಕ್ತಿ ಇಲ್ಲದಿದ್ದರೆ, ಈ ಉಪನ್ಯಾಸಗಳು ಗಾಂಧೀಜಿ ಅರ್ಥಶಾಸ್ತ್ರದಲ್ಲಿ ಆಸಕ್ತರಾದ ಜನರ ವ್ಯಾಪಕವಲಯವನ್ನು ತಲುಪುತ್ತಿರಲಿಲ್ಲ. ನನ್ನ ಭಾಷಣಗಳನ್ನು ಪ್ರಕಟಿಸಲು ಅನುಮತಿಯನ್ನಿತ್ತ ಮದ್ರಾಸ್ ವಿಶ್ವವಿದ್ಯಾನಿಲಯದ ಅಧಿಕಾರೀ ವರ್ಗವನ್ನು ನಾನು ವಂದಿಸಲೇ ಬೇಕು.

ತಮ್ಮ ಜನಪ್ರಿಯ ಗ್ರಂಥಮಾಲೆಯಲ್ಲಿ ಈ ಪುಸ್ತಕವನ್ನು ಪ್ರಕಟಿಸಿದ್ದಕ್ಕಾಗಿ ಭಾರತೀಯ ವಿದ್ಯಾಭವನದ ಕಾರ್ಯ ನಿರ್ವಾಹಕರಿಗೆ ನನ್ನ ಧನ್ಯವಾದಗಳು.

ಮದ್ರಾಸು **ಕೆ. ವಾಸುದೇವನ್**
೧೭–೦೬–೧೯೬೭



## ಪೀಠಿಕೆ

ಯುಗಯುಗಾಂತರದ ದಾರಿದ್ರ್ಯ ಮತ್ತು ಅಜ್ಞಾನಗಳಲ್ಲಿ ಮುಳುಗಿದ್ದ ನಮ್ಮ ಸಾಮಾನ್ಯ ಜನರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸುವ ಸಲುವಾಗಿ ರಾಷ್ಟ್ರ ನೀತಿಯ ನಿರ್ದೇಶನ ನಿಯಮಗಳನ್ನು ಕಾರ್ಯಗತಗೊಳಿಸಲು ಸ್ವಾತಂತ್ರ್ಯ ಬಂದ ಕೂಡಲೇ ಕ್ರಮಗಳನ್ನು ಕೈಗೊಳ್ಳಲಾಯಿತು. 'ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನೊಳಗೊಂಡ ಸಾಮಾಜಿಕ ವ್ಯವಸ್ಥೆಯನ್ನು ಆದಷ್ಟು ಪರಿಣಾಮಕಾರಿಯಾಗಿ ಭದ್ರಪಡಿಸುವ, ರಕ್ಷಿಸುವ ಮೂಲಕ ಜನರ ಕ್ಷೇಮವನ್ನು ಸಾಧಿಸಲು ಸರಕಾರ ಪ್ರಯತ್ನಿಸಬೇಕು ಮತ್ತು ರಾಷ್ಟ್ರಜೀವನದ ಎಲ್ಲಾ ಸಂಸ್ಥೆಗಳ ಗಮನಕ್ಕೆ ತರಬೇಕು' – ನಿರ್ದೇಶನ ನಿಯಮಗಳಲ್ಲಿ ಇದೂ ಒಂದು. ಎಲ್ಲ ಪ್ರಜೆಗಳು, ಗಂಡಸರು ಮತ್ತು ಹೆಂಗಸರು ಬೇಡಿಕೆಗೆ ಸಾಕಾಗುವಷ್ಟು ಸಾಧನಗಳನ್ನು ಸಮಾನವಾಗಿ ಪಡೆಯುವ ಹಕ್ಕನ್ನು ಭದ್ರಗೊಳಿಸುವ ನಿಟ್ಟಿನಲ್ಲಿ ಮುಖ್ಯವಾಗಿ ರಾಜ್ಯ ತನ್ನ ನೀತಿಯನ್ನು ರೂಪಿಸಿಕೊಳ್ಳತಕ್ಕದ್ದೆಂದು ಕಟ್ಟು ಮಾಡಲಾಯಿತು. ಮೇಲೆ ಉದ್ಧರಿಸಿರುವ ನಿರ್ದೇಶನ ನಿಯಮಗಳಲ್ಲಿ ವಿಧಿಸಿರುವ ನೀತಿಯನ್ನು ಕಾರ್ಯಗತಗೊಳಿಸಲು ಇಂಡಿಯಾ ಸರ್ಕಾರ ಕೈಗೊಂಡಿರುವ ಕ್ರಮಗಳ ಸಾಕಾರದ ಅಭಿವ್ಯಕ್ತಿಯೇ ಪಾಂಚವಾರ್ಷಿಕ ಯೋಜನೆಗಳು. ಯೋಜನೆಯ ತಂತ್ರಕೌಶಲ್ಯವೊಂದು ಸಂಕೀರ್ಣಕ್ರಮ, ಏಕೆಂದರೆ ಯೋಜನಾ ಪ್ರಕ್ರಿಯೆಯಲ್ಲಿ ಸೇರಿಕೊಂಡಿರುವ ಆರ್ಥಿಕ ಸಂಗತಿಗಳನ್ನು ಬೆಲೆಕಟ್ಟಲು ಪ್ರಯತ್ನಿಸುವಾಗ, ರಾಜಕೀಯ ಸ್ಥಿಮಿತತೆ, ದೇಶದ ಹವಾಮಾನ ಪರಿಸ್ಥಿತಿ, ಮತ್ತು ಯೋಜನೆಯ ಬಗೆಗಿನ ಜನರ ಮನೋಭಾವ, ಇವೇ ಮೊದಲಾದ ಆರ್ಥಿಕೇತರ ಸಂಗತಿಗಳಿಗೆ ಸಂಬಂಧಿಸಿದಂತೆ ಸಂಭವಿಸುವ ಭೇದಪ್ರಭೇದಗಳ ಕಡೆಗೆ ಗಮನ ಹರಿಸುವುದು ಕಷ್ಟವಾಗುತ್ತದೆ. ಜನಸಂಖ್ಯಾ ಬೆಳವಣಿಗೆಯ ತೀವ್ರ ವೇಗದಿಂದುಂಟಾಗುವ ತುಯ್ತವನ್ನು ಗೆಲ್ಲಲು ಭಾರತೀಯರಾದ ನಾವು ಶೀಘ್ರ ಕೈಗಾರಿಕೀಕರಣ ಅತ್ಯಗತ್ಯವೆಂದು ಯೋಚಿಸಿದೆವು; ಪ್ರಾರಂಭಕಾಲದ ಮುಕ್ಕಿರಿತ ಮತ್ತು ಒತ್ತಡಗಳ ನಂತರ ಆರ್ಥಿಕ ವ್ಯವಸ್ಥೆ ನಿರ್ವಿಘ್ನ ಹಂತದ ಎತ್ತರವನ್ನು ಮುಟ್ಟುತ್ತದೆ ; ಆಗ ದೇಶ ಹಾರಿಕೆ ಹಂತದ ಉಲ್ಲಾಸದ ವಾತಾವರಣ ಸುಖವನ್ನನುಭವಿಸುತ್ತದೆಂದು ಅರ್ಥಶಾಸ್ತ್ರಜ್ಞರು 'ಸ್ವಸಂರಕ್ಷಣಾವೃದ್ಧಿ'ಯೆಂದು ಕರೆಯುವ ಹಾರಿಕೆ ನೆಲಗಟ್ಟಿನ ಮೇಲೆ ಭದ್ರವಾಗಿ ಊರುವುದೆಂದು ನಾವು ಸಂಭ್ರಮಿಸಿದೆವು. ನಾವು ಮೂರು ಪಾಂಚವಾರ್ಷಿಕ ಯೋಜನೆಗಳ ಮೂಲಕ ಹಾದು ಬಂದಿದ್ದೇವೆ ; ಈಗ ನಾಲ್ಕನೇ ಯೋಜನೆಯ ಮೊದಲ ವರ್ಷದಲ್ಲಿದ್ದೇವೆ. ನಾವು ಆಹಾರ ವಲಯದಲ್ಲಿ ತೀಕ್ಷ್ಣಗಂಡಾಂತರವನ್ನು ಎದುರಿಸಿದ್ದೇವೆ; ಈಗಲೂ ಅದು ಮುಂದುವರಿಯುತ್ತಿದೆ; ನಾವು ಕೊಡಬೇಕಾದ ಬಾಕಿಯ ಪರಿಸ್ಥಿತಿ ತುಂಬ ಕಷ್ಟಕ್ಕೀಡಾಗಿದೆ; ಅದರಿಂದಾಗಿ, ನಮ್ಮ ಯೋಜನೆಗಳನ್ನು ನಿರ್ವಿಘ್ನವಾಗಿ ಅಭಿವೃದ್ಧಿಪಡಿಸಲು ಬೇಕಾದ ವಿದೇಶೀಯ ನಾಣ್ಯವನ್ನು ಸಾಕಷ್ಟು ಸಂಪಾದಿಸುತ್ತಿಲ್ಲ. ಇತ್ತೀಚಿನ ದಿನಗಳಲ್ಲಿ ಹತ್ತು ಹಲವು ನಿರಾಶಾದಾಯಕ ಸಂಗತಿಗಳಿಂದ

ಕುಗ್ಗಿ ಹೋಗಿದ್ದೇವೆ; ನಾವು ಚುಕ್ಕಾಣಿ ಕೈವಾರಗಳಿಲ್ಲದೆ ಪಯಣಿಸುತ್ತಿದ್ದೇವೆಂದು ನಮ್ಮಲ್ಲಿ ಬಹುಮಂದಿ ದಂಗಾಗಿದ್ದೇವೆ ; ದಾರಿಯ ಒಂದು ಬದಿಗೆ ನಾವು ನೂಕಲ್ಪಟ್ಟಿದ್ದೇವೆ. ಈಗಾಗಲೇ ಹೃದಯವನ್ನು ಮುಟ್ಟಿ ನೋಡಿಕೊಳ್ಳಲಾಗುತ್ತಿದೆ; ನಮ್ಮ ಮುಂದಿನ ಕಾರ್ಯಗತಿಯನ್ನು ತಿದ್ದಿಕೊಳ್ಳಲು ಆರ್ಥಿಕಾಭಿವೃದ್ಧಿಯ ವಿಷಯದಲ್ಲಿ ಪಾಶ್ಚಾತ್ಯರಿಂದ ಕಲಿತ ಪಾಠಗಳನ್ನು ಮತ್ತು ಗಾಂಧೀಜಿ ಈ ಮೊದಲೇ ಪ್ರತಿಪಾದಿಸಿರುವ ಕಾರ್ಯಕ್ರಮಗಳನ್ನು ಗಮನಕ್ಕೆ ತೆಗೆದುಕೊಳ್ಳುತ್ತೇವೆಂದು ನಾವು ನಂಬಿದ್ದೇವೆ.

ದೇಶ ತೀವ್ರ ಕೈಗಾರಿಕೀಕರಣದ ಭಾರಿ ಕಾರ್ಯಕ್ರಮವನ್ನು ಅನುಸರಿಸದಿದ್ದರೆ, ದೇಶಕ್ಕೆ ಭವಿಷ್ಯವಿಲ್ಲವೆಂಬ ಅಭಿಪ್ರಾಯ ಎಲ್ಲೆಲ್ಲೂ ಹಬ್ಬಿದೆ. ತಮ್ಮವೇ ಹಿತಾಸಕ್ತಿಗಳಿಂದ ಪ್ರಭಾವಿತವಾದ ವಿದೇಶೀಯ ಅರ್ಥಶಾಸ್ತ್ರಜ್ಞರು ರೂಪಿಸಿದ ಆರ್ಥಿಕಾಭಿವೃದ್ಧಿಯ ಕೌಶಲ್ಯ ಇಲ್ಲಿಯ ಆರ್ಥಿಕ ವ್ಯವಸ್ಥೆಯನ್ನು ಪ್ರಭಾವಿಸುತ್ತಿದೆ. ವಿದೇಶಿಯ ನೆರವಿನ ನಾಲೆಯ ಮೂಲಕ ಪಾಶ್ಚಾತ್ಯ ಯಂತ್ರ ವಿಜ್ಞಾನ ಸುಲಭವಾಗಿ ದೊರಕುತ್ತದೆಂದು ತಿಳಿಸುವ ವಿಶ್ಲೇಷಣೆಯ ಫಲ ಕೈಗಾರಿಕೀಕರಣದ ಮೋಹಕಗೊಳಿಸುವ ಮನವಿ; ಜನಸಂಖ್ಯೆಯ ಒತ್ತಡವನ್ನು ತಡೆಯಲು ಆಧುನಿಕ ಯಂತ್ರವಿಜ್ಞಾನವನ್ನು ಬಳಸಿಕೊಳ್ಳಬೇಕೆಂಬ ಹಕ್ಕಿನ ಒತ್ತಡವೂ ಇದ್ದೇ ಇದೆ. ಕೈಗಾರಿಕೀಕರಣದ ಫಲದ ರುಚಿಯನ್ನನುಭವಿಸಿದ ನಂತರ, ಈ ತರ್ಕ ಸರಣಿಯ ಬಗ್ಗೆ ಕೆಲವು ಸಂದೇಹಗಳನ್ನು ವ್ಯಕ್ತಪಡಿಸುವ ಬಹುಮಂದಿ ಪಾಶ್ಚಾತ್ಯರಲ್ಲಿಯೂ ಇದ್ದಾರೆ. ಉದಾಹರಣೆಗೆ ಪ್ರೊ. ವಿಲ್‌ಹೆಲ್ಮ್ ರೋಪ್ಕೆ ಚಿಂತನೆ ಹೀಗಿದೆ: 'ಈ ದೇಶಗಳ ಆರ್ಥಿಕ ವ್ಯವಸ್ಥೆಯನ್ನು, ಅದನ್ನು ಆವರಿಸಿರುವ ಮತ್ತು ಬೆಂಬಲಿಸುವ ಸಾಮಾಜಿಕ ವ್ಯವಸ್ಥೆಯೊಡನೆ, ತನ್ನ ಸ್ಥಾನಬಲದ ಮೇಲೆ ನಿಂತಿರುವ ಪಿರಮಿಡ್ಡಿನೊಡನೆ ಹೋಲಿಸಬಹುದಾಗಿದೆ. ಕಲ್ಪನೆಯನ್ನು ಮೀರಿದ ಮನುಷ್ಯನ ಉದ್ಯೋಗವದು; ಅದು ಹೆಚ್ಚು ಕೃತಕವೂ ಜಟಿಲವೂ ಆದದ್ದು; ಅದು ಒಟ್ಟಿನಲ್ಲಿ ಯಾವುದಾದರೂ ಒಂದು ಭಾಗದ ವೈಫಲ್ಯದಿಂದ ದುರ್ಬಲವಾಗುವುದಾದರೆ, ವೈಫಲ್ಯವೇ ಕಾರಣವಾಗಿ ಸರಳವೂ ಸದೃಢವೂ ಆದ ವ್ಯವಸ್ಥೆ ಯಾವ ತೊಂದರೆಯೂ ಇಲ್ಲದೆ ಉಳಿಯಬಹುದು. ಲಕ್ಷಾಂತರ ಜನರ ಯೋಗಕ್ಷೇಮ ಮತ್ತು ಅಸ್ತಿತ್ವಗಳು ಈ ಭಾರಿ ಯಂತ್ರ ರಚನೆಯ ಕ್ರಮಬದ್ಧ ಕ್ರಿಯೆಯನ್ನವಲಂಬಿಸಿವೆ. ಆದರೆ ಸಾರ್ವಜನಿಕ ಹಕ್ಕುಮಂಡನೆ ಮತ್ತು ಅಭಿಪ್ರಾಯಗಳಿಂದ ಅದೇ ಜನ ವ್ಯವಸ್ಥೆಯ ಗೊತ್ತುಪಾಡುಗಳನ್ನು, ನಿಶ್ಚಯತೆಯನ್ನು ಮತ್ತು ಗಂಭೀರ ಉದ್ದೇಶಗಳನ್ನು ಹಾನಿಗೊಳಿಸುತ್ತಾರೆ. ಅವುಗಳಿಲ್ಲದೆ ಮಹತ್ತರವಾದ ತಾಂತ್ರಿಕ ಮತ್ತು ಸಂಘಟನ ಪ್ರಗತಿ ನಿಷ್ಪ್ರಯೋಜಕವಾಗುತ್ತದೆ.[೧] ಈ ವಿಷಯವನ್ನು ಕುರಿತು ಪರಗ್ವೆಯ ಬಾಸ್ಕೊ ನೆಡೆಲ್‌ಕೊವಿಕ್ ವ್ಯಕ್ತಪಡಿಸಿರುವ ಮತ್ತೊಂದು ಅಭಿಪ್ರಾಯ ಹೀಗಿದೆ; 'ವೇಗವರ್ಧಿತ ಕೈಗಾರಿಕೀಕರಣದ ಪರಸ್ಪರ ಅನುಕೂಲಗಳು ಏನೇ ಇರಲಿ. ಪೂರ್ಣೋದ್ಯೋಗದ ನಿರೀಕ್ಷೆ ಸಾಧ್ಯವಾಗದು, ಅಷ್ಟೇ ಅಲ್ಲ, ಬಡತನದ ನಿವಾರಣೆಗಾಗಿ ಬಡದೇಶವೊಂದಕ್ಕೆ ಸಹಾಯ ಮಾಡಲು ಗಣನೀಯ ಕೊಡುಗೆಯನ್ನು ನೀಡುವುದು ಸಹ ಸಾಧ್ಯವಾಗದು?[೨]

ಭಾರತದಲ್ಲಿ ವೇಗದ ಕೈಗಾರಿಕೀಕರಣ ಕಾರ್ಯಕ್ರಮ ಕೇಂದ್ರೀಕೃತ ಯೋಜನೆಗೆಡೆ

೧. *Humane Economy,* P 45.
೨. Society for International Development Journal, December 1965.



ಮಾಡಿಕೊಟ್ಟಿದೆ. ಇನ್ನೂ ಸಂಪೂರ್ಣವಾಗಿ ಗ್ರಹಿಕೆಯಾಗದ ಮತ್ತೊಂದು ಗಂಭೀರ ಗಂಡಾಂತರವೆಂದರೆ ದೇಶದ ಕೆಲವು ಪ್ರದೇಶಗಳಲ್ಲಿ ನಡೆಯುತ್ತಿರುವ ಶೀಘ್ರ ನಗರೀಕರಣ. ಕೇಂದ್ರೀಕೃತ ಯೋಜನೆಯ ಸಮಸ್ಯೆಯನ್ನು ಕುರಿತು ಯೋಚಿಸುವ ಮುನ್ನ ನಗರೀಕರಣದ ಕೆಡಕುಗಳ ಬಗ್ಗೆ ಕೆಲವು ಮಾತು ಹೇಳಬಹುದು. ಇದು ಯಾವಾಗಲೂ ಇದ್ದದ್ದೇ. ದೇಶವೊಂದು ಶೀಘ್ರಗತಿಯ ಕೈಗಾರೀಕರಣಕ್ಕೆ ತೆರೆದುಕೊಂಡಾಗ, ದೊಡ್ಡ ಕೈಗಾರಿಕೆಗಳಿಗೆ ಅವಕಾಶ ಕೊಡುವ ಕೆಲವು ಪ್ರದೇಶಗಳು ಜನರ ನೂಕು ನುಗ್ಗಲು, ಮನೆಗಳ ಅಭಾವ, ಮತ್ತು ಶೀಘ್ರಗತಿಯ ಕೈಗಾರಿಕೀಕರಣ ಯೋಜನೆಯನ್ನು ಪ್ರಾರಂಭಿಸುವ ಮುನ್ನ ಸಾಮಾಜಿಕ ಖರ್ಚುಗಳನ್ನು ಪೂರ್ಣವಾಗಿ ಲೆಕ್ಕ ಹಾಕದ ಆರೋಗ್ಯ ಪಾಲನೆಯ ಸಮಸ್ಯೆ ಇತ್ಯಾದಿ ವಿವಿಧ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ನಗರೀಕರಣ ಆರ್ಥಿಕ ಪ್ರಗತಿಯ ಮೇಲೆ ಲಾಭದಾಯಕ ಪ್ರಭಾವವನ್ನು ಬೀರುತ್ತದೆಂಬ ಅಭಿಪ್ರಾಯವೂ ಕೆಲವು ಕಡೆಯಿದೆ. 'ಸಮಕಾಲೀನ ಭಾರತದಲ್ಲಿ ನಗರೀಕರಣ ಪ್ರವೃತ್ತಿ ಆಕಾರ ಸ್ವರೂಪಗಳೆರಡರಲ್ಲಿಯೂ ಅಭಿವೃದ್ಧಿಯನ್ನು ತೀವ್ರಗೊಳಿಸುವ ಬದಲಾಗಿ ಅಡ್ಡಿಯೊಡ್ಡುವ ಸಂಗತಿಯಾಗಿ ಕಾಣುತ್ತದೆ'[೩] ಎಂದು ಒಂದು ನಿರ್ಣಯಕ್ಕೆ ಬಂದಿದ್ದಾರೆ. ಆದರೆ ನಗರೀಕರಣದ ಆರ್ಥಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಕೆಲವು ವಿದ್ವಾಂಸರು ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳ ಆರ್ಥಿಕ ಯೋಜನೆ ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿ ಒಬ್ಬ ವ್ಯಕ್ತಿ ಪಾಲ್ಗೊಳ್ಳುವಂತೆ ಏರ್ಪಾಡು ಮಾಡಲು ಹೆಚ್ಚು ಅವಕಾಶಗಳಿವೆಯೆಂದು ಇನ್ನೂ ಮುಂದುವರಿದು ಅವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.[೪] ಪಾಶ್ಚಾತ್ಯ ದೇಶಗಳ ಆಧುನಿಕ ಜನಸಮೂಹದಲ್ಲಿ ನಗರೀಕರಣದ ಬೆದರಿಕೆ ಹಾನಿಕಾರಕ ಪರಿಣಾಮಗಳು ಸ್ಪಷ್ಟವಾಗಿ ಕಾಣಿಸುತ್ತವೆ. ವಿಲ್‌ಹೆಲ್ಮ್ ರೋಪ್ಕೆಯವರ ಮಾತಿನಲ್ಲಿ 'ನಗರೀಕರಣ, ಕೈಗಾರಿಕೀಕರಣ ಮತ್ತು ಸಮಾಜೀಕರಣಗಳು ಕೆಳವರ್ಗಗಳ ಸಮಾಜದ ನಾಶಕ್ಕೆ ಮತ್ತು ಸಾಮಾಜಿಕ ಧೂಳಿಯ ಬೋಗುಣಿಯ ಪರಿವರ್ತನೆಯ ಕಡೆಗೆ ಸೆಳೆಯುವ ಪೂರ್ಣ ಪ್ರಕ್ರಮದ ವಿಶೇಷ ಮುಖಗಳಾಗಿವೆ.' ಅಲ್ಲಿ ತೊಡಗಿಸಿರುವ ದೊಡ್ಡ ಮೊತ್ತದ ಸಾಮಾಜಿಕ ಖರ್ಚನ್ನು ಲೆಕ್ಕಹಾಕಲೇ ಇಲ್ಲ; ಹಾಗೂ ಸ್ಥೂಲ ರಾಷ್ಟ್ರೀಯ ಉತ್ಪತ್ತಿಯ ಸಾಲದ ಲೆಕ್ಕಕ್ಕೇ ಜಮಾ ಮಾಡಿಲ್ಲ. ಇದನ್ನೆಲ್ಲ ಗಮನಿಸಿದ್ದಾದರೆ, ನಿಜವಾದ ಪ್ರಗತಿಯನ್ನು ಸುಲಭವಾಗಿ ಅರಿಯಬಹುದು. ಕೈಗಾರಿಕೀಕರಣವೆಂದು ಕರೆಯಲ್ಪಡುವ ಯಂತ್ರೋಪಕರಣ ತಂತ್ರದಿಂದ ಮಾತ್ರವೇ ಪ್ರಗತಿ ಸೂಚಕವಾದ ಮಾನವ ಘನತೆಯ ರಕ್ಷಣೆಯನ್ನು ಸಾಧಿಸಲಾಗದು.

ತೀವ್ರ ಕೈಗಾರಿಕೀಕರಣ ಕಾರ್ಯಕ್ರಮದ ಸಂದರ್ಭದಲ್ಲಿ ಕೇಂದ್ರೀಕೃತ ಯೋಜನೆ ಜರೂರು ಅಗತ್ಯವೆಂದು  ಮೇಲೆ ಹೇಳಲಾಯಿತು. ನಗರೀಕರಣವೊಂದೆ ಕಾರಣವಾಗಿ ಮೈದೋರುವ ಜವಾಬ್ದಾರಿಯ ಆಧಾರದ ಮೇಲೆ ಕೂಡ, ಭಾರತದಲ್ಲಿರುವ ನಾವು ವೇಗದ ನಗರೀಕರಣ ಮಾರ್ಗವನ್ನು ತ್ಯಜಿಸಬೇಕಾಗಿದೆ. ಇದನ್ನೊಪ್ಪುವುದಾದರೆ, ನಮ್ಮ ಆರ್ಥಿಕಾಭಿವೃದ್ಧಿಯ ಕಾರ್ಯಕ್ರಮ ವಿಕೇಂದ್ರೀಕೃತ ಯೋಜನೆಯನ್ನನುಸರಿಸಬೇಕು. ಭಾರತದಲ್ಲಿ ಕೇಂದ್ರೀಕೃತ ಯೋಜನೆ ಹೊಸ ಮಾದರಿಯ ಆನುವಂಶೀಯತೆಯನ್ನು ಪಿಚಕಾರಿಸಿದೆ ; ಯೋಜನೆ ಮತ್ತು ಯೋಜನೆಯ ಕಾರ್ಯರೂಪ ಪ್ರತ್ಯೇಕವೆಂದರಿಯದ

೩. F.V. Shanti Tangri, *India's Urban Future,* P. 192.
೪. Op. Cit, P 210

ಗಲಿಬಿಲಿಯಿಂದ ವಿವಿಧ ಭಾಗಗಳ ಜನರು ಕಾರ್ಯಕ್ರಮ ಮಂಜೂರಾತಿಗೆ ಒತ್ತಾಯಿಸುತ್ತಾರೆ. ಇಂದು ಭಾರತದಲ್ಲಿ ದಿನ ದಿನವೂ ಏರುತ್ತಿರುವ ಸಾಮಾಜಿಕ ಗಾಸಿಗಳ ದುಃಖದ ದೃಶ್ಯವನ್ನು ನಾವು ಕಾಣುತ್ತೇವೆ. ರಾಷ್ಟ್ರ ನೀತಿಯ ನಿರ್ದೇಶನ ನಿಯಮಗಳಲ್ಲಿ ಸ್ಪಷ್ಟಪಡಿಸಿರುವ ಆರ್ಥಿಕೋದ್ದೇಶಗಳನ್ನು ಈಡೇರಿಸಿಕೊಳ್ಳುವ ಬದಲು, ಈ ಹೊತ್ತಿನ ಮಾದರಿಯ ಆರ್ಥಿಕ ಯೋಜನೆ ಭಾಷಾವಾರು ಪ್ರಾಂತಗಳಿಗೆ ಸೀಮಿತವಾದ ಆರ್ಥಿಕ ಪ್ರಾಂತೀಯತೆಯಲ್ಲಿ ಅನಾರೋಗ್ಯಕರವಾದ ಹೊಸ ಪ್ರವೃತ್ತಿಯನ್ನು ಬರಿಸಿದೆ. ನಮ್ಮ ಯೋಜನೆಯ ವ್ಯೂಹೋಪಾಯದ ಬಗ್ಗೆ ಮರುಚಿಂತನೆ ನಡೆಸುವ ಅಗತ್ಯದ ಕಡೆಗೆ ಈ ಪ್ರವೃತ್ತಿಗಳು ಬೆರಳು ತೋರಿಸುತ್ತವೆ. ಈ ವ್ಯೂಹೋಪಾಯ ಯೋಜನೆಯು ಆಕಾರವನ್ನು ಗಮನಿಸದೆ, ವಿಕೇಂದ್ರೀಕರಣದ ಮಾರ್ಗದರ್ಶಿಯಾಗಬೇಕಾಗಿದೆ. ಈ ವಿಷಯದಲ್ಲಿ ಗಾಂಧೀಜಿ ನಮ್ಮ ದೇಶದ ಆರ್ಥಿಕ ಪುನರುಜ್ಜೀವನಕ್ಕಾಗಿ ತೋರಿದ ಮಾರ್ಗವನ್ನು ಸ್ವೀಕರಿಸುವುದರಿಂದ ವ್ಯಾಪ್ತಿ ಅಧಿಕವಾಗುತ್ತದೆ.

ಮಹಾತ್ಮಗಾಂಧಿಯವರ ದೃಷ್ಟಿಯಲ್ಲಿ ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳು ಆರ್ಥಿಕ ಸ್ವಾತಂತ್ರ್ಯದ ಮತ್ತು ಸಮಾನತೆಯ ಸಂಕೇತವಾಗಿದ್ದುವು. ಜೀವನದ ಸಾಮಾನ್ಯ ಅಗತ್ಯಗಳನ್ನು ಹಳ್ಳಿಗರ ಶ್ರಮದ ಮೂಲಕ ಪೂರೈಸಿಕೊಳ್ಳುವುದೇ ನಿಜವಾದ ಆರ್ಥಿಕ ಸ್ವಾತಂತ್ರ್ಯವೆಂದು ಗಾಂಧೀಜಿ ಭಾವಿಸಿದರು. ತಾವು ಉತ್ಪಾದನೆಗೆ ತೊಡಗಲು ಯಾವುದೇ ಕ್ಷೇತ್ರವಿಲ್ಲದ ಅಪಾರ ಸಂಖ್ಯೆಯ ಹಳ್ಳಿಗರು ಉತ್ಪಾದನೆಯ ವಿಕೇಂದ್ರೀಕರಣ ಮತ್ತು ಜೀವನದ ಅತ್ಯಗತ್ಯ ವಸ್ತುಗಳ ಹಂಚಿಕೆಯಲ್ಲಿ ತೊಡಗಿಕೊಳ್ಳಬಹುದೆಂದವರು ಮನಗಂಡಿದ್ದರು. ೧೯೬೦–೬೧ರಲ್ಲಿ ೧೭೩.೯ ಮಿಲಿಯ ಒಟ್ಟಂದಾಜಿನ ಶ್ರಮಜೀವಿಗಳ ದಳದಲ್ಲಿ ೧೨೦ ಮಿಲಿಯ ಜನರನ್ನು ಗ್ರಾಮೀಣ ಶ್ರಮಿಕರ ದಳಗಳೆಂದು ಗಣಿಸಬಹುದು. ಕೃಷಿಕ್ರಾಂತಿಯನ್ನು ಕಾರ್ಯಗತಗೊಳಿಸುವ ಒಳ್ಳೆಯ ಉದ್ದೇಶವಿರುವುದಾದರೂ, ಬೆಳೆಯುತ್ತಿರುವ ಗ್ರಾಮೀಣ ಶ್ರಮಿಕ ದಳವನ್ನು ಪೂರ್ತಿ ವ್ಯವಸಾಯದಲ್ಲಿ ತೊಡಗಿಸಲು ಸಾಧ್ಯವಾಗುವುದಿಲ್ಲ ; ೧೯೭೫–೭೬ರ ಹೊತ್ತಿಗೆ ನೌಕರಿಗಾಗಿ ಹುಡುಕಾಟ ನಡೆಸುವ ಅಂದಾಜಿನ ೭೦.೬ ಮಿಲಿಯ ಹೆಚ್ಚಿನ ಶ್ರಮಿಕ ದಳಕ್ಕೆ ಮಾತ್ರವಲ್ಲ, ನಮ್ಮ ಹಳ್ಳಿಗಳಲ್ಲೀಗ ವ್ಯವಸಾಯ ಕ್ಷೇತ್ರದಲ್ಲಿ ಕೆಲಸಕ್ಕಾಗಿ ಪ್ರಯತ್ನಿಸುತ್ತಿರುವ ೧೨೦ ಮಿಲಿಯ ಕೆಲಸಗಾರರ ಒಂದು ಭಾಗವನ್ನು ನೇಮಿಸಿಕೊಳ್ಳಲು ಪರ್ಯಾಯವಾಗಿ ಕೃಷಿಯೇತರ ಉದ್ಯೋಗವನ್ನೊದಗಿಸಬೇಕೆಂಬುದು ಸಮಂಜಸವಾಗಿದೆ. ಕೃಷಿ ಉತ್ಪಾದನೆಯಲ್ಲಿ ಪೂರ್ಣ ವೇಳೆಯ ಕೆಲಸದಲ್ಲಿ ತೊಡಗಿಸಲು ಅರ್ಹವಾಗಿರುವ ಗ್ರಾಮೀಣ ಶ್ರಮಿಕರ ಭಾಗವನ್ನು ಸ್ಥೂಲವಾಗಿಯಾದರೂ ಅಂದಾಜು ಮಾಡಲು ಸಾಧ್ಯವಾಗುವುದಿಲ್ಲ ; ಆದರೆ ಕೃಷಿಯೇತರ ಉದ್ಯೋಗಗಳನ್ನು ಹುಡುಕುತ್ತಿರುವ ಗ್ರಾಮೀಣ ಶ್ರಮಿಕರ ದಳ ಬೆಳೆಯುತ್ತಿರುವ ಸಮುದಾಯೆಂದು ಖಾತ್ರಿಯಾಗಿ ಗಣನೆಗೆ ತೆಗೆದುಕೊಳ್ಳಬಹುದು. ಗ್ರಾಮೀಣ ಕೈಗಾರಿಕೆಗಳ ಯೋಜನೆ ಸರಿಯಾದ ದಿಕ್ಕಿನಲ್ಲಿ ಮೊದಲ ಹೆಜ್ಜೆಯೆಂಬ ಸಂಗತಿ ಇಂಥ ಪರಿಸ್ಥಿತಿಯಿಂದ ವ್ಯಕ್ತವಾಗುತ್ತದೆ.

ಖಾದಿ ಮತ್ತು ಗ್ರಾಮೀಣ ಕೈಗಾರಿಕಾ ಆಯೋಗದ ರಚನೆಯ ಮೂಲಕ ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳ ಉತ್ತೇಜನ ನೀಡಲು ಕೆಲವು ಹೊಂದಾಣಿಕೆಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಖಾದಿಯ ಉತ್ಪಾದನೆಯಲ್ಲದೆ, ಗ್ರಾಮೀಣ ಕೈಗಾರಿಕೆ



ಎಂಬ ಪದ ಹಳ್ಳಿಯೆಣ್ಣೆ, ಹಳ್ಳಿ ತೊಗಲು, ಗುಡಿಸಲು ಬೆಂಕಿ ಕಡ್ಡಿ, ಬೆಲ್ಲ ಮತ್ತು ಖಂಡಸಾರಿ ಸಕ್ಕರೆ, ಅಖಾದ್ಯ ಮತ್ತು ಕಳಪೆ ವಸ್ತುಗಳು, ಕೈಯಲ್ಲಿ ಮಾಡಿದ ಕಾಗದ, ಹಳ್ಳಿಯ ಮಣ್ಣಿನ ಪಾತ್ರೆಗಳು, ಮರಗೆಲಸ, ಕಮ್ಮಾರಿಕೆ ಇತ್ಯಾದಿ ಉದ್ಯೋಗಗಳನ್ನೊಳಗೊಂಡಿದೆ. ೧೯೬೪–೧೯೬೫ರಲ್ಲಿ ಖಾದಿ ಉದ್ಯೋಗ ೨.೩೫ ಲಕ್ಷ ಪೂರ್ಣ ವೇಳೆಯ ಮತ್ತು ೧೬.೭೯ ಲಕ್ಷ ಒಪ್ಪೊತ್ತಿನ ಜನರಿಗೆ ಉದ್ಯೋಗ ಒದಗಿಸಿತು. ಅವರಿಗೆ ವಿಲೇವಾರಿ ಮಾಡಿದ ಕೂಲಿ ೧೩.೬೨ ಕೋಟಿ ರೂಪಾಯಿ. ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳಲ್ಲಿ ನೇಮಕಗೊಂಡ ಒಟ್ಟು ಶ್ರಮಿಕರಲ್ಲಿ ಪೂರ್ಣವೇಳೆಯವರು ೩.೯೨ ಲಕ್ಷ ಮತ್ತು ಒಪ್ಪೊತ್ತಿನವರು ೨೫.೩೮ ಲಕ್ಷ. ಒಪ್ಪೊತ್ತಿನ ಮತ್ತು ಪೂರ್ಣವೇಳೆಯ ಕಾರ್ಮಿಕರಿಗೆ ಸಲ್ಲಿಸಿದ ಒಟ್ಟು ಮಜೂರಿ ೨೩.೯೨ ಲಕ್ಷಗಳು. ಇಂದು ಗ್ರಾಮೀಣ ಪ್ರದೇಶದಲ್ಲಿರುವ ೧೩೦ ಮಿಲಿಯ ಒಟ್ಟು ಕಾರ್ಮಿಕರನ್ನು ಗಣನೆಗೆ ತೆಗೆದುಕೊಂಡರೆ, ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳು ನೀಡಿರುವ ಉದ್ಯೋಗ ಕಡಿಮೆಯೆಂದೇ ತೋರಬಹುದು. ಆದರೆ ಗ್ರಾಮೀಣ ನಿರುದ್ಯೋಗವನ್ನು ಪರಿಹರಿಸುವ ಯಾವುದಾದರೂ ಬೇರೆ ಪರ್ಯಾಯದ ಸಂದರ್ಭದಲ್ಲಿ ಅದನ್ನು ನೋಡುವುದೇ ಸರಿಯಾದ ಯಥಾ ದೃಷ್ಟಿ. ಸದ್ಯದಲ್ಲಿ ಅಂಥಾದ್ದು ಒಂದೂ ಇಲ್ಲ. ಮೇಲ್ಕಂಡ ಉದ್ಯೋಗಗಳಲ್ಲಿ ಗ್ರಾಮೀಣ ಕಾರ್ಮಿಕರಿಗೆ ಕೊಡುವ ಮಜೂರಿಗಳ ಜೊತೆಗೆ, ಗ್ರಾಮೀಣ ಪ್ರದೇಶದಲ್ಲಿಯೇ ಅಲ್ಲಿಯ ಕಾರ್ಮಿಕರನ್ನು ಇಡದಿದ್ದರೆ, ನಗರೀಕರಣದ ಪ್ರಯುಕ್ತ ಹೆಚ್ಚುತ್ತಿರುವ ಸಾಮಾಜಿಕ ವೆಚ್ಚವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಗ್ರಾಮೀಣ ಜನರನ್ನು ಮೂಲೋತ್ಪಾಟನೆ ಮಾಡದೆ, ಅವರನ್ನು ನಗರದ ಬೀಳುಭೂಮಿಗೆಸೆಯದೆ, ಅವರ ಅಲ್ಪಾದಾಯಕ್ಕೆ ಕೆಲವು ಕಾಸುಗಳನ್ನು ಸೇರಿಸುವ ಪ್ರಕ್ರಿಯೆಯ ಮುಂದುವರಿಕೆ ಯೋಗ್ಯವಾದದ್ದು ; ಈ ನಿಟ್ಟಿನಲ್ಲಿ ಅಪರಿಮಿತ ಅವಕಾಶವಿದ್ದೇ ಇರುತ್ತದೆ.

* * * *

**Blank Page**



## ಪರಿವಿಡಿ


| | |
|---|---|
| ಮೊದಲ ಮಾತು | v |
| ಶುಭಾಕಾಂಕ್ಷೆ | vi |
| ಪ್ರಾಸ್ತಾವಿಕ ನುಡಿ | viii |
| ಪೀಠಿಕೆ | x |
| ಅರಿಕೆ | xvi |
| ಮೂಲ ಸಂಪಾದಕರ ಪ್ರಸ್ತಾವನೆ | xvii |
| ಮೂಲ ಲೇಖಕರ ಮುನ್ನುಡಿ | xviiI |
| ಮೂಲ ಲೇಖಕರ ಪೀಠಿಕೆ | xix |
| ೧. ಗಾಂಧೀಜಿ ಆರ್ಥಿಕ ವಿಚಾರಧಾರೆ | ೧ |
| ೨. ಕೈಗಾರಿಕೀಕರಣ ಮತ್ತು ಯಂತ್ರೋಪಕರಣಗಳ ಬಗ್ಗೆ ಗಾಂಧೀಜಿಯ ಮನೋಭಾವ | ೧೯ |
| ೩. ಗ್ರಾಮೀಣ ಚಳುವಳಿ | ೩೨ |
| ೪. ಹಂಚಿಕೆಯ ಸಮಸ್ಯೆ | ೩೮ |
| ೫. ವೆಚ್ಚ | ೪೫ |
| ೬. ಶ್ರಮಿಕರ ಸಮಸ್ಯೆಗಳು | ೪೭ |
| ೭. ಆಹಾರ ಸಮಸ್ಯೆ | ೫೧ |
| ೮. ಸರ್ವೋದಯ | ೫೨ |
| ೯. ಗಾಂಧೀಜಿ ಅರ್ಥಶಾಸ್ತ್ರ ; ಸಮೀಕ್ಷೆ ಮತ್ತು ಮೌಲ್ಯ ನಿರ್ಣಯ | ೫೫ |

Blank Page



# ಗಾಂಧೀಜಿ ಅರ್ಥಶಾಸ್ತ್ರ

# ೧. ಗಾಂಧೀಜಿ ಆರ್ಥಿಕ ವಿಚಾರಧಾರೆ

೧೯೬೩ನೆಯ ಇಸವಿ ಡಿಸೆಂಬರ್ ತಿಂಗಳಲ್ಲಿ ಪ್ರಧಾನಿ ನೆಹ್ರೂ ಲೋಕ ಸಭೆಯ ಅಧಿವೇಶನದಲ್ಲಿ ಮಾತಾಡುತ್ತ ಹೇಳಿರುವ ಮಾತುಗಳಲ್ಲಿ ಹುರುಳಿಲ್ಲದಿಲ್ಲ: "ನಮ್ಮ ದೇಶದ ಬಹುಪಾಲು ಜನರ ಬದುಕು ಸ್ವಲ್ಪಮಟ್ಟಿಗೆ ಉತ್ತಮಗೊಂಡಿರುವ ಬಗ್ಗೆ ಪುಷ್ಟಿಕರವಾದ ಆಹಾರವನ್ನು, ಹೆಚ್ಚು ಬಟ್ಟೆಗಳನ್ನು ಪಡೆದಿರುವ ಬಗ್ಗೆ ನನಗೆ ವಿಶ್ವಾಸವಿದ್ದರೂ, ಯೋಜನೆಯಿಂದ ಬಹುಜನರಿಗೆ ಪ್ರಯೋಜನವಾಗಲಿಲ್ಲವೆಂಬ, ಅವರ ಬಡತನ ಪಾತಾಳಕ್ಕಿಳಿದಿದೆಯೆಂಬ, ಹಾಗೆಯೇ ತುಂಬ ನೋವುಂಟು ಮಾಡಿದೆಯೆಂಬ ಸಂಗತಿ ನನಗೆ ತುಂಬ ವ್ಯಥೆಯನ್ನುಂಟುಮಾಡಿದೆ. ಈ ಸಮಸ್ಯೆಯನ್ನು ಪರಿಹರಿಸಲು ಸೂಕ್ತ ವಿಧಾನವನ್ನು ಕಂಡುಹಿಡಿಯಲು ಯೋಚಿಸುತ್ತಿದ್ದೇನೆ. ಮಹಾತ್ಮ ಗಾಂಧಿಯವರ ಮಾರ್ಗದ ಬಗ್ಗೆ ಹೆಚ್ಚು ಹೆಚ್ಚು ಚಿಂತಿಸುತ್ತಿದ್ದೇನೆ."[೧] ಎಂದವರು ಮಾತು ಮುಂದುವರಿಸಿದರು. ಆರ್ಥಿಕ ವಲಯಕ್ಕೆ ಸಂಬಂಧಿಸಿದ ಗಾಂಧಿತಂತ್ರವನ್ನು ಹೊಸದಾಗಿ ಪರ್ಯಾಲೋಚಿಸಬಾರದೇಕೆ ಎಂಬ ಪ್ರಶ್ನೆ ನೆಹ್ರೂ ಅವರ ಮಾತಿನಿಂದ ಉದ್ಭವಿಸುತ್ತದೆ. ಈ ರೀತಿ ಆಲೋಚನೆ ಮಾಡುವವರು ನೆಹ್ರೂ ಒಬ್ಬರೇ ಅಲ್ಲ. ಅನಭಿವೃದ್ಧ ದೇಶಗಳಲ್ಲಿ ಸಾಮಾನ್ಯ ಜನತೆ ಸಾಧಿಸಬೇಕಾದ ಭೌತಿಕ ಪ್ರಗತಿಯ ಸಂಶಯಾತ್ಮಕವಾದ ಮಟ್ಟದ ಗುರಿಯ ಕಡೆಗೆ ಗಮನವನ್ನು ಸೆಳೆಯುತ್ತ ಅಂತರರಾಷ್ಟ್ರೀಯ ಖ್ಯಾತಿಯ ಸುಪ್ರಸಿದ್ಧ ಅರ್ಥಶಾಸ್ತ್ರಜ್ಞ ಡಾ. ರೋಪ್ಕೆ 'ಗಾಂಧಿಯ ಮಾನವೀಯತೆಯ ವಿವೇಕವನ್ನು ಬಿಟ್ಟು, ಭೌತಿಕ ಸಮಾಜವಾದವನ್ನು ಭಾರತ ಅನುಸರಿಸುವಂತೆ ತೋರುವ ಸಂಗತಿ ವಿಷಾದನೀಯ' ಎಂದು[೨] ನುಡಿದದ್ದುಂಟು. ಈ ಸಲಹೆಗಳು ಬಳಲಿದ ಮನಸ್ಸುಗಳ ಆಕಸ್ಮಿಕ ಟೀಕೆಗಳಲ್ಲ; ಆದರೆ ಭಾರತೀಯ ಆರ್ಥಿಕ ವ್ಯವಸ್ಥೆಯ ಮೇಲ್ಮೈಯಲ್ಲಿ ಕಾಣುವ ಮತ್ತು ದೇಶದ ನಿತ್ಯದಾರಿದ್ರ್ಯವನ್ನು ತೀವ್ರಗೊಳಿಸುವ ಕೆಲವು ತಿರಿಚುನುಲುಚುಗಳಿಂದ ಪಾರಾಗಿ ಪರಿಹಾರದ ಕಡೆಗೊಯ್ಯುವ ಮಾರ್ಗವನ್ನವು ತೋರಿಸುತ್ತವೆ.

ಗಾಂಧಿ ಅರ್ಥಶಾಸ್ತ್ರದ ವಿವರಗಳನ್ನು ಪರಿಶೀಲಿಸಲು ಮತ್ತು ಇಂದಿನ

---

೧. Speech delivered in Lok Sabha on 11th Dec. 1963.
೨. Wilhelm Ropke, *Humane Economy,* p.113.

ಆರ್ಥಿಕ ಪ್ರಗತಿಯ ಕಾರ್ಯಕ್ರಮಕ್ಕೆ ಅವುಗಳ ಪ್ರಸ್ತುತತೆಯನ್ನು ಸಮರ್ಥಿಸಲು ಮೇಲಿನ ಅಭಿಪ್ರಾಯಗಳು ಸಹಾಯವಾಗುತ್ತವೆಯಾದರೂ, ಕೆಲವು ಅರ್ಥಶಾಸ್ತ್ರಜ್ಞರು ಮತ್ತು ರಾಜಕೀಯ ಪತ್ರಿಕೋದ್ಯಮಿಗಳು ಆರ್ಥಿಕ ಪ್ರಗತಿಗೆ ಗಾಂಧಿತಂತ್ರ ಅಡ್ಡಿಯಾಗಬಹುದೆಂದು ಸಂಶಯಗಳನ್ನು ವ್ಯಕ್ತಪಡಿಸಿದ್ದಾರೆ. ದೇಶವನ್ನು ಸಾಂಪ್ರದಾಯಿಕ ಮಾರ್ಗದಲ್ಲಿ ಹಿಂದಕ್ಕೊಯ್ಯುವ, ಹಾಗೂ ದೇಶದ ಆರ್ಥಿಕ ಪ್ರಗತಿಯನ್ನು ಸ್ಥಗಿತಗೊಳಿಸುವ ಶೈಲಿಯೇ ಗಾಂಧಿವಾದವೆಂದು ಹೇಳುವುದುಂಟು. ಪ್ರೊ. ಆರ್ಥರ್ ಲ್ಯೂಯಿಯವರ ವಿಚಾರ ಸರಣಿಯಿದು : ರಾಷ್ಟ್ರೀಯ ಭಾವನೆಯ ರಾಜಕಾರಣಿಗಳೆಲ್ಲರೂ ಆರ್ಥಿಕ ಪ್ರಗತಿಯನ್ನು ಬೆಂಬಲಿಸುವುದಿಲ್ಲ. ಗಾಂಧಿಯಂಥ ಕೆಲವರು ಪಾಶ್ಚಾತ್ಯೀಕರಣದ ವಿರುದ್ಧವಾಗಿ ದನಿಯೆತ್ತಿದ್ದಾರೆ, ಮತ್ತು ಸಂಪ್ರದಾಯದ ಮಾರ್ಗವನ್ನು ಹಿಡಿಯಬೇಕೆಂದು ಅಪೇಕ್ಷಿಸುತ್ತಾರೆ.[೩] ಪ್ರೊ. ಜಾನ್ ಪಿ. ಲೂಯಿ ಎಂಬುವವರ ಮೇಲಿನ ಅಭಿಪ್ರಾಯವನ್ನು ಹರಿತವಾದ ಭಾಷೆಯಲ್ಲಿಯೇ ಎತ್ತಿ ಹಿಡಿದಿದ್ದಾರೆ. ಹೊಸ ಗಾಂಧಿವಾದಿಗಳ ಮತ್ತು ವ್ಯಾಪಾರ ಕೈಗಾರಿಕೆಗಳ ಉದಾರೀಕರಣ ವ್ಯಕ್ತಿಕರಣವಾದಿಗಳ ಮಾತು ಜೋರು, ಅನೇಕತೆಯಿರುವ ಭಾರತದೇಶದಲ್ಲಿ ಎಲ್ಲರ ಮಾತನ್ನು ಕಿವಿಗೊಟ್ಟು ಕೇಳುತ್ತಾರೆ. ವಾಸ್ತವವಾಗಿ ಹೊಸ ಗಾಂಧಿವಾದಿಗಳಿಗೆ ವಾತ್ಸಲ್ಯಪೂರ್ಣ, ಗೌರವಭಾವವುಳ್ಳ ಶ್ರೋತೃವೃಂದವೊಂದಿದೆ. ತಮ್ಮ ಸಂಸ್ಕೃತಿಯಲ್ಲಿರುವ ಸಾಂಪ್ರದಾಯಿಕ ಧೋರಣೆಯನ್ನು ತೃಪ್ತಿಪಡಿಸುವ ಪರಾರ್ಥಕ ವೈರಾಗ್ಯ ನೀತಿಯನ್ನವರು ಭಾರತೀಯ ಬುದ್ಧಿಜೀವಿಗಳಿಗೂ ವ್ಯವಹಾರಜ್ಞರಿಗೂ ನೀಡುತ್ತಾರೆ. ಆದರೆ ನಿಜವಾದ ಸಂಗತಿ ಎಂದರೆ, ಹೊಸ ಗಾಂಧಿವಾದಿಗಳೂ ಅತಿ ಉದಾರವಾದಿಗಳೂ ಈಗ ಗೌರವಾನ್ವಿತವಾದ, ಮನಸೋ ಇಚ್ಛೆಯ ಪಾತ್ರದಲ್ಲಿ ರೂಪಿತವಾದಂತೆ ಕಾಣುತ್ತಾರೆ.[೪]

ಗಾಂಧೀಜಿ ಆರ್ಥಿಕ ವಿಚಾರಧಾರೆಯ ಪ್ರಾಮುಖ್ಯದ ಬಗ್ಗೆ ಸಾಕಷ್ಟು ಹೇಳಿಯಾಗಿದೆ. ಗಾಂಧಿ ವಿಚಾರಧಾರೆಯೇ ಇಲ್ಲವೆಂಬ ಘೋಷಣೆಯೊಡನೆ ಈ ಪ್ರಯತ್ನವನ್ನು ನಿರಾಕರಿಸುವುದು ವಿಷಾದನೀಯವಾಗುತ್ತದೆ. ಗಾಂಧಿ ಹೆಸರಿನ ಯಾವುದೋ ಮೋಹಕ ಮೌಲ್ಯದಿಂದಾಗಿ ಆ ವಿಷಯವನ್ನು ಮಿತಿಮೀರಿ ಬೆಳೆಸಲಾಗಿದೆ.

ಮಹಾತ್ಮ ಗಾಂಧಿಯವರ ಆರ್ಥಿಕ ಕಲ್ಪನೆಗಳ ಅಧ್ಯಯನದಿಂದ ನಮ್ಮ ಮಣ್ಣಿಗೆ ಸ್ವಾಭಾವಿಕವಾದ ಆರ್ಥಿಕ ಚಿಂತನೆಯ ಕಡೆಗೆ ನಾವು ಲಕ್ಷ್ಯ ಹರಿಸುವುದರಿಂದ, ಏನಿಲ್ಲದಿದ್ದರೂ ಕೊನೆಯ ಪಕ್ಷ ಹೊಸ ಭರವಸೆಯನ್ನು ಪಡೆಯುವ ಸಲುವಾಗಿ

೩. W. Arhur Lewis, *Theory of Economic Growth,* p. 151.
೪. John P. Lewis, *Quiet Crisis in India,* p. 21.



ನಾವು ಗಾಂಧಿಯ ಆರ್ಥಿಕ ಆದರ್ಶಗಳನ್ನು ಕುರಿತು ಆಲೋಚಿಸಬೇಕಾಗಿದೆ. ಫಲಿತಾಂಶ ಸಂದೇಹಾತ್ಮಕವಾಗಿದ್ದರೂ ವಿದೇಶೀಯ ಆರ್ಥಿಕ ಮಾದರಿಗಳನ್ನು ಪ್ರಯೋಗಿಸಲಾಗಿದೆಯೆಂಬ ನ್ಯಾಯಸಮ್ಮತ ಆಪಾದನೆಗೆ ಗುರಿಯಾಗಿರುವುದರಿಂದ ಸದ್ಯದಲ್ಲಿ ಇದು ಅಗತ್ಯವಾಗಿದೆ. ಒಂದಾನೊಂದು ಆಗ್ನೇಯಾ ಏಷಿಯಾ ದೇಶದಿಂದ ಇಂಡಿಯಾಕ್ಕೆ ಬರುವ ಪ್ರತಿಯೊಬ್ಬ ಪಾಶ್ಚಾತ್ಯ ಸಮಾಜ ವಿಜ್ಞಾನಿಯೂ ಭಾರತೀಯರ ಅಸಾಧಾರಣ ವಾಕ್ಶಕ್ತಿಯಿಂದ ತುಂಬಿದ ಭಾವನೆ ಮತ್ತು ಒಳನೋಟಗಳ ವಿಸ್ಮಯಕಾರಿ ಶಬ್ದಗಳನ್ನು ಹೊಸದೆಹಲಿಯಲ್ಲಿ ನೋಡಿದಾಗ ಉದ್ಗಾರ ತೆಗೆಯುತ್ತಾನೆ. ಆದರವನು ಕೆಲವು ದಿನ ನಿಂತದ್ದಾದರೆ, ಅವನು ಖಂಡಿತವಾಗಿಯೂ ಅನುಷ್ಠಾನದ ಬಗ್ಗೆ ಟೀಕಾಕಾರನಾಗುತ್ತಾನೆ. 'ಭಾರತೀಯರು ಮಾತಿನ ಮಲ್ಲರೇ ಹೊರತು ಕ್ರಿಯಾಶೀಲರಲ್ಲ; ಪ್ರಯೋಗಶೀಲರೆನ್ನುವುದಕ್ಕಿಂತ ಒಳ್ಳೆಯ ಯೋಜಕರು. ಮೊದಲೇ ಎಲ್ಲವನ್ನು ಕೇಳಿ ತಿಳಿದುಕೊಂಡಿದ್ದಾರೆ. ಮತ್ತು ಒಂದು ರೀತಿಯಲ್ಲಿ ಸುಮಾರಾಗಿ ಎಲ್ಲವನ್ನು ಪ್ರಯತ್ನಿಸಿದ್ದಾರೆಂಬುದೇ ಅವರ ವಿದ್ವತ್ತಿನ ಅರ್ಥ. ಆದರೆ ಹಲವು ವೇಳೆ ಅನುಷ್ಠಾನ ಅರೆಮನಸ್ಸಿನ, ಅಸಂಬದ್ಧ, ಪ್ರಯತ್ನವಾಗಿರುತ್ತದೆ, ಅಥವಾ ಪರಸ್ಪರ ವೈರುದ್ಧ್ಯದಲ್ಲಿ ಮುಳುಗಿ ಹೋಗುತ್ತದೆ. ಅದರ ಫಲವಾಗಿ, ಉತ್ತಮತಂತ್ರದ ಭಾವನೆಗಳು ಶೀಘ್ರವಾಗಿ ಅವನತಿ ಮುಖವಾಗಿವೆ; ಕಾಲಕ್ಕೆ ಮುಂಚೆಯೇ ಅವು ನಶಿಸಿಹೋಗುತ್ತವೆ.' ಇದು ಸಹಾನುಭೂತಿಯಿಲ್ಲದ ವಿದೇಶೀಯ ಅರ್ಥಶಾಸ್ತ್ರಜ್ಞನಿಂದ ಬಂದ ಅನಪೇಕ್ಷಿತ ಖಂಡನೆಯಂತಿದೆ.[೫] ಆದರೆ ಪ್ರಾಧ್ಯಾಪಕ ಗುನ್ನರ್ ಮರ್ಡಲ್‌ನ ಎಚ್ಚರಿಕೆಯ ಬೆಳಕಿನಲ್ಲದು ಅತ್ಯುಚಿತವಾಗಿದೆ. ಪಾಶ್ಚಾತ್ಯರಾಷ್ಟ್ರಗಳಲ್ಲಿ ಪ್ರಕಟಗೊಂಡ ಅರ್ಥಶಾಸ್ತ್ರ ಸಾಹಿತ್ಯದ ಬಹುಭಾಗ ಅನಭಿವೃದ್ಧಿ ರಾಷ್ಟ್ರಗಳ ಹಿತಾಸಕ್ತಿಗಳ ದೃಷ್ಟಿಯಿಂದ ಪ್ರಾರಂಭವಾಗಲಿಲ್ಲವೆಂದೂ, ಅಭಿವೃದ್ಧಿ ಹೊಂದಿದ ಯಾವುದೋ ಒಂದು ರಾಷ್ಟ್ರದ ಅಥವಾ ಕೆಲವು ರಾಷ್ಟ್ರಗಳ ಸಮೂಹದ ರಾಷ್ಟ್ರೀಯ ರಾಜಕೀಯ ಹಿತಾಸಕ್ತಿಗಳ ದೃಷ್ಟಿಯಿಂದ ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ಅವುಗಳ ಸಮಸ್ಯೆಗಳನ್ನು ಅವಲೋಕಿಸುತ್ತಾರೆಂದೂ ಪ್ರೊಫೆಸರ್ ಮರ್ಡಲ್ ತೋರಿಸಿದನು. ಅರ್ಥರಹಿತವೂ ಅಪ್ರಸ್ತುತವೂ, ಅನುಚಿತವೂ ಆದ ತತ್ವಗಳನ್ನೂ ಕಲ್ಪನಾ ವಿಧಾನಗಳನ್ನೊಳಗೊಂಡ ದೊಡ್ಡ ಪ್ರಮಾಣದ ರಚನೆಗಳನ್ನು ಬಿಸಾಡಲು ಮತ್ತು ತಮ್ಮ ಅಗತ್ಯಗಳ ಮತ್ತು ಸಮಸ್ಯೆಗಳ ಅಧ್ಯಯನದ ಮೂಲಕ ನೂತನ ಆಲೋಚನೆಗಳನ್ನು ಪ್ರಾರಂಭಿಸಲು ಧೈರ್ಯವನ್ನು ಒಗ್ಗೂಡಿಸಿಕೊಳ್ಳುವಂತೆ ಅನಭಿವೃದ್ಧಿ ದೇಶಗಳ ಯುವ ಅರ್ಥಶಾಸ್ತ್ರಜ್ಞರಿಗೆ ಬುದ್ಧಿವಾದ ಹೇಳುತ್ತಾರೆ. ಇದು ಅವರನ್ನು ಗತಕಾಲದ ಪಾಶ್ಚಾತ್ಯ ಅರ್ಥಶಾಸ್ತ್ರ ಮತ್ತು ಮಾರ್ಕ್ಸ್ ಸಿದ್ಧಾಂತ ಕ್ಷೇತ್ರಗಳಿಂದಾಚೆಗೆ

೫. John P. Lewis, *Quiet Crisis in India* p. 5.

ದೂರ ಒಯ್ಯುತ್ತದೆ.[೬] ಈ ಕೋನದಿಂದ ನೋಡಿದಾಗ ಗಾಂಧಿಯ ಆರ್ಥಿಕ ಭಾವನೆಗಳು, ಅವೆಷ್ಟೇ ಸಂಕ್ಷೇಪವಾಗಿರಲಿ, ಭಾರತೀಯ ಪರಿಸ್ಥಿತಿಗೆ ಪ್ರಸ್ತುತವಾದ ಆರ್ಥಿಕ ಚಿಂತನೆಗೆ ಪ್ರಾಯಶಃ ಅತ್ಯುತ್ತಮ ಪ್ರಾರಂಭಿಕ ನೆಲೆಯನ್ನು ಒದಗಿಸುತ್ತವೆ.

ಗಾಂಧೀಜಿಯ ಆರ್ಥಿಕ ವಿಚಾರಗಳು ಸಾಕಷ್ಟು ಲಕ್ಷ್ಯವನ್ನು ಆಕರ್ಷಿಸದಿರಲು ಭಾರತೀಯ ಆರ್ಥಿಕ ಸಮಸ್ಯೆಗಳ ವ್ಯವಸ್ಥಿತ ವಿಶ್ಲೇಷಣೆಗೆ ಅವರು ಪ್ರಯತ್ನ ಮಾಡದಿದ್ದುದೇ ಕಾರಣ. ಅವರನ್ನು ಆರ್ಥಿಕ ವಿಚಾರ ಸಿದ್ಧಾಂತಿಯೆಂದು ಪರಿಗಣಿಸಲಾಗದು. ದೇಶದ ದಾರಿದ್ರ್ಯಕ್ಕೆ ಪರಿಹಾರ ಕಂಡುಹಿಡಿಯಲು ಮಾಡಿದ ಅವರ ಪ್ರಯತ್ನಗಳು ಪೂರ್ತಿ ಆರ್ಥಿಕ ಮಾರ್ಗಗಳಲ್ಲ. ಅರ್ಥಶಾಸ್ತ್ರದ ವಿಶೇಷ ವಲಯಕ್ಕೆ ಹೆಚ್ಚಿನ ನೈತಿಕ ಹೂರಣವುಳ್ಳ ಕೆಲವು ಆಧಾರಭೂತ ತತ್ವಗಳನ್ನು ಅನ್ವಯಿಸುವ ಉಪಾಯವದು. ಕೆಲವರು ಈ ಮಾರ್ಗವನ್ನು ಒಪ್ಪಿಕೊಳ್ಳದಿರಬಹುದು. ಅಷ್ಟೇ ಅಲ್ಲ, ಪ್ರೊ. ಎರ್‌ಹಾರ್ಡ್‌ರ ಅಭಿಪ್ರಾಯವನ್ನೊಪ್ಪಿಕೊಳ್ಳಲು ಹಿಂಜರಿಯುವುದಿಲ್ಲ. ಅವರ ಅಭಿಪ್ರಾಯವಿದು: 'ಆರ್ಥಿಕ ವ್ಯವಹಾರಗಳ ಮಂತ್ರಿಯಾಗಿ, ಜನರ ಆಧ್ಯಾತ್ಮಿಕ ಕ್ಷೇಮದ ಹೊಣೆಗಾರಿಕೆಯನ್ನು ನಿರ್ವಹಿಸುವಂತೆ ಯಾರೂ ನನ್ನನ್ನು ಕೇಳಲಾರರು. ಅಭಾವ ಆತಂಕಗಳಿಂದ ಜನರನ್ನು ಮುಕ್ತಗೊಳಿಸಿ ಚೆನ್ನಾಗಿ ಬದುಕಲು ಅವಕಾಶ ಕಲ್ಪಿಸಬೇಕಾದ್ದು ನನ್ನ ಉದ್ಯೋಗದ ಗುರಿ ಹಾಗೂ ನನ್ನ ಕರ್ತವ್ಯ.'[೭] ಆದರೆ ತಮ್ಮ ಖಚಿತ ಉದ್ದೇಶದ ಪರಿಣಾಮದ ಬಗ್ಗೆ ಪ್ರೊಫೆಸರ್ ಎಹಾರ್ಡ್ ಸಹ ಸಂತುಷ್ಟನಾಗಿರಲಿಲ್ಲ. 'ನೆರೆಯುವನಾಗಲಿ, ಗೆಳೆಯುನಾಗಲಿ, ತನಗಿಂತ ಶ್ರೀಮಂತನಾಗಿರುವುದನ್ನು ಜರ್ಮನ್‌ನು ಸಹಿಸಲಾರ; ತಾನೆಂಥ ದೊಡ್ಡ ಸ್ಥಾನವನ್ನು ಪಡೆದಿದ್ದರೂ ಅವನು ಇತರರ ಬಗ್ಗೆ ಮಾತ್ಸರ್ಯ ಅತೃಪ್ತಿಗಳನ್ನು ತಾಳುತ್ತಾನೆ. ಜರ್ಮನ್‌ನ ಸ್ವಭಾವವೇ ಅಂಥದು'[೮] ಎಂದವನು ಪ್ರಸ್ತಾಪಿಸುತ್ತಾನೆ. ಪ್ರೊ. ಎರ್‌ಹಾರ್ಡ್ ಈ ಅಪಾಯದ ಬಗ್ಗೆ ತನ್ನ ದೇಶದ ಜನರನ್ನು ಎಚ್ಚರಿಸಿದ್ದಲ್ಲದೆ, ಅದಕ್ಕೆ ವಿರುದ್ಧವಾಗಿ ಹೋರಾಡಬೇಕೆಂದು ಅವರನ್ನು ಒತ್ತಾಯಿಸುತ್ತಾನೆ.

ಒಂದರ್ಥದಲ್ಲಿ ಆರ್ಥಿಕ ಸಮಸ್ಯೆಗಳಿಗೆ ಸಂಬಂಧಿಸಿದ ಗಾಂಧಿಮಾರ್ಗ ನಾವು ಒಪ್ಪಿಕೊಂಡಿರುವ ಆರ್ಥಿಕ ಗಡಿ ರೇಖೆಗಳ ಆಚೆಗಿತ್ತು. ಯೇಸುಕ್ರಿಸ್ತನೇ ಆ ಕಾಲದ ಅತ್ಯುತ್ತಮ ಅರ್ಥಶಾಸ್ತ್ರಜ್ಞನಾಗಿದ್ದ. ದೇಶ ಕಾಲಗಳನ್ನು ಮಿತವ್ಯಯಗೊಳಿಸುವಲ್ಲಿ ಅವನು ಯಶಸ್ವಿಯಾಗಿದ್ದ; ಅವುಗಳನ್ನವನು ಮೀರಿದ್ದ, – ಈ ಮಾತುಗಳನ್ನು ಹೇಳಿದವನ ಭಾವನೆಗಳಲ್ಲಿ ಹಲವರು ನಂಬಿಕೆಯಿಟ್ಟಿದ್ದಾರೆ. ಪಾಶ್ಚಾತ್ಯ ಚಿಂತನೆಯ ಸಮಕಾಲೀನ ಪಂಥವೊಂದು ಗಾಂಧಿಮಾರ್ಗವನ್ನೊಪ್ಪಿಕೊಳ್ಳುತ್ತದೆಂದರೆ, ನಮಗೆ

೬. Gunnar Myrdal, *Economic Theory and Underdeveloped Regions.*
೭. Erhard, *Prosperity through Competition* pp. 170-71.
೮. Op. cit p. 170.



ಹಿತಕರವಾದ ವಿಸ್ಮಯವಾಗಬಹುದು. ಕೈಗಾರಿಕಾ ನಾಗರಿಕತೆಯ ಸಾಂಸ್ಕೃತಿಕ ಆಧಾರಗಳನ್ನು ಕುರಿತ ಇತ್ತೀಚಿನ ಅಧ್ಯಯನದ ಪ್ರಕಾರ, ಮುಂದಿನ ದಶಕ ಶತಕಗಳಲ್ಲಿ ಕೈಗಾರಿಕಾ ನಾಗರಿಕತೆಯ ಭವಿಷ್ಯ ವಿಜ್ಞಾನಿಗಳನ್ನು, ಇಂಜಿನಿಯರುಗಳನ್ನು ಮತ್ತು ಅರ್ಥಶಾಸ್ತ್ರಜ್ಞರನ್ನು ಹೆಚ್ಚು ಅವಲಂಬಿಸದೆ, ನಮ್ಮ ಕಾಲದ ಯಾಂತ್ರಿಕ ವಲಯದಲ್ಲಿ ಮತ್ತು ಆಡಳಿತ ಅತಿರೇಕವಿರುವ ಪ್ರಪಂಚದಲ್ಲಿ ಮಾನವ ವ್ಯಕ್ತಿತ್ವದ ಪರಿಪೂರ್ಣತಾ ಅನ್ವೇಷಣೆಯ ನವೀಕರಣದ ಕಡೆಗೆ ಹೊರಳುತ್ತದೆ ಎಂದು ಹೇಳಲಾಗಿದೆ. ಆನಂದದಾಯಕ ಅರ್ಥವ್ಯವಸ್ಥೆಯ ಸ್ಥಾಪನೆಯ ಮೈತ್ರಿಯನ್ನು ಅನ್ವೇಷಣೆ ಅಪೇಕ್ಷಿಸುತ್ತದೆ. ಆ ವ್ಯವಸ್ಥೆ ರಾಶಿ ಉತ್ಪತ್ತಿ, ಸ್ವಯಂಚಾಲಿತ ತಂತ್ರ ಮತ್ತು ಅಣುಬಾಂಬು ಮೌಲ್ಯಗಳಿಂದ ದೂರವಿರಬೇಕು. ಸಜ್ಜನಿಕೆಯ ಸೇವೆಗಾಗಿ ಹೊಸದಾಗಿ ಹುಟ್ಟಿಕೊಂಡಿರುವ ವ್ಯವಸ್ಥೆಯೇ ಆನಂದದಾಯಿ ಆರ್ಥಿಕ ವ್ಯವಸ್ಥೆ. ಅಂತಿಮವಾಗಿ ಅದು ಪರಿಮಾಣಾತ್ಮಕ ಆರ್ಥಿಕ ವ್ಯವಸ್ಥೆಯ ಕಡೆಗೆ ಅಂದರೆ ಇಂದು ಈ ಗ್ರಹದಲ್ಲಿ ಆಧಿಪತ್ಯ ನಡೆಸುತ್ತಿರುವ ಕೈಗಾರಿಕಾ ಪದ್ಧತಿಯ ಕಡೆಗೆ ಮಾರ್ಗದರ್ಶನ ಮಾಡುತ್ತಿದೆ.

ಗಾಂಧಿ ಪರಿಕಲ್ಪನೆಯ ಅರ್ಥಶಾಸ್ತ್ರವನ್ನು ಗ್ರಹಿಸುವಲ್ಲೊಂದು ತೊಂದರೆಯಿದೆ. ಅರ್ಥಶಾಸ್ತ್ರದ ನಿಜವಾದ ಸ್ವರೂಪ ಧರ್ಮವನ್ನು ಉಪೇಕ್ಷಿಸಿರುವುದೇ ಅದಕ್ಕೆ ಕಾರಣ; ಅರ್ಥಶಾಸ್ತ್ರ, ಸಂಖ್ಯಾಶಾಸ್ತ್ರ ಮತ್ತು ಯೋಜನಾಶಾಸ್ತ್ರಗಳ ತಜ್ಞರು ಸಮಾಜದ ಮೇಲೆ ಪ್ರಭುತ್ವವನ್ನು ಸಾಧಿಸುವಂತೆ ಏರ್ಪಾಡು ಮಾಡುವುದೇ ಅರ್ಥಶಾಸ್ತ್ರದ ಕಾರ್ಯವೆಂದು ಕೆಲವರು ಯೋಚಿಸುತ್ತಾರೆ. ಅಂಥ ಸನ್ನಿವೇಶವನ್ನು 'ಆರ್ಥಿಕ ಪ್ರಭುತ್ವವೆಂದು ಕರೆಯುತ್ತಾರೆ' ಎಂಬುದಾಗಿ ವಿಲ್‌ಹೆಲ್ಮ್ ರೋಪ್ಕೆ ಹೇಳುತ್ತಾನೆ.[೯] 'ಆಧುನಿಕ ಪ್ರಜಾಪ್ರಭುತ್ವದಲ್ಲಿ ಅರ್ಥಶಾಸ್ತ್ರದ ನಿಜವಾದ ಕಾರ್ಯ ಬಹು ಭಿನ್ನವಾಗಿರುವಂತೆ ತೋರುತ್ತದೆ. ಅದೇ ಆಧಾರದ ಪ್ರಕಾರ, ಭಾವೋದ್ರೇಕ ಮತ್ತು ಸಾರ್ವಜನಿಕ ಜೀವನದ ಆಸಕ್ತಿಗಳ ಮಧ್ಯೆ ವಿಚಾರಗಳ ತಾರ್ಕಿಕತೆಯನ್ನು ಮನದಟ್ಟು ಮಾಡಿಕೊಡುವುದು ಅನನುಕೂಲವಾದ ವಿಷಯ ಮತ್ತು ಸಂಬಂಧಗಳನ್ನು ಬೆಳಕಿಗೆ ತರುವುದು, ಪ್ರತಿಯೊಂದನ್ನು ತೂಗಿ ನೋಡಿ, ಅದರದರ ಸ್ಥಾನವನ್ನು ನಿಷ್ಕರ್ಷಿಸುವುದು, ಗುಳ್ಳೆಗಳನ್ನು ಚುಚ್ಚಿ, ಭ್ರಾಂತಿ ಮತ್ತು ಗೊಂದಲಗಳನ್ನು[೧೦] ಬಯಲು ಮಾಡುವುದು, ರಾಜಕೀಯ ಸಂಭ್ರಮಗಳನ್ನು ಮತ್ತು ಅದರ ಸಂಭಾವ್ಯ ಬವಣೆಗಳನ್ನು ಅರ್ಥಶಾಸ್ತ್ರದ ಸಮರ್ಥನೆಗಳಿಂದ ಹಾಗೂ ರಾಜಕೀಯ ಚಳುವಳಿಯನ್ನು ಸತ್ಯದ ಮೂಲಕ ವಿರೋಧಿಸುವುದು ಅದರ ಮೋಹಕವಲ್ಲದ, ಆದರೆ ಲಾಭದಾಯಕವಾದ ಧ್ಯೇಯವಾಗಿದೆ'.[೧೧]

೯. Tendulkar, *Mahatma,* Vol. II (New Edition) p. 195.
೧೦. Ref. *Cultural Basis of Industrial Civilisation,* p. 28.
೧೧. Wilhelm Ropke *Humane Economy,* pp. 149-150.

'ಅರ್ಥಶಾಸ್ತ್ರ ಪ್ರಕೃತಿ ವಿಜ್ಞಾನವಲ್ಲ, ಅದೊಂದು ನೀತಿಶಾಸ್ತ್ರ. ಅದರಿಂದಾಗಿ ಮನುಷ್ಯನೊಂದು ಆಧ್ಯಾತ್ಮಿಕ ಮತ್ತು ನೈತಿಕ ವ್ಯಕ್ತಿಯೆಂದು ತಿಳಿದು ವ್ಯವಹರಿಸಬೇಕೆಂದು' ಭಾವಿಸುವ ಕೆಲವೇ ಕೆಲವು ಅರ್ಥಶಾಸ್ತ್ರಜ್ಞರ ಸಮುದಾಯವೊಂದಿದೆ. ಅಂಥವರನ್ನು ಗಾಂಧೀಜಿ ಒಪ್ಪಿಕೊಳ್ಳುತ್ತಾರೆ. ಪ್ರಕೃತಿ ವಿಜ್ಞಾನಗಳಿಂದ ವಿಧಾನಗಳನ್ನು ಎರವಲು ಪಡೆದುಕೊಂಡು, ಸ್ವನಿಷ್ಠ ವಿಷಯಗಳನ್ನು ಮೂರ್ತೀಕರಿಸಿಕೊಂಡು ಅರ್ಥಶಾಸ್ತ್ರ ವಿಶೇಷ ಸ್ಥಾನವನ್ನು ಪಡೆದಿದೆಯೆಂಬುದನ್ನು ನಿರಾಕರಿಸುವಂತಿಲ್ಲ. 'ತತ್ವಶಾಸ್ತ್ರಕ್ಕೆ ಸಮಾನವಾಗಿರುವ ಬದುಕಿನ ಆರ್ಥಿಕ ವ್ಯವಹಾರವನ್ನು ನಮ್ಮ ಕಾಲೇಜುಗಳಲ್ಲಿ ಪ್ರಾಮಾಣಿಕವಾಗಿ ನಡೆಸದಿರುವಾಗ ಬಡ ವಿದ್ಯಾರ್ಥಿ ಸಹ ರಾಜಕೀಯಾರ್ಥಶಾಸ್ತ್ರವನ್ನು ಕಲಿಯುತ್ತಾನೆಂಬ ಹೆನ್ರಿ ಡೇವಿಡ್ ಥೊರೋವಿನ ಸೂಚನೆಯನ್ನು ಗಾಂಧೀಜಿ ಒಪ್ಪಿಕೊಳ್ಳುತ್ತಾರೆ. ಅದರ ಪರಿಣಾಮವೇನೆಂದರೆ, ತಾವು ಆಡಂಸ್ಮಿತ್, ರಿಕಾರ್ಡೊ ಮತ್ತು ಸಾಯ್ ಅವರ ಗ್ರಂಥಗಳನ್ನೋದುತ್ತಿದ್ದಾಗಲೇ ಅವರು ತಮ್ಮ ತಂದೆಯ ಮೇಲೆ ಸಾಲವನ್ನು ಹೊರಿಸುತ್ತಾರೆ."[೧೨]

ಅಲಹಾಬಾದಿನ ಮಾಯಿರ್ ಕಾಲೇಜಿನ ಅರ್ಥಶಾಸ್ತ್ರ ಸಂಘದಲ್ಲಿ ೨೦-೧೨-೧೯೧೬ ರಂದು ಗಾಂಧೀಜಿ ಉಪನ್ಯಾಸವನ್ನು ನೀಡುತ್ತಾರೆ. ತಮ್ಮ ಭಾಷಣದ ಸಂದರ್ಭದಲ್ಲಿ ಅವರು ಹೇಳಿದ್ದಿದು: 'ನೀವು ಅರ್ಥಶಾಸ್ತ್ರವನ್ನು ಸಹಜವಾಗಿಯೇ ಅರ್ಥಮಾಡಿಕೊಂಡಿದ್ದೀರಿ, ನಿಜ. ಮುಚ್ಚುಮರೆಯಿಲ್ಲದೆ ಸತ್ಯವಾಗಿ ಹೇಳುತ್ತೇನೆ, ನನಗೆ ಅರ್ಥಶಾಸ್ತ್ರದ ಬಗೆಗೆ ತಿಳಿವಳಿಕೆ ಅಲ್ಪ. ಇತ್ತೀಚೆಗೊಂದು ದಿನ ಸಂಜೆಯೂಟದ ಸಮಯದಲ್ಲಿ ಮಿತ್ರನೊಬ್ಬ ನನ್ನ ವೈಯಕ್ತಿಕ ವಿಚಿತ್ರಗಳ ಬಗ್ಗೆ ಪ್ರಶ್ನೆಗಳ ಸುರಿಮಳೆಯಲ್ಲಿ ನನ್ನನ್ನು ಮುಳುಗಿಸಿಬಿಟ್ಟನು. ಪಾಟಿಸವಾಲು ಮುಂದುವರಿದಂತೆಲ್ಲ ನಾನವನಿಗೆ ಬಲಿಪಶುವಾದೆ. ನಿರಾಯಾಸವಾಗಿ ಅವನು ಅರ್ಥಶಾಸ್ತ್ರದ ಬಗೆಗಿನ ನನ್ನ ಪೂರ್ಣ ಅಜ್ಞಾನವನ್ನು ಸುಲಭವಾಗಿ ಅರಿತುಕೊಂಡನು. ತನಗೆ ಗೊತ್ತಿಲ್ಲವೆಂಬ ವಿಚಾರವೇ ಗೊತ್ತಿಲ್ಲದ ಮನುಷ್ಯನೊಡನೆ ನಿಸ್ಸಂದಿಗ್ಧವಾಗಿ ವ್ಯವಹರಿಸುತ್ತಿದ್ದಂತೆ ನಾನವನಿಗೆ ತೋರಿರಬೇಕು. ಸುಪ್ರಸಿದ್ಧ ಅರ್ಥಶಾಸ್ತ್ರಜ್ಞರಾದ ಮಿಲ್, ಮಾರ್ಷಲ್, ಆಡಂಸ್ಮಿತ್ ಮತ್ತು ಅವರಂಥ ಹಲವು ಗ್ರಂಥಕರ್ತರ ಗ್ರಂಥಗಳನ್ನು ನಾನು ಓದಿಲ್ಲವೆಂದು ತಿಳಿದಾಗ, ಅವನು ಭಯಚಕಿತನಾದದ್ದಲ್ಲದೆ, ಕೋಪಾರೂಢನಾದನು. ವಿಶ್ವಾಸಪಾತ್ರರಾದ ಸ್ನೇಹಿತರನ್ನು ಲೆಕ್ಕಿಸದೆ, ಅರ್ಥಶಾಸ್ತ್ರದಲ್ಲಿ ಪ್ರಯೋಗ ನಡೆಸುವ ಮುನ್ನ ಪೂರ್ವೋಕ್ತ ಗ್ರಂಥಗಳನ್ನು ಅಧ್ಯಯನ ಮಾಡುವಂತೆ ಅವನು ಹತಾಶೆಯಿಂದ ಸಲಹೆ ನೀಡಿ ಚರ್ಚೆಯನ್ನು ಕೊನೆಗೊಳಿಸುತ್ತಾನೆ. ಏಕೆಂದರೆ,

೧೨. Henry David Thoreau, *Walden,* p 46. Indian Edn., 1962.



ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಬಾಹ್ಯ ಪ್ರಮಾಣಗಳು ಬೇಕಾಗುವುದಿಲ್ಲವೆಂಬ ಕ್ಷಣಗಳು ಬಾಳಿನಲ್ಲಿ ಸಂಭವಿಸುತ್ತವೆ. ನೀನು ಸರಿಯಾದ ಮಾರ್ಗದಲ್ಲಿ ಹೋಗುತ್ತಿದ್ದೀಯೆ. ಎಡಕ್ಕಾಗಲಿ ಬಲಕ್ಕಾಗಲಿ ತಿರುಗದೆ, ನೇರವಾಗಿ ಆದರೆ ಕಿರಿದಾದ ದಾರಿಯಲ್ಲಿ ಮುಂದುವರಿ ಎಂದು ನಮ್ಮೊಳಗಿನ ಸಣ್ಣ ದನಿಯೊಂದು ನುಡಿಯುತ್ತದೆ. ಅಂಥ ನೆರವಿನಿಂದ ನಾವು ನಿಧಾನವಾಗಿಯಾದರೂ, ದೃಢವಾಗಿ ಮುಂದುವರಿಯುತ್ತೇವೆ. ಇದು ನನ್ನ ನಿಲುವು.'[೧೩] ಇದು ಆರ್ಥಿಕ ಸಮಸ್ಯೆಗಳ ಅಧ್ಯಯನಕ್ಕೆ ಅಸಾಂಪ್ರದಾಯಿಕ ಮಾರ್ಗವೆಂದು ತೋರುವುದಾದರೂ, ಡಾ. ಆಲ್‌ಫ್ರೆಡ್ ಮಾರ್ಷಲ್ ಎಂಬ ವಿದ್ವಾಂಸರ ದೃಷ್ಟಿಯಲ್ಲಿ ಗಾಂಧೀಜಿ ಅರ್ಥಶಾಸ್ತ್ರಜ್ಞರೆಂದೆನಿಸಿಕೊಳ್ಳುವ ಅರ್ಹತೆಯುಳ್ಳವರಾಗಿದ್ದಾರೆ. ಅರ್ಥಶಾಸ್ತ್ರಜ್ಞನಿಗಿರಬೇಕಾದ ಅರ್ಹತೆಗಳ ಬಗ್ಗೆ ಅವರು ಮಾತಾಡುತ್ತ, ಹೆಚ್ಚು ಕಡಿಮೆ ಆಧುನಿಕ ಅರ್ಥಶಾಸ್ತ್ರದ ಎಲ್ಲ ಅಧ್ವರ್ಯುಗಳೂ ಮಾನವೀಯತೆಯಲ್ಲಿ ಸಹಾನುಭೂತಿಯುಳ್ಳ ಸಜ್ಜನರಾಗಿದ್ದಾರೆ. ಅವರು ಹಣ ಸಂಪಾದನೆಗಾಗಿ ಹಾತೊರೆದವರಲ್ಲ ; ಅದು ಸಾಮಾನ್ಯ ಜನರಲ್ಲಿ ಹಂಚಿಕೆಯಾಗಬೇಕೆಂದು ಕಾಳಜಿ ಇದ್ದವರು'[೧೪] ಎಂದು ನುಡಿದರು. 'ನಿಜವಾದ ಪ್ರಗತಿಗೆ ಆರ್ಥಿಕ ಪ್ರಗತಿ ಅಡ್ಡಬರುತ್ತದೆಯೆ?' ಎಂಬ ಪ್ರಶ್ನೆಯನ್ನು ಕುರಿತು ಗಾಂಧೀಜಿ ಎಲ್ಲ ಆರ್ಥಿಕ ಸಮಸ್ಯೆಗಳಿಗೆ ಸಂಬಂಧಿಸಿದ ಚರ್ಚೆಗಳಲ್ಲಿ ಉತ್ತರಿಸಲು ಪ್ರಯತ್ನಿಸುತ್ತಿದ್ದರು. ನೈತಿಕ ಪ್ರಗತಿಯೇ ನಿಜವಾದ ಪ್ರಗತಿಯೆಂಬುದು ಅವರ ಭಾವನೆ. ನಾವು ದೇವರನ್ನೂ ಧನ ಪಿಶಾಚಿಯನ್ನೂ ಒಟ್ಟಿಗೆ ಸೇವಿಸಲಾಗದೆಂಬುದು ಅವರ ಮತ. ಈ ವಿಶ್ವಾಸ ಅವರಲ್ಲೆಷ್ಟು ತೀವ್ರವಾಗಿತ್ತೆಂದರೆ, ಅದು ಮತ್ತೆ ಮತ್ತೆ ತಲೆಯೆತ್ತುತ್ತಿದ್ದುದನ್ನು ನಾವು ನೋಡಿದ್ದೇವೆ.

ಆಧುನಿಕ ವಿಜ್ಞಾನ ಮತ್ತು ಕೈಗಾರಿಕಾ ತಂತ್ರ ಪಾಶ್ಚಾತ್ಯ ನಾಗರಿಕತೆಯ ಫಲ. ಪಶ್ಚಿಮದ ಹಲವು ಮಂದಿ ವಿಜ್ಞಾನಿಗಳು ಮತ್ತು ಚಿಂತಕರು ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳ ಪರಿಣಾಮದ ಬಗ್ಗೆ ಪುನರಾಲೋಚನೆಯನ್ನು ಸ್ವಾಗತಿಸುತ್ತಿದ್ದರೂ, ಪಾಶ್ಚಾತ್ಯ ನಾಗರಿಕತೆಯನ್ನೆಂದೂ ಮೆಚ್ಚಿಕೊಂಡವರಲ್ಲ. ಪಾಶ್ಚಾತ್ಯ ನಾಗರಿಕತೆಯ ಪರಿಣಾಮಗಳು ಪಾಶ್ಚಾತ್ಯ ಸಮಾಜವನ್ನು ಅಮಾನವೀಕರಣಗೊಳಿಸಿದುವೆಂದು, ಮನುಷ್ಯನ ಭಾರವನ್ನಿಳಿಸುವ ಮತ್ತು ಆಧುನಿಕ ಮಾನವನ ಅಸಂಖ್ಯ ಬೇಡಿಕೆಗಳನ್ನು ತೃಪ್ತಿಪಡಿಸುವ ಸಲುವಾಗಿ ಉತ್ಪತ್ತಿಯನ್ನು ಹೆಚ್ಚಿಸುವ ಉದ್ದೇಶದಿಂದ ಪೂರೈಸುತ್ತಿರುವ ವಿಸ್ತೃತ ಪ್ರಮಾಣದ ಯಂತ್ರಗಳ ಬಳಕೆ ಕಾರ್ಮಿಕನನ್ನು ಅಂಗಹೀನಗೊಳಿಸುತ್ತದೆ, ಅವನ ಶರೀರವನ್ನು ಅನುಪಯೋಗಗೊಳಿಸುತ್ತದೆ ಮತ್ತು ಅವನ ಕೈಗಳನ್ನು

೧೩. Tendulkar, *Mahatma*, Vol. I, p. 193.
೧೪. Alfred Marshall, *Principle of Economics,* p. 47.

ದುರ್ಬಲಗೊಳಿಸುತ್ತದೆ. ಮಾನವನಲ್ಲಿರುವ ಶಕ್ತಿಗಳ ನಡುವಣ ಕ್ರಿಯಾಸಾಮರಸ್ಯ ಅವನ ಶರೀರದ ಒಂದು ಮುರುಕಿಗೆ ಮಾತ್ರ ಸೀಮಿತಗೊಳ್ಳುತ್ತದೆ.[೧೫] ಆಧುನಿಕ ನಾಗರಿಕತೆಯ ಪರಿಣಾಮದ ಈ ತಿರುವುಗಳನ್ನು ಗಾಂಧೀಜಿ ಸ್ಪಷ್ಟವಾಗಿ ಗುರುತಿಸಿದ್ದರು. ಗಾಂಧೀಜಿ ಪಾಶ್ಚಾತ್ಯ ನಾಗರಿಕತೆಯನ್ನು ನಿರಾಕರಿಸಿದ್ದಕ್ಕೆ ಅವರ ರಾಜಕೀಯ ದೃಷ್ಟಿ ಕಾರಣವೆಂಬುದು ತಪ್ಪು. ಆಧುನಿಕ ನಾಗರಿಕತೆಯಲ್ಲವರು ಬೇಡಿಕೆಗಳ ಗುಣೀಕರಣವನ್ನೂ, ಮಾನವನ ನೈತಿಕ ದಾರಿದ್ರ್ಯವನ್ನೂ, ಮೌಲ್ಯಗಳ ಸಂಘರ್ಷವನ್ನೂ ಗುರುತಿಸುತ್ತಾರೆ. ೧೯೦೮ರಲ್ಲಿ ತಾವು ಬರೆದ 'ಹಿಂದ್ ಸ್ವರಾಜ್' ಎಂಬ ಗ್ರಂಥದಲ್ಲವರು ಆಧುನಿಕ ನಾಗರಿಕತೆಯನ್ನು ತೀವ್ರವಾಗಿ ಖಂಡಿಸುತ್ತಾರೆ. ಆಧುನಿಕ ನಾಗರಿಕತೆ ಧರ್ಮಬಾಹಿರವಾದದ್ದೆಂದು, ಅದು ಯುರೋಪಿನ ಜನರನ್ನು ಸಂಮೋಹನಗೊಳಿಸಿದೆಯೆಂದು, ಅಲ್ಲಿರುವವರೆಲ್ಲರೂ ಅರೆಹುಚ್ಚರೆಂದೂ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. 'ಮನುಷ್ಯನ ಕರ್ತವ್ಯವನ್ನು ತೋರಿಸಿಕೊಡುವ ರೀತಿ ನೀತಿಗಳೇ ನಾಗರಿಕತೆ. ಕರ್ತವ್ಯ ನಿರ್ವಹಣೆ ಮತ್ತು ನೈತಿಕ ಅನುಷ್ಠಾನಗಳೆರಡೂ ಪರಸ್ಪರ ಪರಿವರ್ತನೀಯ ಪದಗಳು. ನೈತಿಕತೆಯ ಅನುಷ್ಠಾನವೆಂದರೆ, ಮನಸ್ಸಿನ ಹಾಗೂ ಭಾವಾತಿರೇಕಗಳ ಮೇಲಣ ನಿಯಂತ್ರಣವೆಂದರ್ಥ.'[೧೬] ನಾಗರಿಕತೆಯ ಬಗ್ಗೆ ಮಿರಾಬೊ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಗಾಂಧೀಜಿ ಒಪ್ಪುತ್ತಾರೆ. 'ನಿಷ್ಕೃಷ್ಟ ನಿಯಮಗಳನ್ನು ಮೀರುವಷ್ಟರ ಮಟ್ಟಿಗೆ ಸಭ್ಯತೆ ಮತ್ತು ಯೋಗ್ಯತೆಗಳನ್ನು ರೂಪಿಸಿಕೊಳ್ಳುವ ರೀತಿಯಲ್ಲಿ ನಡತೆಯಲ್ಲಿ ಮೃದುತ್ವ, ಸಂಸ್ಕೃತಿ, ನಯ ನಮ್ರತೆ, ಮತ್ತು ವಿದ್ಯಾಪ್ರಸಾರ ಇವುಗಳ ಅಭಿವ್ಯಕ್ತಿಯೇ ನಾಗರಿಕತೆ. ಸಚ್ಚಾರಿತ್ರ್ಯಕ್ಕೆ ರೂಪ ಮತ್ತು ಸತ್ತ್ವಗಳನ್ನು ತುಂಬದಿದ್ದರೆ ನಾಗರಿಕತೆಯಿಂದ ಸಮಾಜಕ್ಕೆ ಏನೂ ಪ್ರಯೋಜನವಾಗುವುದಿಲ್ಲ. ಈ ಎಲ್ಲ ಗುಣಗಳಿಂದ ಸಂಸ್ಕರಣಗೊಂಡ ಸಮಾಜಗಳ ಹೃದಯದಲ್ಲಿ ಮಾನವತ್ವದ ಪರಿಕಲ್ಪನೆ ಮೂಡುತ್ತದೆ'– ಮಿರಾಬೊ ಹೇಳಿರುವುದಿದು. ಆಧುನಿಕ ನಾಗರಿಕತೆಯ ಈ ಖಂಡನೆಯಿಂದಾಗಿ ಗಾಂಧೀಜಿ ಯಂತ್ರಗಳ ಪ್ರಯೋಜನದ ಬಗ್ಗೆ ಸಂದೇಹ ವ್ಯಕ್ತಪಡಿಸುತ್ತಾರೆ. ಮಗುವಿನ ಮೇಲೆ ಸ್ನಾನದ ನೀರನ್ನು ಎರಚಿದಂತಿದೆ ಈ ಭಾವನೆ. ಆಧುನಿಕ ನಾಗರಿಕತೆಯ ಪ್ರವೃತ್ತಿಯ ಬಗೆಗೆ ಗಾಂಧೀಜಿಯ ಆತಂಕವಿತ್ತೇ ಹೊರತು, ಅದನ್ನು ಖಂಡಿಸುವ ಇರಾದೆ ಅವರಿಗಿರಲಿಲ್ಲ. ಪಾಶ್ಚಾತ್ಯ ದೇಶಗಳಲ್ಲುಂಟಾದ ಕೈಗಾರಿಕೀಕರಣದ ಪರಿಣಾಮಗಳಿಂದಾಗಿ ಅವರು ಉದ್ವಿಗ್ನಗೊಂಡಿದ್ದರು. ಹೀಗೆ ಸೃಷ್ಟಿಯಾದ 'ರಾಶಿ ಗುಂಪು (Mass Society)' ಪಶ್ಚಿಮದ ಹಲವು ಮಂದಿ ಚಿಂತಕರ ಉಗ್ರ ಖಂಡನೆಗೆ ಗುರಿಯಾಗಿದೆ. 'ಅಮೆರಿಕೆಯ

೧೫. Rene Tullop Miller, *Dehumanisation in Modern Society.* p. 17.
೧೬. M.K. Gandhi, *Hind Swaraj,* p. 61.



ಡ್ವೈಟ್ ಮ್ಯಾಕ್ ಡೊನಾಲ್ಡ್‌ನಂಥ ಅಶುಭವಾದಿ (pessimist) ಗಳ ವಾದವನ್ನು ಒಪ್ಪದಿರುವುದು ಕಷ್ಟವಾಗುತ್ತದೆ. ಕೆಟ್ಟ ಹಣ ಒಳ್ಳೆಯ ಹಣವನ್ನು ಹೊರಗೆ ನೂಕುತ್ತದೆ ಎಂಬ ಗ್ರೆಷಮ್ ನಿಯಮವನ್ನು ನಮ್ಮ ನಾಗರಿಕತೆ ಅನುಸರಿಸುವಂತಿದೆ. ಅದೇ ರೀತಿ ಆಧುನಿಕ ಬಹುಸಂಖ್ಯಾ ಸಮಾಜದ ಸಂಸ್ಕೃತಿ (Mass Culture) ಯಾವುದೇ ಆಗಲಿ ತನ್ನತನವನ್ನುಳಿಸಿಕೊಳ್ಳಲು ತುಂಬ ಕಷ್ಟವಾಗುತ್ತದೆ. ಪ್ರಾಸಂಗಿಕವಾಗಿ ಈ ಸನ್ನಿವೇಶ ವಾಣಿಜ್ಯ ವ್ಯವಹಾರದ ಪ್ರಸಾರದಲ್ಲಿ ಮತ್ತು ರಾಶಿ ಉತ್ಪತ್ತಿಯ ವಿಧಾನಗಳ ಆಚರಣೆಯಲ್ಲಿ ಆರ್ಥಿಕ ಪರಿಣಾಮವನ್ನುಂಟು ಮಾಡುತ್ತದೆ'[೧೭] ಎಂದು ವಿಲ್‌ಹೆಲ್ಮ್ ರೋಪ್ಕೆ ಬರೆಯುತ್ತಾನೆ. ಅವನು ಮುಂದುವರಿಯುತ್ತ 'ಚದರ ಬಿಲ್ಲೆಯ ಸ್ನಾನಗೃಹಗಳು, ಜಲ್ಲಿ ರಸ್ತೆಗಳು ಮತ್ತು ದೂರದರ್ಶಕಗಳಿದ್ದರೂ, ಇಂದಿನ ಬಡಿವಾರದ ಸ್ಥಿತಿಯಲ್ಲಿ ಜನರ ಅಸ್ವಾಸ್ಥ್ಯಕ್ಕೆ ಕಾರಣಗಳೇನೆಂಬುದನ್ನು ವಿಮರ್ಶನ ಸಾಮರ್ಥ್ಯವಿಲ್ಲದವರು ಗ್ರಹಿಸಲಾರರು. ಮಾನವರ ಸುಖಕ್ಕೆಂದು ಮೃಗೀಯ ಸೌಕರ್ಯಗಳು ರಾಶಿ ಉತ್ಪನ್ನದ ಫಲವಾಗಿ ವಿಲೋಮ ಪ್ರಮಾಣದಲ್ಲಿ ಹೆಚ್ಚುತ್ತಿದ್ದರೂ, ಆ ರಾಶ್ಯುತ್ಪನ್ನದ ಫಲವಾಗಿ ಅತೃಪ್ತಿ ಅಸಮಾಧಾನಗಳು ಅಧಿಕಗೊಳ್ಳುತ್ತಿರುವುದನ್ನು ಆಶಾವಾದಿಗಳು ಕಡೆಗಣಿಸಲಾರರು' ಎಂದು ಸ್ಪಷ್ಟಪಡಿಸುತ್ತಾನೆ. ಪಾಶ್ಚಾತ್ಯ ಚಿಂತಕರು ವರ್ಣಿಸಿರುವ ಆಧುನಿಕ ಪಾಶ್ಚಾತ್ಯ ನಾಗರಿಕತೆ ಗಾಂಧೀಜಿಯ ವಿಷಣ್ಣ ಭವಿಷ್ಯ ಸೂಚನೆಯನ್ನು ಸಾಕಷ್ಟು ಸಮರ್ಥಿಸಿದೆ. ನಮ್ಮ ಆರ್ಥಿಕ ಸಂಸ್ಥೆಗಳನ್ನು ಪ್ರಭಾವಿಸುವ ಮೂಲಭೂತ ಮೌಲ್ಯಗಳು, ಲಾಭೋದ್ದೇಶಕ್ಕೆ ಮತ್ತು ಭೌತಿಕ ಪ್ರಗತಿಯ ಯಶಸ್ಸಿನ ಮೇಲೆ ಅಳೆಯುವ ನಾಗರಿಕತೆಗೆ ಒತ್ತು ಕೊಡುವ ಆಧುನಿಕ ಕೈಗಾರಿಕಾ ಆರ್ಥಿಕ ವ್ಯವಸ್ಥೆಯಿಂದ ಭಿನ್ನವಾಗಿರಬೇಕೆಂಬುದು ಅವರ ದೃಢ ನಿಶ್ಚಯ.[೧೮] 'ಆಧುನಿಕ ನಾಗರಿಕತೆಯ ಸನ್ನಿವೇಶದಲ್ಲಿ ಬದುಕುವ ಜನರ ಶರೀರ ಕ್ಷೇಮ ಅವರ ಜೀವನೋದ್ದೇಶವಾಗಿರಬೇಕೆಂಬ ಸಂಗತಿಯಲ್ಲಿ ನಾಗರಿಕತೆಯನ್ನು ಒರೆಯಿಕ್ಕಿ ನೋಡಬೇಕಾಗಿದೆಯೆಂಬುದು' ಅವರ ಅಭಿಮತ. ನಮ್ಮ ಪ್ರಾಚೀನರು ನಮ್ಮ ಸ್ವೇಚ್ಛಾಚಾರಗಳಿಗೆ ಮಿತಿ ವಿಧಿಸಿದ್ದರೆಂಬುದನ್ನವರು ಎತ್ತಿ ತೋರಿಸಿದರು. ಸುಖವೆನ್ನುವುದು ವಿಶೇಷವಾಗಿ ಮಾನಸಿಕ ಸ್ಥಿತಿಯೆಂಬುದು ಪ್ರಾಚೀನರ ನಿಲುವಾಗಿತ್ತು.

ಗಾಂಧೀಜಿ ವಿರಕ್ತರ ಸಮಾಜವನ್ನು ಸೃಷ್ಟಿಸಲು ಪ್ರಯತ್ನಿಸುತ್ತಿರುವುದಾಗಿಯೂ, ಅಂಥ ಸಮಾಜ ಅರ್ಥಶಾಸ್ತ್ರದ ಬಗ್ಗೆ ತೊಂದರೆ ತೆಗೆದುಕೊಳ್ಳಬಾರದೆಂದೂ ಕೆಲವು ವಿಮರ್ಶಕರು ಅವರ ಕನಿಷ್ಠ ಅಗತ್ಯಗಳ ಸೂತ್ರವನ್ನು ವಿರೋಧಿಸುತ್ತಾರೆ. ಆದರೆ ತಮ್ಮ ಕ್ಷೇಮಕ್ಕೆ ಅಮುಖ್ಯವಾದ ಅಗತ್ಯಗಳ ಮೋಹಕ್ಕೆ ಮನುಷ್ಯರು ಒಳಗಾಗಬಾರದೆಂಬ ಗಾಂಧೀಜಿಯ ಅಭಿಪ್ರಾಯವನ್ನು ಆ ವಿಮರ್ಶಕರು ಮರೆಯುತ್ತಾರೆ. ಪಾಶ್ಚಾತ್ಯ

೧೭. Wilhelm Ropke, *Humane Economy,* p. 58.
೧೮. International Development Reveiw, June 1963.

ಅರ್ಥಶಾಸ್ತ್ರಜ್ಞನೊಬ್ಬನ ಪ್ರಕಾರ, 'ತುಂಬ ಅಭಿವೃದ್ಧಿ ಹೊಂದಿರುವ ಸಮಾಜದಲ್ಲಿ ಕನಿಷ್ಠ ಕೆಲಸದ ವೇಳೆಯಲ್ಲಿ ವರಿಷ್ಠ ಪ್ರಮಾಣದ ಹಣವನ್ನು ಸಂಪಾದನೆ ಮಾಡುವುದು, ಮತ್ತು ರಾಶಿ ಉತ್ಪತ್ತಿಯ ಗುಣಮಟ್ಟದ ಸರಕನ್ನು ಕಂತು ವ್ಯವಸ್ಥೆಯ ಕೊಳ್ಳಾಟದಿಂದ ಪರಮಾವಧಿ ಬಳಕೆಯ ಮೂಲಕ ಮಾರ್ಗವನ್ನು ಕಂಡುಹಿಡಿಯುವುದೇ ಆದರ್ಶವೆಂದು ತೋರುತ್ತದೆ. ಹಣದ ವರಮಾನ ಮತ್ತು ಸರಕಿನ ರೂಪದ ಅದರ ಪರಿವರ್ತನೆ ಹೊರತಾಗಿ ಮಾನವನ ಸುಖಕ್ಕೆ ಸಾಧನವಾದ ಉಳಿದೆಲ್ಲವನ್ನು ಆಧುನಿಕ ಮಾನವ ಕಡೆಗಣಿಸುತ್ತಾನೆ.'[೧೯] 'ವೇತನ ಗಂಟಿನ ಭಾರದಿಂದ ಮತ್ತು ಬಳಕೆಯ ಸರಕುಗಳ ವೈವಿಧ್ಯ ವಿಸ್ತಾರದಿಂದ ತನ್ನ ಶ್ರೀಮಂತಿಕೆಯನ್ನಳೆಯುವ ಅಭಿವೃದ್ಧಿ ಹೊಂದಿದೆಯೆನಿಸಿಕೊಂಡಿರುವ ಸಮಾಜ ಅವನತಿ ಮುಖವಾಗಿದೆ'ಯೆಂದೇ ಸಂಯುಕ್ತ ರಾಷ್ಟ್ರ ಸಂಸ್ಥೆಯ ತಾಂತ್ರಿಕ ಸಹಾಯ ಮಂಡಳಿಯ ಪ್ರಾಂತೀಯ ಪ್ರತಿನಿಧಿ ಜಾರ್ಜ್ ವಿ ವಾನ್‌ಸ್ಮಿತ್ ಹೇಳುತ್ತಾನೆ.

ಪಾಶ್ಚಾತ್ಯ ನಾಗರಿಕತೆಯ ಬಗೆಗಿನ ಗಾಂಧೀಜಿಯ ದೃಷ್ಟಿಯಲ್ಲಿ ಕೆಲವರು ವ್ಯಂಗ್ಯವನ್ನು ಕಾಣುತ್ತಾರೆ. ಪೌರ್ವಾತ್ಯ ಸಂದೇಶಕ್ಕೆ ಬೆಲೆಕಟ್ಟುವ ಸಲುವಾಗಿ ಅವರು ಪಾಶ್ಚಾತ್ಯ ನಾಗರಿಕತೆಯಿಂದ ಸ್ಫೂರ್ತಿಯನ್ನು ಪಡೆದವರೆಂದು ಹೇಳಲಾಗಿದೆ. 'ಪಾಶ್ಚಾತ್ಯ ನಾಗರಿಕತೆಯ ಚೈತನ್ಯದಿಂದಲ್ಲದೆ ಒಬ್ಬ ಗಾಂಧಿಯಾಗಲಿ, ಒಬ್ಬ ಲೆನಿನ್ ಆಗಲಿ ಧಾರ್ಮಿಕ ಕ್ರಮ ತೆಗೆದುಕೊಳ್ಳುವುದಸಾಧ್ಯವಾಗುತ್ತಿತ್ತು' ಎಂದು ಪ್ರೊ. ಆರ್ನಾಲ್ಡ್ ಟಾಯಿನ್‌ಬಿ ಸೂಚಿಸುತ್ತಾರೆ. 'ಅಹಿಂಸಾ ಸಿದ್ಧಾಂತದ ಜೇನಸ್ ಮುಖದ[೧೯] ಈ ಅಧ್ವರ್ಯು ಪಾಶ್ಚಾತ್ಯ ರಾಷ್ಟ್ರಗಳಿಗೊಂದು ಸಂದೇಶವನ್ನು ನೀಡಿದ್ದಾರೆ; ಪಾಶ್ಚಾತ್ಯ ರಾಷ್ಟ್ರಗಳು ಗಾಂಧಿಯ ವಿಶ್ಲೇಷಣೆಯನ್ನು ನಿರ್ಲಕ್ಷಿಸುವಂತಿಲ್ಲ' ಎಂದು ಟಾಯಿನ್‌ಬಿ ತಿಳಿದಿದ್ದಾರೆ. ಪಾಶ್ಚಾತ್ಯ ಸತ್ವದ ಮೇಲಣ ಪ್ರಭಾವದ ಪರಿಣಾಮ ಪಾಶ್ಚಾತ್ಯ ನಾಗರಿಕತೆಗೆ ಶುದ್ಧಿಕಾರ್ಯ ಮಾಡುವಂಥದ್ದಾಗಿದೆ. ಗಾಂಧೀಜಿ ಪಾಶ್ಚಾತ್ಯ ನಾಗರಿಕತೆಯ ಅಪಾಯವನ್ನು ಅಂತರ್ಜ್ಞಾನದಿಂದರಿಯುತ್ತಾರೆ. ಮತ್ತು ಈ ಮಾದರಿಯ ನಾಗರಿಕತೆಯ ಆರ್ಥಿಕ ತೊಡಕನ್ನು ತಿರಸ್ಕರಿಸುವ ದರ್ಶನ ಸಾಮರ್ಥ್ಯ ಅವರಿಗಿತ್ತು. ಮಾಯಿರ್ ಕಾಲೇಜಿನ ಆರ್ಥಿಕ ಸಂಘದ ತಮ್ಮ ಭಾಷಣದಲ್ಲವರು ಈ ತಮ್ಮ ನಿಲವನ್ನು ಸಮರ್ಥಿಸಿಕೊಳ್ಳುತ್ತಾರೆ. ಈ ವಿಧಾನದ ಆಂತರಿಕ ಅರ್ಥಗಳ ಬಗ್ಗೆ ಇನ್ನೂ ಗಮನ ಹರಿಸಬೇಕಾಗಿದೆ. ಸಾಮರಸ್ಯ ಗಾಂಧೀಜಿಯ ಅನ್ವೇಷಣೆಯ ಗುರಿಯಾಗಿತ್ತು. ಕರ್ಷಣ ಮತ್ತು ವರ್ಗ ಸಂಘರ್ಷಗಳನ್ನು ಬಲ್ಲ ನಮಗೆ ಸಂಘರ್ಷವಿಲ್ಲದೆ ಆರ್ಥಿಕ ಪ್ರಗತಿಯನ್ನು ಸಾಧಿಸಲು ಅವರ ವಿಶ್ಲೇಷಣೆ ಮತ್ತು ಪಾಶ್ಚಾತ್ಯ ಕೈಗಾರಿಕಾ ನಾಗರಿಕತೆಯ ನಿರಾಕರಣೆ ಸಹಾಯಕ್ಕೊದಗುತ್ತವೆ. ಮನುಷ್ಯ ಮತ್ತು ಪ್ರಕೃತಿ, ಹಾಗೂ ಮನುಷ್ಯ ಮತ್ತು

೧೯. ತಲೆಯ ಮುಂಭಾಗ ಹಿಂಭಾಗಗಳಲ್ಲಿ ಮುಖಗಳಿರುವ ಇಟಲಿಯ ಪ್ರಾಚೀನ ದೇವತೆ.



ಮನುಷ್ಯರ ನಡುವೆ ಎರಡು ವಿಧವಾದ ಬಿಕ್ಕಟ್ಟುಗಳಿವೆ. ಪ್ರಕೃತಿ ಮತ್ತು ಮನುಷ್ಯರ ನಡುವಣ ಬಿಕ್ಕಟ್ಟನ್ನು ಬಿಡಿಸಲು ಪಾಶ್ಚಾತ್ಯ ಕೈಗಾರಿಕಾ ನಾಗರಿಕತೆ ಪ್ರಯತ್ನಿಸಿದೆ; ಆ ಪ್ರಕ್ರಿಯೆಯಲ್ಲದು ಮನುಷ್ಯ ಮನುಷ್ಯರ ನಡುವಣ ಸಂಘರ್ಷವನ್ನು ತೀವ್ರಗೊಳಿಸಿದೆ. ಈ ಪ್ರವೃತ್ತಿಯ ಸುಳುಹು ಗಾಂಧೀಜಿಗೆ ಸ್ಪಷ್ಟವಾಯಿತು. ಬಲೆಗೆ ಬೀಳದಂತೆ ಭಾರತವನ್ನು ರಕ್ಷಿಸುವುದು ಮತ್ತು ಆರ್ಥಿಕ ಪ್ರಗತಿಗಾಧಾರವಾದ ನೈತಿಕ ಪ್ರಗತಿಯ ಮೂಲಕ ಆರ್ಥಿಕ ಸಾಮರಸ್ಯವನ್ನು ಸಾಧಿಸುವುದು ಪಾಶ್ಚಾತ್ಯ ನಾಗರಿಕತೆಯ ಒಳ ವಿದ್ಯಮಾನಗಳ ನಿರಾಕರಣೆಯ ಗುರಿಯಾಗಿದೆ. 'ಇಂದು ಪಾಶ್ಚಾತ್ಯ ರಾಷ್ಟ್ರಗಳಿಗೆ ಬೇಕಾದ್ದು ಅತ್ಯುಚ್ಚ ನೈತಿಕ ಪ್ರಜ್ಞೆ ಮತ್ತು ಆರ್ಥಿಕ ಜ್ಞಾನಗಳ ಸಂಯೋಗ. ಆರ್ಥಿಕ ನೀತಿಯ ಅಜ್ಞಾನ ನೈತಿಕ ಜಡತೆಯ ಆರ್ಥಿಕತೆಯಷ್ಟೆ ಆಕ್ಷೇಪಾರ್ಹವಾದದ್ದು'[೨೦] ಪಾಶ್ಚಾತ್ಯ ನಾಗರಿಕತೆಯ ಬಗೆಗಿನ ಅವರ ಭಾವನೆ ಅಂತರ್ಜ್ಞಾನದಿಂದ ಲಭ್ಯವಾದದ್ದು; ರಾಜೀಮನೋಭಾವಕ್ಕೆ ಅವಕಾಶವೇ ಇಲ್ಲವೆಂಬ ನಂಬಿಕೆಯೇ ಅವರ ತೀವ್ರ ಖಂಡನೆಗೆ ಕಾರಣವಾದದ್ದು. ಕೆಲವು ಭಾಗಗಳು ಒಳ್ಳೆಯವು, ಮತ್ತೆ ಕೆಲವು ಕೆಟ್ಟವು ಅಥವಾ ಹಾಳಾದವು ಎಂದು ಹೇಳುವಂಥದ್ದಲ್ಲ. ಇದರಿಂದಾಗಿ, ಪಾಶ್ಚಾತ್ಯ ನಾಗರಿಕತೆಯ ಒಳ್ಳೆಯ ಭಾಗದಿಂದ ನಾವು ಭಾರತೀಯರು ಸ್ಫೂರ್ತಿಯನ್ನು ಪಡೆಯಬಹುದೆಂದು ಕೆಲವರು ವಾದಿಸುತ್ತಾರೆ. ಆದರೆ ಗಾಂಧೀಜಿಗೆ ಈ ಮನೋಧರ್ಮ ವಿದೇಶೀಯವಾಗಿ ಕಾಣುತ್ತದೆ. ಅವರು ಪಾಶ್ಚಾತ್ಯ ನಾಗರಿಕತೆಗೆ ವಿರುದ್ಧವಾಗಿ ತೀಕ್ಷ್ಣತೆಯಿಂದ ಮಾತಾಡುತ್ತಾರೆ. ಅವರ ಕೆಲವು ಹೇಳಿಕೆಗಳು ಪೂರ್ವಗ್ರಹದಿಂದ ಕೂಡಿದ್ದಂತೆ, ಕೆಲವೊಮ್ಮೆ ಅತಿಯೆಂಬಂತೆ ತೋರುತ್ತಿದ್ದುವು. 'ಈ ನಾಗರಿಕತೆ ಧರ್ಮಬಾಹಿರವಾದದ್ದು; ಅದು ಎಷ್ಟರಮಟ್ಟಿಗೆ ಯೂರೋಪಿಯನ್ನರನ್ನು ವಶಪಡಿಸಿಕೊಂಡಿದೆಯೆಂದರೆ, ಅದರ ಅನುಯಾಯಿಗಳು ಅರೆಹುಚ್ಚರಂತೆ ತೋರುತ್ತಾರೆ' ಎಂದವರು ತಮ್ಮ 'ಹಿಂದ್ ಸ್ವರಾಜ್' ಗ್ರಂಥದಲ್ಲಿ ಬರೆದರು. ಆ ವಾದವನ್ನವರು ಮುಂದುವರಿಸುತ್ತ 'ಮಹಮ್ಮದರ ಬೋಧನೆಯ ಪ್ರಕಾರ ಅದು ಸೈತಾನೀ ನಾಗರಿಕತೆಯೆಂದು ಕರೆಯಲ್ಪಡುತ್ತದೆ. ಹಿಂದು ಧರ್ಮ ಅದನ್ನು ಕತ್ತಲ ಯುಗ ಎಂದು ಕರೆಯುತ್ತದೆ. ಅದರ ಬಗ್ಗೆ ನಾನು ಯುಕ್ತವಾದ ವಿವರಣೆ ನೀಡಲಾರೆ. ಅದು ಇಂಗ್ಲಿಷ್ ಜನಾಂಗದ ಜೀವ ಚೈತನ್ಯವನ್ನೇ ಹೀರುತ್ತಿದೆ. ಅವನ್ನು ತಿರಸ್ಕರಿಸಬೇಕು. ಸಂಸತ್ತುಗಳು ವಾಸ್ತವವಾಗಿ ಗುಲಾಮತನದ ಲಾಂಛನಗಳಾಗಿವೆ. ನೀವು ಇದರ ಬಗ್ಗೆ ಸಾಕಷ್ಟು ಯೋಚಿಸುವುದಾದರೆ, ನೀವು ಅದೇ ಅಭಿಪ್ರಾಯವನ್ನು ಸ್ವೀಕರಿಸುತ್ತೀರಿ; ಆಂಗ್ಲರ ನಿಂದೆಯನ್ನು ನಿಲ್ಲಿಸುತ್ತೀರಿ.' ೧೯೦೮ರಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ಈಗಲೂ ಸ್ವಾಗತವಿದೆಯೆ ಎಂದು ೧೯೩೮ರಲ್ಲಿ ಗಾಂಧೀಜಿಯನ್ನು ಕೇಳಿದಾಗ

೨೦. Wilhelm Ropke, *Humane Economy,* p. 104.

'ಚಂಡಮಾರುತದಿಂದ ಕೂಡಿದ ಈ ಮೂವತ್ತು ವರ್ಷಗಳನ್ನು ಕಳೆದಿರಬೇಕಾದರೆ, ನನ್ನ ಅಭಿಪ್ರಾಯಗಳನ್ನು ಬದಲಾಯಿಸಲು ಏನೇನೂ ಕಾರಣವಿಲ್ಲ. ಕಾರ್ಮಿಕರೊಡನೆಯ ಸಂವಾದಗಳ ಪ್ರಾಮಾಣಿಕ ದಾಖಲೆಯಿದೆಂಬುದನ್ನು ಓದುಗ ನೆನಪಿಡಲಿ. ಆ ಕಾರ್ಮಿಕರಲ್ಲೊಬ್ಬ ಕಟ್ಟಾ ಅರಾಜಕವಾದಿ, ದಕ್ಷಿಣ ಆಫ್ರಿಕಾದ ಭಾರತೀಯರ ಕಡೆಗೆ ಹರಡುತ್ತಿದ್ದ ಕೊಳೆಯನ್ನದು ತಡೆಗಟ್ಟಿತೆಂಬುದನ್ನವನು ಅರಿತಿರಬೇಕು.'[೨೧] 'ಹಿಂದ್ ಸ್ವರಾಜ್' ಬಗ್ಗೆ ಅದರಲ್ಲಿಯೂ ಪಾಶ್ಚಾತ್ಯ ನಾಗರಿಕತೆಯ ಬಗೆಗಿನ ಆ ಗಾಂಧೀಜಿಯ ಅಭಿಪ್ರಾಯಗಳನ್ನು ಕುರಿತು ವ್ಯಾಖ್ಯಾನ ಮಾಡುತ್ತ ೧೯೩೮ರಲ್ಲಿ ಜಿ.ಡಿ.ಎಚ್. ಕೋಲ್ ಬರೆದದ್ದು ಹೀಗೆ: 'ಮೂವತ್ತು ವರ್ಷಗಳ ಹಿಂದೆ ನಮ್ಮಂಥ ಪಾಶ್ಚಾತ್ಯರಿಗೆ ಗಾಂಧಿ ವ್ಯವಹಾರ ಹೇಗೆ ಕಾಣುತ್ತಿತ್ತೋ ಅದಕ್ಕಿಂತ ಅತ್ಯಂತ ಬಲವಾಗಿ ಈಗ ಕಾಣುತ್ತಿದೆ.'

ಆಂಗ್ಲರು ಭಾರತವನ್ನು ಗುಲಾಮೀಕರಿಸಿಕೊಂಡಿರುವ ಸಂಗತಿಯಿಂದಾಗಿ ಪಾಶ್ಚಾತ್ಯನಾಗರಿಕತೆಯ ಬಗೆಗಿನ ಗಾಂಧಿಯ ಮನೋಧರ್ಮ ವಿಕಲ್ಪಗೊಂಡಿರಬೇಕೆಂಬ ಅಭಿಪ್ರಾಯವೂ ಇದೆ. ಇಂಗ್ಲಿಷರು ಇಂಡಿಯಾವನ್ನು ಗೆದ್ದುಕೊಂಡರೆಂಬ ಅಭಿಪ್ರಾಯವನ್ನು ಗಾಂಧಿ ಎಂದೂ ಒಪ್ಪಿಕೊಳ್ಳಲಿಲ್ಲ. 'ಆಂಗ್ಲರು ಇಂಡಿಯಾವನ್ನು ಗೆದ್ದುಕೊಂಡಿಲ್ಲ ; ನಾವದನ್ನು ಅವರಿಗೆ ಒಪ್ಪಿಸಿದ್ದೇವೆ – ತಮ್ಮ ಶಕ್ತಿಯಿಂದಾಗಿ ಅವರು ಇಂಡಿಯಾದಲ್ಲುಳಿದಿಲ್ಲ ; ನಾವವರನ್ನುಳಿಸಿಕೊಂಡಿದ್ದೇವೆ'. ಈ ವಿಶ್ವಾಸ ಟಾಲ್ಸ್‌ಟಾಯ್ ಹಿಂದೂವೊಬ್ಬನಿಗೆ ಬರೆದ ಪತ್ರಕ್ಕೆ ಗಾಂಧಿ ಬರೆದ ಮುನ್ನುಡಿಯಲ್ಲಿ ಸುಸ್ಪಷ್ಟವಾಗಿ ಅಭಿವ್ಯಕ್ತಗೊಂಡಿದೆ : 'ಆಂಗ್ಲರ ಆಡಳಿತದ ಬಗೆಗಿನ ನಮ್ಮ ಅಸಹನೆಯಿಂದಾಗಿ, ನಾವು ಒಂದು ಕೇಡಿಗೆ ಬದಲಾಗಿ ಮತ್ತೊಂದನ್ನು, ಅದಕ್ಕಿಂತಲೂ ಕ್ರೂರವಾದದ್ದನ್ನು ಆಹ್ವಾನಿಸಬಹುದೆ ಎಂಬ ವಿಷಯವಾಗಿ ಆಲೋಚಿಸಬೇಕಾದ್ದು ನಮಗೆ ಬಿಟ್ಟದ್ದು. ಆಗ ಜಗತ್ತಿನ ಎಲ್ಲ ಮಹಾ ಧರ್ಮಗಳ ಪೋಷಣಾಲಯವಾಗಿದ್ದ ಭಾರತ ಸರ್ವಜನಾಂಗಗಳ ರಾಷ್ಟ್ರೀಯ ಭಾರತವಾಗುಳಿಯಲಾರದು. ಅವಳೇನೇ ಆಗುವುದಿರಲಿ, ಈ ಪವಿತ್ರ ನೆಲದ ಮೇಲೆ ಬಂದೂಕದ ಕಾರ್ಖಾನೆಗಳ ಮತ್ತು ಅಸಹ್ಯ ಕೈಗಾರಿಕೀಕರಣಗಳ ಅನುಕರಣದ ಹಾಗೂ ಯೂರೋಪಿನ ಜನರನ್ನು ದಾಸ್ಯಕ್ಕೀಡುಮಾಡಿರುವ ನಾಗರಿಕತೆಯ ಪ್ರಕ್ರಮದ ಮೂಲಕ ಮುಂದುವರಿದಾಗ ಮನುಕುಲದ ಆಸ್ತಿಯಾದ ಶ್ರೇಷ್ಠತಮ ಸಹಜ ಗುಣಗಳನ್ನು ಆ ನಾಗರಿಕತೆ ಉಸಿರುಕಟ್ಟಿಸುತ್ತದೆ.'[೨೨]

'ಗಾಂಧಿ ಪ್ರಣೀತ ಕ್ರಾಂತಿ ಕೈಗಾರೀಕರಣವನ್ನು ವಸಾಹತುಷಾಹಿಯೊಡನೆ ಸಂಯೋಜಿಸಬೇಕು ; ಮತ್ತು ವಸಾಹತುಷಾಹಿ ವಿರುದ್ಧವಾದ ಹೋರಾಟದ

೨೧. Aryan Path, *Hind Swaraj* Number,1938.
೨೨. Kalidas Nag, *Tolstoy and Gandhi,* Appx. p. 79.



ಮುಂದಾಳುತನದಲ್ಲಿ ಗಾಂಧಿ ಕೈಗಾರಿಕೀಕರಣವನ್ನು ವಿರೋಧಿಸಬೇಕು'[೨೩] ಎಂದು ಚೆಸ್ಟರ್ ಬೌಲ್ಸ್ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಟಾಲ್ಸ್‌ಟಾಯರ ಪತ್ರವನ್ನು ಪರಿಚಯಿಸುವಾಗ ಗಾಂಧೀಜಿ ಮಾಡಿದ ವ್ಯಾಖ್ಯಾನದ ದೃಷ್ಟಿಯಿಂದ ಈ ಅಭಿಪ್ರಾಯವನ್ನು ತುಸು ಬದಲಾಯಿಸಿಕೊಳ್ಳಬೇಕಾಗುತ್ತದೆ. ಅವರು ವಸಾಹತುಷಾಹಿಯನ್ನು ವಿರೋಧಿಸಿದ್ದು ನಿಜ ; ಆದರೆ ವಿದೇಶೀಯ ಆಡಳಿತವನ್ನು ಕೊನೆಗಾಣಿಸುವುದೆಂದರೆ ಯಂತ್ರಗಳ ಒಡೆತನವನ್ನು ಹೊಂದಿರುವ ಯಜಮಾನರ ಬದಲಾವಣೆಯ ಉದ್ದೇಶವಾಗಿರಲಿಲ್ಲ.

ಪ್ರಾಯಿಕವಾಗಿ ಪಾಶ್ಚಾತ್ಯ ನಾಗರಿಕತೆಯ ತೀವ್ರ ಹೇವರಿಕೆಯಿಂದಾಗಿ, ಅವರು ಯಂತ್ರಗಳಿಗೆ ಮತ್ತು ಕೈಗಾರಿಕೀಕರಣಕ್ಕೆ ಒತ್ತಾಸೆ ನೀಡಲಿಲ್ಲ. ಪಾಶ್ಚಾತ್ಯ ದೇಶಗಳು ಅಭಿವೃದ್ಧಿ ಹೊಂದಿ, ಭಾರತದಂಥ ದೇಶಗಳು ಬಡವಾಗಲು ಕೈಗಾರಿಕೀಕರಣವೇ ಕಾರಣವೆಂಬುದನ್ನವರು ಬಲ್ಲರು. ಇಂಗ್ಲೆಂಡಿನ ಕಡೆಗೆ ಗಮನ ಸೆಳೆಯುತ್ತ 'ಇಂಗ್ಲೆಂಡು ಅಂಗಡಿಕಾರರ ರಾಷ್ಟ್ರವೆಂದು ನೆಪೋಲಿಯನ್ ವರ್ಣಿಸಿದ್ದಾನಂತೆ. ಅದು ಯೋಗ್ಯ, ಉಚಿತ ವರ್ಣನೆ. ಯಾವ ದೇಶದ ಮೇಲೆ ಅವರು ಅಧಿಕಾರ ಚಲಾಯಿಸುತ್ತಾರೆಯೋ ಅದನ್ನು ವಾಣಿಜ್ಯ ವ್ಯಾಪಾರಕ್ಕಾಗಿ ಹಿಡಿದಿಟ್ಟುಕೊಳ್ಳುತ್ತಾರೆ' ಎಂದವರು ಬರೆದದ್ದುಂಟು..... 'ನಾವವರ ವ್ಯಾಪಾರ ವಹಿವಾಟನ್ನು ಮೆಚ್ಚುತ್ತೇವೆ. ಅವರು ತಮ್ಮ ಸೂಕ್ಷ್ಮ ವಿಧಾನಗಳಿಂದ ನಮ್ಮನ್ನು ಹರ್ಷಪಡಿಸುತ್ತಾರೆ, ತಮಗೆ ಬೇಕಾದ್ದನ್ನು ನಮ್ಮಿಂದ ಪಡೆಯುತ್ತಾರೆ' ಎಂದವರು ಲಿಖಿಸುತ್ತಾರೆ. ಇಂಗ್ಲಿಷರ ಹಿಡಿತದಿಂದ ಇಂಡಿಯಾವನ್ನು ಮುಕ್ತಗೊಳಿಸುವುದರಿಂದ, ಅವಳು ಆರ್ಥಿಕ ಸ್ವಾತಂತ್ರ್ಯವನ್ನು ಪಡೆದು, ತನ್ನ ಜಾಯಮಾನಕ್ಕೆ ತಕ್ಕ ನೀತಿಯನ್ನು ಆರ್ಥಿಕ ಕ್ಷೇತ್ರದಲ್ಲಿ ರೂಪಿಸಿಕೊಳ್ಳಬಹುದೆಂದವರು ಆಲೋಚಿಸಿದ್ದು ಸ್ಪಷ್ಟ. ಇಂಡಿಯಾದಲ್ಲಿ ಆಂಗ್ಲರ ಆಡಳಿತದ ಪೂರ್ಣ ಆರ್ಥಿಕ ಅಂತರಾರ್ಥಗಳನ್ನು ವಿಶ್ಲೇಷಣೆ ಮಾಡುವಲ್ಲಿ ಪ್ರಾಯಶಃ ಸೋತಿದ್ದರು. ಇತರ ವಿಚಾರಗಳಂತೆ, ಭಾರತದ ಮೇಲಣ ಪಾಶ್ಚಾತ್ಯ ಪ್ರಭಾವ ಜಾಗತಿಕ ಆರ್ಥಿಕತೆಯ ಬಿರುಗಾಳಿಯಲ್ಲಿ ಸಿಕ್ಕಿಕೊಂಡಿತ್ತು. ಹಳ್ಳಿಯ ಸಾಟಿ ಆರ್ಥಿಕ ವ್ಯವಹಾರ ಮುರಿದುಬಿತ್ತು; ಅದರ ಬದಲಿಗೆ ಹಣದ ವ್ಯವಹಾರ ಚಾಲನೆಗೆ ಬಂತು. ಇದರಿಂದಾಗಿ ಗ್ರಾಮೀಣ ಜನರ ಕೆಳವರ್ಗ ಸೃಷ್ಟಿಯಾಯಿತು; ಆ ಕ್ಷೇತ್ರಗಳ ಆರ್ಥಿಕ ವ್ಯವಹಾರಗಳು ಪರಾವಲಂಬನೆಗೆ, ಅಂದರೆ ಪಾಶ್ಚಾತ್ಯ ದೇಶಗಳ ಅಗತ್ಯಗಳಿಗೆ ಅಧೀನವಾದುವು. ಶೋಷಕ ಪ್ರವೃತ್ತಿಯ ಪಾಶ್ಚಾತ್ಯರು ಸಹ ಇಂಡಿಯಾಕ್ಕೆ ತಾವು ನುಸುಳಿದುದರ ಕೆಲವು ಪರಿಣಾಮಗಳನ್ನು ಮುಂಗಂಡಿರಲಾರರು. ಭಾರತದ ಸುಲಿಗೆಯಿಂದಾಗಿ ಸಾಮಾಜಿಕ ಸಂಬಂಧಗಳ ಹೊಸ ವರ್ಗ ಸೃಷ್ಟಿಯಾಯಿತು. ಪಾಶ್ಚಾತ್ಯ ತಂತ್ರಗಾರಿಕೆಯ

೨೩. Chester Bowles, *The Making of a Just Society,* Delhi University, p. 91.

ಚುರುಕು ಹಾಗೂ ಅದರ ಜತೆಗೂಡಿದ ಸೈನಿಕ ಶಕ್ತಿ ಶ್ರೇಷ್ಠತಮ ಸಂಸ್ಕೃತಿಯ ಮತ್ತು ಸಾಮಾಜಿಕ ಏಕತೆಯ ಭಂಗಕ್ಕೆ ಕಾರಣವಾದುವು. 'ಭದ್ರತೆಗೆ ಬದಲಾಗಿ ಅಭದ್ರತೆ, ಘನತೆಗೆ ಬದಲಾಗಿ ಅವಮಾನ, ಕೆಳಮಟ್ಟದ ಅಗತ್ಯಗಳಿಗೆ ಬದಲಾಗಿ ದಾರಿದ್ರ್ಯ, ಸ್ವಾತಂತ್ರ್ಯಕ್ಕೆ ಬದಲಾಗಿ ಪರಾವಲಂಬನೆ ಪ್ರಾಪ್ತವಾದುವು. ಪಾಶ್ಚಾತ್ಯರ ವಸಾಹತು ರಾಷ್ಟ್ರದ ಸುಲಿಗೆ ತರ್ಕಬದ್ಧವಾಗಿ ಕೈಗಾರಿಕೀಕರಣದ ಮೇಲಿನ ಒತ್ತಡವನ್ನು ತೀವ್ರಗೊಳಿಸುತ್ತದೆ. ಶೋಷಿತ ದೇಶದ ಕೈಗಾರಿಕೀಕರಣ ಮಾತ್ರವೇ ತೃಪ್ತಿಕರವಾದ ಪರಿಹಾರವೆಂಬಂತೆ ಆರ್ಥಿಕ ಶೋಷಣೆಯ ಪರಿಣಾಮದಿಂದಾದ ದಾರಿದ್ರ್ಯವು ತೋರಿಸುತ್ತದೆ. ಇಂಡಿಯಾ ಸ್ವತಂತ್ರವಾದ ಕೂಡಲೇ ಸನ್ನಿವೇಶವನ್ನು ಹದಗೆಡಿಸುವಂಥ ಕೈಗಾರಿಕೀಕರಣ ವ್ಯಾಮೋಹವನ್ನು ಗೆಲ್ಲುವ ಸಲುವಾಗಿ ತಾನೇ ರೂಪಿಸಿದ ರಚನಾತ್ಮಕ ಕಾರ್ಯಕ್ರಮವನ್ನದು ಅನುಸರಿಸುತ್ತದೆಂದು ಊಹಿಸಬಹುದಾಗಿದೆ.

ಗಾಂಧಿಯವರ ಭಾವನೆಗಳ ವಿಕಾಸವನ್ನು ಗ್ರಹಿಸುವಲ್ಲಿ ನಾವು ಕೆಲವು ವಿಕಾಸಶೀಲ ಪ್ರಭಾವಗಳನ್ನು ಗಮನಿಸಬೇಕಾಗಿದೆ. ಟಾಲ್‌ಸ್ಟಾಯ್, ರಸ್ಕಿನ್ ಮತ್ತು ಇತರರ ಋಣವನ್ನವರು ಉದಾರವಾಗಿ ಒಪ್ಪಿಕೊಂಡರೆಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ತಮ್ಮ ಆತ್ಮಕಥೆಯನ್ನು ಗಾಂಧೀಜಿ ತುಂಬ ವಿಶಿಷ್ಟವಾದ ವಾಕ್ಯದೊಂದಿಗೆ ಪರಿಸಮಾಪ್ತಿಗೊಳಿಸುತ್ತಾರೆ : "ಮೂವರು ಆಧುನಿಕರು ನನ್ನ ಜೀವನದ ಮೇಲೆ ಅದಮ್ಯವಾದ ಪ್ರಭಾವವನ್ನು ಬೀರಿದ್ದಾರೆ ಮತ್ತು ನನ್ನ ಮನಸ್ಸನ್ನಾಕರ್ಷಿಸಿಕೊಂಡಿದ್ದಾರೆ : ಬದುಕಿನ ಸಂಪರ್ಕದಿಂದ ರಾಯಚಂದ್ ಭಾಯಿ; 'ದೇವರ ರಾಜ್ಯ ನಿನ್ನೊಳಗಿದೆ' ಎಂಬ ಪುಸ್ತಕದ ಮೂಲಕ ಟಾಲ್‌ಸ್ಟಾಯ್ ಮತ್ತು 'ಅಂತ್ಯೋದಯ'ದ ಮೂಲಕ ರಸ್ಕಿನ್. ಟಾಲ್‌ಸ್ಟಾಯ್‌ರ 'ದೇವರ ರಾಜ್ಯ ನಿನ್ನೊಳಗಿದೆ' ಎಂಬ ಪುಸ್ತಕ ನನ್ನನ್ನು ಸಂಪೂರ್ಣವಾಗಿ ವಶಪಡಿಸಿಕೊಂಡಿತು. ಅದು ನನ್ನ ಮೇಲೆ ಶಾಶ್ವತವಾದ ಮುದ್ರೆಯನ್ನೊತ್ತಿತು. ಸ್ವತಂತ್ರವಾದ ಆಲೋಚನೆ, ಭವ್ಯ ನೈತಿಕತೆ, ಮತ್ತು ನಿಜ ಸ್ವರೂಪವನ್ನೊಳಗೊಂಡ ಈ ಗ್ರಂಥದ ಮುಂದೆ ಕೋಟ್ಸ್ ಅವರು ನನಗೆ ಕೊಟ್ಟ ಎಲ್ಲ ಗ್ರಂಥಗಳು ನಿಸ್ತೇಜವಾಗಿ ಮಹತ್ವವನ್ನು ಕಳೆದುಕೊಳ್ಳುತ್ತವೆ." ೧೮೭೪ರ ಸಮಯದಲ್ಲಿ ಟಾಲ್‌ಸ್ಟಾಯ್ 'ರೊಟ್ಟಿಶ್ರಮ'ದ ಬಗ್ಗೆ ಆಲೋಚಿಸತೊಡಗಿದರು. ಅದು ಗಾಂಧಿಯವರ ಗಮನವನ್ನು ಸೆಳೆಯಿತು. ಟಾಲ್‌ಸ್ಟಾಯ್‌ರ ಬದುಕಿನ ಈ ಮುಖವನ್ನವರು ಮುಂದೆ ಕಾಣಿಸಿರುವ ಮಾತುಗಳ ಮೂಲಕ ವ್ಯಾಖ್ಯಾನಿಸಿದರು ; 'ಮನುಷ್ಯ ತನ್ನ ಕೈಗಳ ಮೂಲಕ ಕೆಲಸ ಮಾಡಿ, ರೊಟ್ಟಿಯನ್ನು ಸಂಪಾದಿಸಿಕೊಳ್ಳಬೇಕೆಂಬ ದೈವೀ ನಿಯಮವನ್ನು ಮೊದಲು ಪ್ರತಿಪಾದಿಸಿದವರು ಟಿ.ಎಂ. ಬೊಂದರೆಫ್ ಎಂಬ ರಷ್ಯನ್ ಲೇಖಕ. ಟಾಲ್‌ಸ್ಟಾಯ್ ಆ ಕಡೆ ಗಮನಹರಿಸಿ, ಅದನ್ನು ವ್ಯಾಪಕವಾಗಿ ಪ್ರಚುರಪಡಿಸಿದರು'. ರೊಟ್ಟಿಶ್ರಮದ ಪರಿಕಲ್ಪನೆ ಗಾಂಧಿಯ ಮೇಲೆ ಅಪಾರ ಪ್ರಭಾವ ಬೀರಿದ್ದಲ್ಲದೆ, ಯಂತ್ರ ತಂತ್ರವನ್ನು



ತ್ಯಜಿಸಬೇಕೆಂಬ ಅವರ ವಿಶ್ವಾಸವನ್ನು ಬಲಗೊಳಿಸಿತು. 'ಶಾರೀರಿಕ ಶ್ರಮವನ್ನು ಕೈಗೊಳ್ಳದ ಮನುಷ್ಯನಿಗೆ ತಿನ್ನುವ ಹಕ್ಕಿದೆಯೆ?' ಎಂದು ಗಾಂಧಿ ಪ್ರಶ್ನಿಸಿದರು. ಇಂಡಿಯಾದಲ್ಲಿ ಹತ್ತರಲ್ಲೊಂಬತ್ತು ಭಾಗಕ್ಕಿಂತ ಹೆಚ್ಚು ಜನ ಉಳುಮೆಯಿಂದ ಜೀವನ ಸಾಗಿಸುತ್ತಿದ್ದಾರೆಂಬ ಸಂಗತಿಯನ್ನವರು ಪ್ರಸ್ತಾಪಿಸುತ್ತಾರೆ. ಉಳಿದೊಂದು ಭಾಗದ ಜನರೂ ತಮ್ಮ ಆಹಾರವನ್ನು ಗಳಿಸಲು ಶ್ರಮಿಸಲೆಂದು ಹಾರೈಸುತ್ತಾರೆ. ಈ ಭಾವನೆಯನ್ನು ಕಾರ್ಯಗತಗೊಳಿಸಿದ್ದಾದರೆ, ಛಿದ್ರ ವಿಚ್ಛಿದ್ರಗೊಳಿಸುವ ಸ್ಥಾನಮಾನಗಳ ತಾರತಮ್ಯಗಳು ಇಲ್ಲವಾಗುತ್ತವೆಂದವರು ಭಾವಿಸುತ್ತಾರೆ. ತಮ್ಮ ರೊಟ್ಟಿಗಾಗಿ ಪ್ರತಿಯೊಬ್ಬರೂ ದುಡಿದಿದ್ದಾದರೆ ವರ್ಗಭೇದಗಳು ಮಾಯವಾಗುತ್ತವೆಂದು, ಶ್ರೀಮಂತರಿದ್ದರೂ ಅವರು ತಮ್ಮ ಆಸ್ತಿಯ ಧರ್ಮದರ್ಶಿಗಳಾಗಿದ್ದು, ಅದನ್ನು ಸಾರ್ವಜನಿಕ ಹಿತಕ್ಕಾಗಿ ಮುಖ್ಯವಾಗಿ ವಿನಿಯೋಗಿಸುವರೆಂದವರು ತಮ್ಮ ಭಾವನೆಯನ್ನು ಮುಂದುವರಿಸುತ್ತಾರೆ. ಸಾಮಾನ್ಯವಾಗಿ ಕೃಷಿವಲಯಕ್ಕೆ ಅನ್ವಯಿಸಬಹುದಾದ ಈ ಭಾವನೆಯನ್ನು ಇತರ ಕ್ಷೇತ್ರಗಳಿಗೂ ಅನ್ವಯಿಸಬಹುದೆಂದವರು ಉತ್ಸಾಹದಿಂದಿದ್ದರು. ಈ ವಿಷಯದಲ್ಲಿ ಕೃಷಿ ಕ್ಷೇತ್ರ ಆದರ್ಶಪ್ರಾಯವಾದದ್ದೆಂದವರು ತಿಳಿದಿದ್ದರೂ, ಉಳುಮೆಗೆ ಬದಲಾಗಿ, ಜನ ನೂಲು ತೆಗೆಯಬಹುದು, ನೇಯಬಹುದು, ಅಥವಾ ಮರಗೆಲಸ, ಇಲ್ಲವೆ ಕಮ್ಮಾರಿಕೆಯಲ್ಲಿ ತೊಡಗಿಕೊಳ್ಳಬಹುದೆಂದು ಬಯಸಿದರು. ಜನ ಹಳ್ಳಿಗಳಿಗೆ ಹಿಂದಿರುಗಬೇಕೆಂದವರು ಸಲಹೆ ಮಾಡುವಲ್ಲಿ, ರೊಟ್ಟಿ ದುಡಿಮೆಯ ಕರ್ತವ್ಯದ ಮತ್ತು ಅದು ಒಳಗೊಂಡಿರುವ ಎಲ್ಲ ಅರ್ಥಗಳಲ್ಲಿ ಸ್ವಪ್ರೇರಣೆಯ ಅಂಗೀಕಾರವಿದೆಯೆಂಬುದನ್ನವರು ನಿರೀಕ್ಷಿಸಿದರು. ಗಾಂಧಿಯ ಗ್ರಾಮೀಣ ಕೈಗಾರಿಕೆಗಳ ಕಾರ್ಯಕ್ರಮದ ಹಿಂದೆ ಈ ಭಾವನೆಯಿತ್ತು. ಆಹಾರಾಭಾವ ಮತ್ತು ವಸ್ತ್ರ ಕ್ಷಾಮದಿಂದ ಕೂಡಿದ ಈ ದೇಶದ ಬಡತನವನ್ನು 'ರೊಟ್ಟಿ ದುಡಿಮೆ' ನಿಯಮದ ಮೂಲಕ ಪರಿಹರಿಸಬಹುದೆಂದವರು ನಂಬಿದ್ದರು. 'ಇಡೀ ಇಂಡಿಯಾ ದಾರಿದ್ರ್ಯ ಮತ್ತು ನಗ್ನತೆಗಳ ಅಂಚಿನಲ್ಲಿದೆಯೆಂದು ಪತ್ರಿಕೆಗಳಲ್ಲಿ ಓದುತ್ತೇವೆ; ತಮ್ಮ ಯೋಜನೆಯನ್ನೊಪ್ಪಿಕೊಂಡದ್ದಾದರೆ, ದೇಶದಲ್ಲಿ ಸಾಕಷ್ಟು ಆಹಾರ ಮತ್ತು ಖಾದಿ ದೊರಕುತ್ತವೆ; ಜನರೇ ಅವುಗಳನ್ನು ಉತ್ಪತ್ತಿ ಮಾಡಿಕೊಳ್ಳುತ್ತಾರೆ' ಎಂದವರು ಸ್ಪಷ್ಟವಾಗಿ ನುಡಿದರು.

ರೊಟ್ಟಿ ದುಡಿಮೆಯ ಭಾವನೆಯಲ್ಲದೆ, ಪರಸ್ಪರ ಸಹಾಯ ಮತ್ತು ಸ್ವಪರಿಪೂರ್ಣತೆಯ ಭಾವನೆಯೂ ಟಾಲ್‌ಸ್ಟಾಯ್‌ರಿಂದ ಗಾಂಧೀಜಿಯವರಿಗೊದಗಿತೆಂದು ನಾವು ಊಹಿಸಬಹುದಾಗಿದೆ. ಗಾಂಧೀಜಿಯ ಮೊತ್ತಮೊದಲ ಜೀವನ ಚರಿತ್ರಕಾರರಾದ ರೆವರೆಂಡ್ ಜೋಸೆಫ್ ದೋಕೆ ಅವರ ಪ್ರಕಾರ, ಗಾಂಧೀಜಿ ಟಾಲ್‌ಸ್ಟಾಯ್‌ರ ಕೃತಿಗಳನ್ನು ತೀವ್ರಾಸಕ್ತಿಯಿಂದ ಅಧ್ಯಯನ

ಮಾಡುತ್ತಿದ್ದರು. ದೋಕೆಯವರ ಪ್ರಕಾರ, ಗಾಂಧಿಯೊಬ್ಬರು ಪ್ರಯೋಗಶೀಲ ಕನಸುಗಾರರು; ಅಹಿಂಸಾತ್ಮಕ ಕೆಲಸಗಾರರ ಪಡೆಯನ್ನು ಕಟ್ಟುವ ಕನಸನ್ನು ನನಸುಗೊಳಿಸುವಲ್ಲಿ ಪ್ರಗತಿಪರ ಹೆಜ್ಜೆಯನ್ನಿಟ್ಟರು; 'ಗ್ರಾಮೀಣ ಆವರಣದಲ್ಲಿ ಒಂದು ರೀತಿಯ ಸಹಕಾರೀ ಸಮುದಾಯದಂತೆ ಒಂದು ಕುಟುಂಬದೋಪಾದಿಯಲ್ಲಿ ಕೆಲಸಗಾರರು ಒಟ್ಟಿಗೆ ವಾಸಿಸುತ್ತಿದ್ದರು ; ಪರಸ್ಪರ ಸಾಮರಸ್ಯದಿಂದ ಸರಳವೂ ವಿನೂತನವೂ ಆದ ಬದುಕನ್ನು ನಡೆಸುವುದರಲ್ಲಿ ಅವರಿಗೆ ತರಬೇತಿಯಾಗಿತ್ತು.' ಜೊಹಾನ್ಸ್‌ಬರ್ಗ್‌ನ ಟಾಲ್‌ಸ್ಟಾಯ್ ಕ್ಷೇತ್ರದಲ್ಲಿ ಗಾಂಧಿಯವರ ಈ ಕನಸು ಸಾಕಾರಗೊಳ್ಳುತ್ತದೆ. ೧೯೧೦ರಲ್ಲಿ ಈ ಜಮೀನು ಟಾಲ್‌ಸ್ಟಾಯ್ ಹೆಸರಿನಲ್ಲಿ ಪ್ರಾರಂಭವಾಯಿತು. ಅಹಿಂಸಾತ್ಮಕ ಹೋರಾಟಕ್ಕೆ ಕೆಲಸಗಾರರನ್ನು ಅಣಿಗೊಳಿಸುವುದಲ್ಲದೆ, ಕೃಷಿ ಆರ್ಥಿಕತೆಯಲ್ಲಿ ಪ್ರಯೋಗ ನಡೆಸುವುದೇ ಈ ಕ್ಷೇತ್ರವನ್ನು ಪ್ರಾರಂಭಿಸಿದ ಉದ್ದೇಶ. ೧೯೦೪ರಲ್ಲಿ ಫೀನಿಕ್ಸ್ ವಸತಿಯನ್ನು ಪ್ರಾರಂಭಿಸಿದಾಗ ಗಾಂಧಿ ಕೈಗೊಂಡ ಮತ್ತೊಂದು ಪ್ರಯೋಗದ ವಿಷಯವನ್ನು ಸಹ ಪ್ರಸ್ತಾಪಿಸಬೇಕು. ಡರ್ಬಾನ್‌ನಿಂದ ೧೪ ಮೈಲಿ ದೂರದಲ್ಲವರು ನೂರು ಎಕರೆ ಭೂಮಿಯನ್ನು ಕೊಂಡರು. ಆ ವಸತಿಯ ಮೂಲ ಸದಸ್ಯರೆಂದರೆ, ಭಾರತೀಯ ಮತ್ತು ಯುರೋಪಿಯನ್ ಆದರ್ಶವಾದಿಗಳ ಸಣ್ಣ ಗುಂಪು. ಆ ಕಾಲೋನಿ ಸಾಧ್ಯವಾದಷ್ಟು ಸ್ವಯಂಪೂರ್ಣವಾಗಿತ್ತು ಮತ್ತು ಮನೆಯ ಅಗತ್ಯಗಳನ್ನು ಕನಿಷ್ಠ ಪ್ರಮಾಣಕ್ಕಿಳಿಸಲಾಗಿತ್ತು. ಫೀನಿಕ್ಸ್‌ವಾಸಿಗಳನ್ನು ಯೋಜಕರು ಮತ್ತು ವೇತನದಾರರೆಂದು ಎರಡು ವರ್ಗಗಳಾಗಿ ವಿಂಗಡಿಸಲಾಗಿತ್ತು. ಯೋಜಕರು ಶರೀರ ಶ್ರಮದಿಂದ ತಮ್ಮ ಜೀವನವನ್ನು ಸಂಪಾದಿಸಬೇಕಾಗಿತ್ತು. ಅಚ್ಚು ಕೂಟದ ಸುತ್ತ ಇದ್ದ ಜಮೀನಿನಲ್ಲಿ ತಲಾ ಮೂರು ಎಕರೆಗಳನ್ನವರಿಗೆ ಹಂಚಲಾಗಿತ್ತು. 'ಇಂಡಿಯನ್ ಒಪಿನಿಯನ್' ಎಂಬ ವಾರಪತ್ರಿಕೆಯನ್ನು ಆ ಮುದ್ರಣಾಲಯದಿಂದ ಪ್ರಕಟಿಸಲಾಗುತ್ತಿತ್ತು. ಟಾಲ್‌ಸ್ಟಾಯ್‌ರ ಲೇಖನಗಳಿಂದ ಪ್ರಭಾವಿತವಾಗಿದ್ದ ಕೆಲವು ಭಾವನೆಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಟಾಲ್‌ಸ್ಟಾಯ್ ಕ್ಷೇತ್ರ ಮತ್ತು ಫೀನಿಕ್ಸ್ ವಸತಿಗಳಲ್ಲಿ ಗಾಂಧಿ ಸಮಾಜ ವಿಜ್ಞಾನ ಪ್ರಯೋಗಾಲಯವನ್ನು ರೂಪಿಸಿದರು.

ಟಾಲ್‌ಸ್ಟಾಯ್‌ರಂತೆ ರಸ್ಕಿನ್ ಸಹ ಗಾಂಧಿಯ ಭಾವನೆಗಳನ್ನು ಪ್ರಭಾವಿಸಿದರು. ೧೯೦೪ರಲ್ಲಿ ಗಾಂಧಿ ಗೆಳೆಯ ಹೆನ್ರಿ ಪೊಲಕ್ 'ಅಂತ್ಯೋದಯ' *(Unto this Last)* ಎಂಬ ಗ್ರಂಥವನ್ನು ಅವರಿಗೆ ಕೊಟ್ಟನು. ಅದನ್ನೋದಿದ ನಂತರ ಅವರ ಮೇಲದು ಗಾಢವಾಗಿ ಪರಿಣಾಮವುಂಟುಮಾಡಲಾಗಿ, ಗುಜರಾತ್ ಭಾಷೆಗೆ ಪರಿವರ್ತಿಸಿದರು. ಜಾನ್ ಸ್ಟುಅರ್ಟ್‌ಮಿಲ್‌ನ 'ರಾಜಕೀಯಾರ್ಥಿಕ ವ್ಯವಹಾರ' *(Political Economy)* ವನ್ನೋದಿದಾಗ ರಸ್ಕಿನ್ ತನ್ನ ಲೇಖನ ಮಾಲೆಯನ್ನು ಬರೆಯಲಾರಂಭಿಸಿದನು. ಡಬ್ಲ್ಯು. ಎಂ. ಥ್ಯಾಕರೆ ಸಂಪಾದಿಸುತ್ತಿದ್ದ ಕಾರ್ನ್‌ಹಿಲ್



ನಿಯತಕಾಲಿಕೆಯಲ್ಲಿ ಅವು ಪ್ರಕಟಗೊಂಡುವು. ರಸ್ಕಿನ್ ತನ್ನ ಲೇಖನಗಳಲ್ಲಿ 'ರಾಜಕೀಯಾರ್ಥಿಕ ವ್ಯವಹಾರ'ದ ತತ್ತ್ವ ಸೂತ್ರಗಳನ್ನು ಕಟುವಾಗಿ ಖಂಡಿಸಿದನು. ಅದರಿಂದಾಗಿ ಅವುಗಳ ಮುದ್ರಣವನ್ನು ಮುಂದುವರಿಸಲಾಗದೆಂದು ಪತ್ರಿಕೆ ತಿರಸ್ಕರಿಸಿತು. ಕಾರ್ಲ್ ಮಾರ್ಕ್ಸ್‌ನೊಡಗೂಡಿ ಬಂಡವಾಳಷಾಹಿಯ ದೋಷಗಳ ಮೊದಲ ಟೀಕಾಕಾರದಲ್ಲಿ ರಸ್ಕಿನ್‌ನೂ ಒಬ್ಬನೆಂದು ಹೇಳಲಾಯಿತು. ರಸ್ಕಿನ್‌ನಂತೆ ಗಾಂಧಿ ಅರ್ಥಶಾಸ್ತ್ರಕ್ಕೊಂದು ನೈತಿಕ ಆಧಾರವಿರಬೇಕೆಂದು ಒತ್ತಿ ಹೇಳಿದರು. ಎರಡರಲ್ಲಿಯೂ ಯಂತ್ರಗಳ ಬಗ್ಗೆ ಅಪನಂಬಿಕೆಯಿದೆ. ಕಾರ್ಮಿಕರ ಬಗೆಗೆ ಬಂಡವಾಳಷಾಹಿಗಳು ದಯಾಪರರಾಗಿರಬೇಕೆಂದು ರಸ್ಕಿನ್‌ನಂತೆ ಗಾಂಧಿ ಸಹ ಸ್ಪಷ್ಟಪಡಿಸಿದರು. 'ರಸ್ಕಿನ್‌ನ ಈ ಮಹಾಗ್ರಂಥದಲ್ಲಿ ನನ್ನ ಗಾಢ ದೃಢನಂಬಿಕೆಗಳು ಕನ್ನಡಿಗೊಂಡಿವೆ ಎಂದು ನನಗೆ ತಿಳಿಯಿತು. ಆದ್ದರಿಂದಲೇ ಅದು ನನ್ನನ್ನು ವಶಪಡಿಸಿಕೊಂಡು, ನನ್ನ ಬದುಕನ್ನೇ ಬದಲಾಯಿಸಿತು' ಎಂದು ಗಾಂಧಿ ಬರೆದರು. ಅಂತ್ಯೋದಯದ ಬೋಧನೆಗಳನ್ನು ಗಾಂಧಿ ಗ್ರಹಿಸಿದ್ದು ಹೀಗೆ (೧) ಸಮಷ್ಟಿಯ ಒಳಿತಿನಲ್ಲಿ ವ್ಯಕ್ತಿಯ ಒಳಿತು ಸೇರಿದೆ. (೨) ನಾಯಿಂದನ ವೃತ್ತಿಯಷ್ಟೇ ಬೆಲೆ ವಕೀಲನ ವೃತ್ತಿಗೂ ಇದೆ. ತಮ್ಮ ಕೆಲಸದಿಂದ ಜೀವಿಕೆಯನ್ನು ಸಂಪಾದಿಸುವ ಹಕ್ಕು ಎಲ್ಲರಿಗೂ ಒಂದೇ ತೆರನಾಗಿರುತ್ತದೆ. (೩) ಶ್ರಮಜೀವಿಯ, ಅಂದರೆ, ಉಳುವವನ ಮತ್ತು ಕೈ ಕೆಲಸಗಾರನ ಬದುಕು ಮಾತ್ರ ಯೋಗ್ಯವಾದದ್ದು. ಏನಾದರೂ ಭಾವನೆಗೆ ಗಾಂಧಿ ವಶರಾದರೆಂದರೆ, ಅದನ್ನವರು ಕಾರ್ಯರೂಪಕ್ಕೆ ತರಲು ಪ್ರಯತ್ನಿಸುತ್ತಿದ್ದರು. ಗಾಂಧಿ ಅನುಭಾವಿಯೂ ಅಲ್ಲ, ಕೇವಲ ತತ್ತ್ವ ಪ್ರತಿಪಾದಕರೂ ಅಲ್ಲ. ಅವರು ಕಠಿನ ಅನುಷ್ಠಾನಶೀಲರು. ಸತ್ಯವೆಂದು ಪವಿತ್ರವೆಂದು ತಮಗೆ ತೋರಿದ ತತ್ತ್ವಗಳು ವ್ಯಕ್ತಿಗಳ ಜೀವನದ ಮೂಲಕವಾಗಲಿ, ತಾವು ಕಲ್ಪಿಸಿಕೊಂಡ ಸಮಾಜದ ಮೂಲಕವಾಗಲಿ ಕ್ರಿಯಾರೂಪದಲ್ಲಿ ಅಭಿವ್ಯಕ್ತಗೊಳ್ಳಬೇಕೆಂಬುದು ಅವರ ಬೋಧನೆಯಾಗಿತ್ತು. ಟಾಲ್‌ಸ್ಟಾಯ್‌ರ ಕೃತಿಗಳಲ್ಲಿ ರೊಟ್ಟಿ ದುಡಿಮೆಯ ಬಗ್ಗೆ ಓದಿದಾಗ, ಕೆಲವು ಭಾವನೆಗಳನ್ನು ಟಾಲ್‌ಸ್ಟಾಯ್ ಕ್ಷೇತ್ರ ಪ್ರಯೋಗದ ಮೂಲಕ ಕಾರ್ಯಗತ ಗೊಳಿಸಿದ್ದುಂಟು. ಅದೇ ರೀತಿ ರಸ್ಕಿನ್‌ನ ಭಾವನೆಗಳು ಸರ್ವೋದಯ ಕಾರ್ಯಯೋಜನೆಯ ರೂಪವನ್ನು ಪಡೆದುವು. ಟಾಲ್‌ಸ್ಟಾಯ್ ಅಥವಾ ರಸ್ಕಿನ್‌ನ ಭಾವನೆಗಳಿಗೆ ತಮ್ಮನ್ನವರು ತೆರೆದುಕೊಂಡಾಗ, ಅವುಗಳ ಮೇಲೆ ಗಾಂಧಿ ಛಾಪಿರುತ್ತಿತ್ತೆಂಬುದನ್ನು ವಿಶದಪಡಿಸಬೇಕಾಗಿದೆ. ಅವರನ್ನು ಪರಿವರ್ತಕರೆಂದೇ ಕರೆಯಬೇಕಾಗಿದೆ. ಸಾಮಾನ್ಯ ಹೇಳಿಕೆಯ ಮೂಲಕ ಪ್ರೊಫೆಸರ್ ನೆಫ್ ಏನು ಹೇಳಿದರೋ ಅದು ಗಾಂಧಿಯವರಿಗೂ ಅನ್ವಯವಾಗುತ್ತದೆ: 'ಅಸಾಧಾರಣರೂ ಸಮರ್ಥರೂ ಆದ ಚಿಂತಕರು, ಅಪೂರ್ವ ಅಂತಃಸ್ಫೂರ್ತಿಯ ಹೃದಯಗಳು, ಅಸಾಧಾರಣವೂ ಫಲೋತ್ಪಾದಕವೂ ಆದ ಶಿಸ್ತಿನ ಕಲ್ಪನಾ ಪ್ರತಿಭೆಗಳು ಮಾತ್ರ

ಪರಿವರ್ತನೆಗಳನ್ನು ತರಬಲ್ಲರು. ಸೃಜನಶೀಲ ಮನಸ್ಸುಗಳ ಅನುಭವಗಳನ್ನು ಸಂತರಂಥ ವ್ಯಕ್ತಿಗಳ ಉತ್ಕರ್ಷವನ್ನು, ಅಥವಾ ಶ್ರೇಷ್ಠ ಕಲಾವಿದರ ಆನಂದವನ್ನು ಬಹುಜನರು ಈ ರೀತಿಗಳಲ್ಲಿ ಹಂಚಿಕೊಳ್ಳುವುದರಿಂದ ಹೊಸ ಭಾವನೆಗಳು ಪ್ರಭಾವಯುತವಾಗುತ್ತವೆ.'[೨೪] ಇದೇ ಸಂದರ್ಭದಲ್ಲಿ ಗಾಂಧೀಜಿಯ ಮೇಲೆ ಪ್ರಭಾವ ಬೀರಿದ ಅಮೆರಿಕೆಯ ಸುಪ್ರಸಿದ್ಧ ಅರಾಜಕತಾವಾದಿ ಹೆನ್ರಿ ಡೇವಿಡ್ ಥೋರೋ ಹೆಸರನ್ನೂ ಪ್ರಸ್ತಾಪಿಸಬಹುದು. ಅಸಹಕಾರವನ್ನು ಕುರಿತ ಥೋರೋವಿನ ಪ್ರಸಿದ್ಧ ಪ್ರಬಂಧವನ್ನು ಗಾಂಧಿ ಚೆನ್ನಾಗಿ ಓದಿಕೊಂಡಿದ್ದರು; ಆದರೆ ಆರ್ಥಿಕ ಸಮಸ್ಯೆಗಳ ಬಗ್ಗೆ ಥೋರೋವಿನ ಬರಹಗಳು ಎಷ್ಟರಮಟ್ಟಿಗೆ ಅವರ ಮೇಲೆ ಪ್ರಭಾವ ಬೀರಿದ್ದವೆಂದು ಹೇಳಲಾಗದು. ಥೋರೋವಿನ ಶ್ರೇಷ್ಠತಮ 'ವಾಲ್ಡೆನ್'ನ ಗ್ರಂಥವನ್ನು ಗಾಂಧೀಜಿಯವರು ಉಲ್ಲೇಖಿಸಿದಂತೆ ತೋರುವುದಿಲ್ಲ. ಆದರೆ ಜೀವನ ವ್ಯವಹಾರದ ಬಗ್ಗೆ ಥೋರೋ ಬೋಧಿಸಿದ ಭಾವನೆಗಳು ಗಾಂಧಿಯ ಹೃದಯಕ್ಕೆ ತೀರ ಹತ್ತಿರವಾಗುತ್ತಿದ್ದುವೆಂದು ಈ ಪುಸ್ತಕವನ್ನೋದಿದಾಗ ಸ್ಪಷ್ಟವಾಗುತ್ತದೆ. ಸಂಕ್ಷೇಪವಾಗಿ ಹೇಳುವುದಾದರೆ, 'ನಾವು ಸರಳವಾಗಿ ಮತ್ತು ವಿವೇಕದಿಂದ ಬದುಕುವುದಾದರೆ, ಈ ಭೂಮಿಯ ಮೇಲಿನ ನಿರ್ವಹಣೆ ಕಷ್ಟವಾಗದೆ, ವಿನೋದವಾಗುತ್ತದೆಂಬುದು ಶ್ರದ್ಧಾನುಭವಗಳಿಂದ ನನಗೆ ಮನದಟ್ಟಾಗಿದೆ : ಸರಳ ರಾಷ್ಟ್ರಗಳ ಅಭ್ಯಾಸಗಳು ಈಗಲೂ ಕೃತಕ ರಾಷ್ಟ್ರಗಳಿಗೆ ತಮಾಷೆಯಾಗಿ ಕಾಣುತ್ತದೆ.'[೨೫]

* * * *

೨೪. Ref, *Cultural Basis of Industrial Civilisation*, p. 5.
೨೫. Thoreau, *Walden*. (Indian Edn.). p 63.



## ೨. ಕೈಗಾರಿಕೀಕರಣ ಮತ್ತು ಯಂತ್ರಗಳ ಬಗೆಗೆ ಗಾಂಧೀಜಿಯ ಮನೋಭಾವ

ಪಾಶ್ಚಾತ್ಯ ನಾಗರಿಕತೆಯ ಬಗೆಗಿನ ಗಾಂಧಿಯವರ ಮನೋಭಾವವನ್ನು, ಅದರ ಪ್ರಭಾವದಿಂದ ಇಂಡಿಯಾವನ್ನು ಮುಕ್ತಗೊಳಿಸಬೇಕೆಂಬ ಅವರ ಕಾತರತೆಯನ್ನು ಕುರಿತು ಈಗಾಗಲೇ ನಾವು ಪ್ರಸ್ತಾಪಿಸಿದ್ದೇವೆ. ಗಾಂಧಿಯವರ ಹಟತನಕ್ಕಾಗಿ, ಭಾರತದಂಥ ದೇಶಕ್ಕು ಸಹ ಕೈಗಾರಿಕೀಕರಣದಿಂದ ಪ್ರಯೋಜನವಾಗುವ ಒಳ್ಳೆಯ ಬಾಬುಗಳನ್ನು ಗಮನಿಸದಿದ್ದುದಕ್ಕಾಗಿ ಕೆಲವು ಲೇಖಕರು ಅವರನ್ನು ಟೀಕಿಸುತ್ತಾರೆ. ಆದರೆ ಗಾಂಧಿ ತಮ್ಮ ನಿಲುವಿನ ಬಗ್ಗೆ ಗಟ್ಟಿಯಾಗಿ ನಿಂತರು. ಕೆಲಸಗಾರರ ಅಪಾರ ಸಂಗ್ರಹವಿರುವ ಭಾರತದಲ್ಲಿ ಯಂತ್ರಗಳ ಪೂರೈಕೆಯಿಂದ ಲಕ್ಷಾಂತರ ಜನ ಸೋಮಾರಿಗಳಾಗಿರುತ್ತಾರೆಂಬುದು ಅವರಿಗೆ ಸ್ಪಷ್ಟವಾಗಿತ್ತು. ಕೈಗಾರೀಕೀಕರಣದಿಂದಾಗಿ, ಇಂಡಿಯಾ ಮಾರುಕಟ್ಟೆಗಳಿಗಾಗಿ ಹುಡುಕಾಟ ನಡೆಸಬೇಕಾಗುತ್ತದೆಂದೂ, ಶೋಷಣೆಯಲ್ಲದು ತನ್ನ ಒಡೆಯನನ್ನನುಕರಿಸಬೇಕಾಗುತ್ತದೆಂದೂ ಅವರು ಮನಗಂಡರು. ಇದನ್ನವರು ಹೇಸುತ್ತಿದ್ದರಲ್ಲದೆ, ಕೈಗಾರಿಕೀಕರಣದಿಂದ ಕೆಲವರಿಗೆ ಮಾತ್ರವೇ ಸಹಾಯವಾಗುತ್ತದೆಂದೂ, ಅದರಿಂದ ಆರ್ಥಿಕ ಶಕ್ತಿಯ ಕೇಂದ್ರೀಕರಣಕ್ಕೆ ಹಾದಿಯಾಗುತ್ತದೆಂದೂ ಮೇಲಿಂದ ಮೇಲೆ ಹೇಳುತ್ತಿದ್ದರು.

ಕೈಗಾರಿಕೀಕರಣ ಮನುಕುಲಕ್ಕೆ ಶಾಪವಾಗುತ್ತದೆಂಬುದು ಗಾಂಧಿಯವರ ಅಭಿಪ್ರಾಯವಾಗಿತ್ತು. ಕೈಗಾರಿಕಾ ಪದ್ಧತಿ ಒಂದು ದೇಶವನ್ನು ಲೂಟಿ ಮಾಡುವ ಸಾಮರ್ಥ್ಯವನ್ನು ಹೊಂದಿದೆಯೆಂದೂ, ಕೈಗಾರಿಕೀಕರಣಗೊಂಡಿರುವ ದೇಶಕ್ಕೆ ವಿದೇಶೀಯ ಮಾರುಕಟ್ಟೆಗಳು ತೆರೆದಿರುತ್ತವೆಂದೂ ಅವರು ತಿಳಿದಿದ್ದರು. ಕೈಗಾರೀಕರಣದಿಂದ ವ್ಯಕ್ತಿ ತನ್ನ ಘನತೆಯನ್ನು ಕಳೆದುಕೊಳ್ಳುತ್ತಾನೆಂಬುದು ಅವರ ಚಿಂತೆಯಾಗಿತ್ತು. ಭಾರತದ ಕೈಗಾರಿಕೀಕರಣವನ್ನವರು ವಿರೋಧಿಸುವುದುಂಟೆ ಎಂದು ನಿರ್ದಿಷ್ಟವಾಗಿ ಪ್ರಶ್ನಿಸಿದಾಗ, 'ಇಂಡಿಯಾಕ್ಕೆ ಕೈಗಾರಿಕೀಕರಣ ಆವಶ್ಯಕವೆಂದು ನಾನು ನಂಬುವುದಿಲ್ಲ' ಎಂದವರು ನಿಸ್ಸಂದಿಗ್ಧವಾಗಿ ಸ್ಪಷ್ಟಪಡಿಸಿದರು. ಸಾವಿರಾರು ಗುಡಿಸಲುಗಳು ಉತ್ತಮವಾಗಿ ಮಾರ್ಪಾಡು ಹೊಂದಿ, ಶಾಂತಿಯುತ ಸ್ವತಂತ್ರ ಭಾರತ ಅಸ್ತಿತ್ವಕ್ಕೆ ಬರಬೇಕೆಂದವರು ನಿರೀಕ್ಷಿಸಿದರು. ಕೈಗಾರಿಕೀಕರಣ ಬದುಕಿಗೆ

ಅಪಾಯಕಾರಿ ಎಂದವರು ಭಾವಿಸಿದರು. ಬಡತನ ಹೋಗಬೇಕೆಂದವರು ಕಾತರರಾಗಿದ್ದರು, ನಿಜ. ಆದರದಕ್ಕೆ ಕೈಗಾರಿಕೀಕರಣ ಪರಿಹಾರವಲ್ಲವೆಂದವರು ಸ್ಪಷ್ಟಪಡಿಸಿದರು. 'ಎತ್ತಿನಗಾಡಿಗಳ ಬಳಕೆ ಕೆಡುಕಲ್ಲ. ನಮ್ಮ ಸ್ವಾರ್ಥಪರತೆ ಮತ್ತು ನಮ್ಮ ನೆರೆಹೊರೆಯವರ ಬಗೆಗಿನ ಸಹಾನುಭೂತಿಯ ಅಭಾವವೇ ಕೆಟ್ಟದ್ದು' ಎಂದವರು ನುಡಿದರು. ಬಂಡವಾಳದ ಬಗೆಗೆ ತಮ್ಮ ವಿರೋಧವಿಲ್ಲವೆಂದೂ ಬಂಡವಾಳಷಾಹಿಯ ಬಗ್ಗೆ ತಮ್ಮ ವಿರೋಧವೆಂದೂ ಅವರು ವ್ಯಕ್ತಪಡಿಸಿದರು. ದುಡಿಮೆ ಮತ್ತು ಬಂಡವಾಳ ಪರಸ್ಪರ ವಿರೋಧಿಗಳಲ್ಲವೆಂದವರು ಭಾವಿಸಿದರು. ಇಂಡಿಯಾದ ಬಡತನವನ್ನು ನಿರ್ಮೂಲ ಮಾಡಲು ಸಾಧ್ಯವಿಲ್ಲವೆಂಬುದು ಅವರಿಗೆ ಗೊತ್ತಿತ್ತು. ಬಡವರ ಶೋಷಣೆಯ ಮೂಲಕ ಸಂಪತ್ತನ್ನು ಗಳಿಸುವ ಪರಿಪಾಠವನ್ನು ಶ್ರೀಮಂತರು ತಿರಸ್ಕರಿಸುವ ಮತ್ತು ಬಡವರು ಶ್ರೀಮಂತರನ್ನು ಮಚ್ಚರಿಸುವ ಕಾಲ ಬಂದೇ ಬರುತ್ತದೆಂದವರು ಮನಗಂಡಿದ್ದರು. ಬಂಡವಾಳಷಾಹಿಯ ವ್ಯಕ್ತರೂಪವಾದ ಕೈಗಾರಿಕೀಕರಣವೆಂದರೆ ಅಲ್ಪಸಂಖ್ಯಾತರು ಬಹುಸಂಖ್ಯಾತರನ್ನು ನಿಯಂತ್ರಿಸುವ ವಿಧಾನವೆಂದವರು ಅರಿತಿದ್ದರು. ಅನುಭವದ ಅಭಾವದಿಂದ ಹಾಗೂ ತಮ್ಮ ತರ್ಕವನ್ನರ್ಥಮಾಡಿಕೊಳ್ಳುವಲ್ಲಿ ಖಚಿತ ಮಾಹಿತಿ ದೊರೆಯದಿರುವುದರಿಂದ ಯೂರೋಪಿನ ಬರಹಗಾರರಿಗೆ ಪ್ರತಿಕೂಲವಾಗಿದೆಯೆಂಬುದನ್ನವರು ಅಂತರ್ಜ್ಞಾನದ ಮೂಲಕ ಅರಿತುಕೊಂಡರು. ಈ ಬಗ್ಗೆ ಅವರು ಹೇಳಿದ್ದನ್ನು ಪೂರ್ತಿ ಉದ್ಧರಿಸುವುದವಶ್ಯ : 'ಇಂಡಿಯಾದ ಪರಿಸ್ಥಿತಿಗೆ ಸಂಪೂರ್ಣವಾಗಿ ಹೊಂದಿಕೊಳ್ಳಲಾಗದ ಯೂರೋಪಿನ ಉದಾಹರಣೆಗಳ ಮೂಲಕ ಅವರು ಸಾಮಾನ್ಯೀಕರಿಸುವುದಾದರೆ ಯಾವುದೋ ಒಂದು ಅಳತೆಯಾಚೆಗೆ ನಮಗೆ ಅವರು ಮಾರ್ಗದರ್ಶನ ನೀಡಲಾರರು. ಏಕೆಂದರೆ ರಷ್ಯಾವನ್ನೂ ಹೊರತುಪಡಿಸದೆ ಯೂರೋಪಿನಲ್ಲಿ ಇಂಡಿಯಾದಲ್ಲಿರುವಂಥ ಸ್ಥಿತಿಗಳು ಇಲ್ಲವೇ ಇಲ್ಲ. ಪ್ರತಿಯೊಂದು ರಾಷ್ಟ್ರಕ್ಕೂ ತನ್ನದೇ ಆದ ವಿಶಿಷ್ಟ ಲಕ್ಷಣಗಳಿವೆ ಮತ್ತು ವ್ಯಕ್ತಿತ್ವವಿದೆಯೆಂಬುದು ನಮಗೆ ಗೊತ್ತಿದೆ. ಇಂಡಿಯಾ ಸಹ ತನ್ನವೇ ಆದ ಲಕ್ಷಣಗಳನ್ನು ಹೊಂದಿದೆ. ನಾವವಳ ಹಲವು ರೋಗಗಳಿಗೆ ನಿಜವಾದ ಪರಿಹಾರವನ್ನು ಕಂಡುಹಿಡಿಯಬೇಕಾದರೆ, ಅವಳ ಪ್ರಕೃತಿಯ ಎಲ್ಲ ಸ್ವಭಾವ ವಿಚಿತ್ರಗಳನ್ನು ಗಣನೆಗೆ ತೆಗೆದುಕೊಂಡು, ಅನಂತರ ಪರಿಹಾರವನ್ನು ನಿಶ್ಚಯಿಸಬೇಕಾಗಿದೆ. ಯೂರೋಪಿನ ರೀತಿಯಲ್ಲಿಯೇ ಇಂಡಿಯಾವನ್ನು ಕೈಗಾರಿಕೀಕರಿಸುವುದೆಂದರೆ ಅಸಾಧ್ಯ ಸಾಧನೆಗೆ ಪ್ರಯತ್ನಿಸಿದಂತೆಂದು ನಾನು ಪ್ರತಿಪಾದಿಸುತ್ತೇನೆ.' [೨೬]

ಗಾಂಧೀಜಿ ಎಲ್ಲ ಯಂತ್ರೋಪ ಯಂತ್ರಗಳಿಗೆ ವಿರೋಧಿಯೆಂದು ಕೆಲವು

೨೬. *Young India,* Aug. 6. 1925



ಟೀಕಾಕಾರರು ಅವರನ್ನು ಚಿತ್ರಿಸುತ್ತಾರೆ. ಆದರಿದು ನಿಜವಲ್ಲ. ಬೆಳಗಾವಿಯಲ್ಲಿ ನಡೆದ ೩೯ನೆಯ ಕಾಂಗ್ರೆಸ್ ಅಧಿವೇಶನದಲ್ಲಿ ಮಂಡಿಸಿದ ಅಧ್ಯಕ್ಷ ಭಾಷಣದಲ್ಲಿ ಅವರು ಹೇಳಿದ್ದಿದು: 'ಯಂತ್ರೋಪಯಂತ್ರಗಳ ಬಗ್ಗೆ ನನ್ನ ಮೇಲೆ ಆರೋಪಿಸಿರುವ ಅಭಿಪ್ರಾಯಗಳನ್ನು ನಿಮ್ಮ ಮನಸ್ಸಿನಿಂದ ತೆಗೆದುಹಾಕಬೇಕೆಂದು ನಾನು ಅಪೇಕ್ಷಿಸುತ್ತೇನೆ. ಮೊದಲನೆಯದಾಗಿ, ಅಹಿಂಸೆಯಲ್ಲಿರುವ ನನ್ನ ನಂಬಿಕೆಯನ್ನು ನಿಮ್ಮ ಮುಂದೆ ಏನೆಲ್ಲ ಇಡುತ್ತಿದ್ದೇನೆಯೊ, ಯಂತ್ರೋಪಯಂತ್ರಗಳ ಬಗೆಗಿನ ನನ್ನ ಅಭಿಪ್ರಾಯಗಳನ್ನು ರಾಷ್ಟ್ರೀಯ ಸಮ್ಮತಿಗಾಗಿ ನಿಮ್ಮ ಮುಂದೆ ಮಂಡಿಸಲು ನಾನು ಪ್ರಯತ್ನಿಸುತ್ತಿಲ್ಲ. ನೂಲುವ ರಾಟೆಯೇ ಒಂದು ಅತ್ಯುತ್ತಮ ಯಂತ್ರ. ೧೯೦೦ ಮೈಲಿ ಉದ್ದವೂ, ೧೫೦೦ ಮೈಲಿ ಅಗಲವೂ ಆದ ಭೂಮಿಯ ಮೇಲೆ ಚೆದರಿ ಹೋಗಿದ್ದ ಸಾವಿರಾರು ಮನೆಗಳ ಬಾಗಿಲಿಂದಾಚೆಗೆ ಭೂತನನ್ನಿರಿಸಿದ್ದ ಗುಡಿ ಕೈಗಾರಿಕೆಯ ಸ್ಥೈರ್ಯ ಹಾಗೂ ದುಷ್ಪತನದ ವಿನಾಶವನ್ನು ನಾನು ಸಹಿಸಲಾರೆ.' ಯಂತ್ರೋಪಕರಣಗಳ ಪ್ರಯೋಜನವನ್ನು ಸ್ಪಷ್ಟಪಡಿಸುತ್ತ, ಅವರಿಗೊಬ್ಬರು ಪ್ರಶ್ನೆ ಹಾಕಿ ಅವುಗಳ ದುರುಪಯೋಗದ ಬಗ್ಗೆ ವಿರೋಧವೇ ಹೊರತು, ಯಂತ್ರೋಪಕರಣಗಳ ಬಗೆಗಲ್ಲವೆಂಬುದನ್ನು ಅನುಮೋದಿಸುವಂತೆ ಗಾಂಧಿಯವರನ್ನು ಕೇಳಿಕೊಂಡಾಗ, ಪೃಚ್ಛಕನ ಅಭಿಪ್ರಾಯವನ್ನೊಪ್ಪಿಕೊಳ್ಳುವುದಾಗಿ ಅವರು ಹೇಳುತ್ತಾರೆ. ಜನರಿಗೆ ಅನುಕೂಲವಾಗುವಂಥ ಹೊಲಿಗೆಯಂತ್ರ ಮೊದಲಾದವುಗಳಿಗೆ ವಿನಾಯಿತಿ ನೀಡುವುದಾಗಿ ಅವರು ಸೂಚಿಸುತ್ತಾರೆ. ಇಂಥ ಯಂತ್ರಗಳನ್ನು ತಯಾರಿಸಲು ಕಾರ್ಖಾನೆಯ ಆವಶ್ಯಕತೆಯಿದೆಯಲ್ಲವೇ ಎಂದು ಕೇಳಿದಾಗ, 'ನಾನೊಬ್ಬ ಸಮಾಜವಾದಿಯಾದ್ದರಿಂದ ಹೇಳುವುದಿದು: ಅಂಥ ಕಾರ್ಖಾನೆಗಳನ್ನು ರಾಷ್ಟ್ರೀಕರಣ ಮಾಡಬೇಕು, ಇಲ್ಲವೆ ಅವು ರಾಜ್ಯಗಳ ನಿಯಂತ್ರಣದಲ್ಲಿರಬೇಕು' ಎಂದವರು ಉತ್ತರಿಸಿದರು. ಕೆಲವೇ ಕೆಲವರ ಅಧಿಕಾರ ಮತ್ತು ಧನ ಶೇಖರಣೆಗಾಗಿ, ಹಾಗೂ ಬಹುಜನರ ಶೋಷಣೆಗಾಗಿ, ಯಂತ್ರಗಳ ವ್ಯವಸ್ಥೆಯನ್ನು ಬಳಸಿಕೊಳ್ಳುವುದು ಮಹಾಪರಾಧ ಎಂದವರು ವಿಶದಪಡಿಸಿದರು.

ಗಾಂಧೀಜಿ ಯಂತ್ರೋಪಕರಣವನ್ನು ಎರಡು ದೃಷ್ಟಿಕೋನಗಳಿಂದ ವಿಶ್ಲೇಷಿಸಿದರು ; ಎರಡು ದೃಷ್ಟಿಕೋನಗಳೂ ಅದನ್ನು ಖಂಡಿಸಿದುವು. 'ಮನುಷ್ಯನ ಕ್ಷೀಣತೆಗದು ಕಾರಣವಾಗಿದ್ದುದರಿಂದ ಮೊದಲನೆಯ ದೃಷ್ಟಿಕೋನ ಎಲ್ಲ ಯಂತ್ರೋಪಕರಣಗಳನ್ನು ಬಹಿಷ್ಕರಿಸಿತು; ನಿರುದ್ಯೋಗವನ್ನು ಸೃಷ್ಟಿಸುವಲ್ಲಿ ಯಂತ್ರೋಪಕರಣಗಳ ಪಾತ್ರವನ್ನು ಗ್ರಹಿಸಿದ್ದರಿಂದ, ಎರಡನೆಯ ದೃಷ್ಟಿಕೋನ ಕೇವಲ ಆರ್ಥಿಕ ಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡದ್ದುಂಟು. ಉದ್ಯೋಗವಿಲ್ಲದ ಲಕ್ಷಾಂತರ ಕೈಗಳು ಅದೇ ಕೆಲಸವನ್ನು ಸುಲಭವಾಗಿ ನಿರ್ವಹಿಸುವಾಗ, ಯಂತ್ರೋಪಕರಣ ಅಪಾಯಕಾರಿಯೆಂದವರು ನಿರ್ಧರಿಸಿದರು. ಭಾರತೀಯರು

ಬದುಕಬೇಕಾಗಿರುವುದರಿಂದ ಅರೆಕಾಲಿಕ ನೌಕರಿಯಲ್ಲಿರುವ ಲಕ್ಷಾಂತರ ಜನ ಇಂಡಿಯಾದಲ್ಲಿರುವಷ್ಟು ಜಗತ್ತಿನ ಯಾವ ದೇಶದಲ್ಲಿಯೂ ಇಲ್ಲವಾದ್ದರಿಂದ, ಗ್ರಾಮೀಣ ನಾಗರಿಕತೆಯಾದರೂ, ಹಿಡುವಳಿ ಜಮೀನು ಎರಡು ಎಕರೆಗೂ ಕಡಿಮೆಯಿರುವುದರಿಂದ, ಯಂತ್ರ ನಾಗರಿಕತೆಯನ್ನು ನಿರಾಕರಿಸತಕ್ಕದ್ದೆಂದವರು ತಮ್ಮ ವಾದವನ್ನು ಪುನರಾವರ್ತಿಸಿದರು. ಆದ್ದರಿಂದ ಕೈಗಾರಿಕೀಕರಣಗೊಂಡ ಇಂಡಿಯಾ ಅಂದರೆ, ಲಕ್ಷಾಂತರ ಜನರ ವಿನಾಶ ಎಂದರ್ಥ. ಕೆಲವು ಮಂದಿಯಾದರೂ ಸರಿಯೆ, ಅವರ ಜೀವನದ ಮಟ್ಟವನ್ನು ಹೆಚ್ಚಿಸುವ ಸಲುವಾಗಿ ಯಂತ್ರದ ಬಳಕೆ ಅಗತ್ಯವೆಂಬ ಜನರ ವಾದವನ್ನವರು ಎಂದೂ ಒಪ್ಪಲಿಲ್ಲ. ತೆವಳಲಾರದ ಮೂವತ್ತು ಕೋಟಿ ದುರ್ಬಲ ಪ್ರಾಣಿಗಳನ್ನು ಪಡೆಯುವುದಕ್ಕಿಂತ ಒಂದು ಕೋಟಿ ಸಂತೃಪ್ತ ಊರ್ಜಿತ ಸುಖೀ ಭಾರತೀಯರನ್ನು ಪಡೆಯುವುದು ಮೇಲೆಂದು ಆ ಜನರು ಹೇಳುತ್ತಾರೆ. ನನ್ನಲ್ಲಿ ಆ ತತ್ವಕ್ಕೆ ಉತ್ತರವಿಲ್ಲ. ಹರಿಜನರ ಮಾನಸಿಕ ಸ್ಥಿತಿಯಲ್ಲಿ ನಾನು ಮುಳುಗಿರುವಾಗ ಲಕ್ಷಾಂತರ ಹಳ್ಳಿಗರನ್ನು ಕುರಿತು ಮಾತ್ರ ನಾನು ಯೋಚಿಸಬಲ್ಲೆ ; ನನ್ನ ಸುಖ ಅವರಲ್ಲಿ ಅತ್ಯಂತ ದರಿದ್ರರನ್ನವಲಂಬಿಸುವಂತೆ ನಾನು ಪ್ರಯತ್ನಿಸಬಲ್ಲೆ ; ಅವರು ಚೆನ್ನಾಗಿ ಬದುಕಿದರೆ ಮಾತ್ರ ನಾನೂ ಬದುಕಲಿಚ್ಛಿಸುತ್ತೇನೆ. ನನ್ನ ಸರಳ ಮನಸ್ಸು ಸಣ್ಣ ಚರಕದ ಕದಿರಿನಿಂದಾಚೆಗೆ ಚರಿಸಲಾರದು. ನಾನು ಹೋದೆಡೆಯಲ್ಲೆಲ್ಲ ಅದನ್ನೊಯ್ಯುತ್ತೇನೆ. ಕಷ್ಟವಿಲ್ಲದೆ ನೂಲು ತೆಗೆಯುತ್ತೇನೆ'[೨೭] ಎಂದು ಗಾಂಧಿ ನಿರೂಪಿಸಿದರು. ಮಾನವಾಂಶವನ್ನೆ ತಪ್ಪಿಸುವ ಯಂತ್ರೋಪಕರಣಗಳ ಬಳಕೆಯ ಸ್ಥಗಿತತೆಯನ್ನು ಆಜ್ಞಾಪಿಸಿರುವ ನಾಜಿಗಳ ಉದಾಹರಣೆಯನ್ನು ಗಾಂಧಿ ಪ್ರಸ್ತಾಪಿಸಿದರು. ಅವರು 'ಮ್ಯಾಂಚೆಸ್ಟರ್ ಗಾರ್ಡಿಯನ್' ಪತ್ರಿಕೆಯ ಟಿಪ್ಪಣಿಯ ಕಡೆಗೆ ಗಮನ ಸೆಳೆದರು : "ಕೈರಾಟೆಗೆ ಬದಲಾಗಿ ನೂಲು ಯಂತ್ರವನ್ನು, ಕೈಮಗ್ಗಕ್ಕೆ ಬದಲಾಗಿ ಯಾಂತ್ರಿಕ ಮಗ್ಗವನ್ನು ಬಳಸಲು ಮಾಡಿರುವ ಗಾಂಧಿಯವರ ಪ್ರಯತ್ನಗಳು ಜರ್ಮನಿಯ ಸಿಗಾರ್ ಮತ್ತು ಗಾಜಿನ ಕೈಗಾರಿಕೆಗಳಿಗೆ ಸಮ ಸಮಾನಾಂತರವಾಗಿವೆ."

ಕೈ ನೂಲಿನ ಬಗೆಗಿನ ಅವರ ವಕೀಲಿತನಕ್ಕೆ ಸಂಬಂಧಿಸಿದ ಕೆಲವು ಮೂಲಭೂತ ಪ್ರಶ್ನೆಗಳಿಗೆ ಅವರು ಪ್ರಕ್ರಿಯಿಸುವ ಧಾರ್ಮಿಕ ಮಾರ್ಗವೇ ಕಾರಣವೆಂದು ಕೆಲವು ಬರಹಗಾರರು ಸೂಚಿಸಿದ್ದಾರೆ. ಈ ವಿವರಣೆ ಮುಖ್ಯವಾಗಿ ಪಶ್ಚಿಮದಿಂದ ಬಂದಿದೆ. 'ಕೈರಾಟೆಯ ಬಗೆಗಿನ ಮಹಾತ್ಮರ ವಕೀಲಿತನ ಭಾರತೀಯ ಆಸಕ್ತಿ ಮತ್ತು ಶಕ್ತಿಯನ್ನು ಭೌತಿಕ ಸ್ತರದಿಂದ ಆಧ್ಯಾತ್ಮಿಕ ಕ್ರಿಯಾರಂಗಕ್ಕೆ ಸಾಂಕೇತಿಕ ರೂಪದ ವರ್ಗಾವಣೆಯ ಅಥವಾ ಹಿಮ್ಮರಳಿಕೆಯ ವಕೀಲಿತನವಾಗಿದೆ' ಎಂದು

೨೭. Harijan, May 16, 1936.



ಅರ್ನಾಲ್ಡ್ ಟಾಯನ್‌ಬೀ ಬರೆದಿರುವದನ್ನು ನಾವು ನೋಡುತ್ತೇವೆ. ಈ ವ್ಯಾಖ್ಯೆಯನ್ನು ಗಾಂಧೀಜಿ ಬೆಂಬಲಿಸುವುದಿಲ್ಲ; ಚರಕ ಮತ್ತು ಕೈನೂಲುಗಳು ಸಾಮಾನ್ಯ ಜನರ ಆಧ್ಯಾತ್ಮಿಕ ಉನ್ನತಿಗೆ ಮಾತ್ರವೇ ಸಂಬಂಧಿಸಿವೆಯೆಂದು ಅವರೆಲ್ಲಿಯೂ ಸೂಚಿಸಿಲ್ಲ. ಕೆಲವೊಮ್ಮೆ ಚರಕದಲ್ಲಿ ಹೊಸಗುಣಗಳನ್ನು ಕಂಡವರಿದ್ದಾರೆ. ಅಂಥವರಲ್ಲಿ ಅಮೆರಿಕಾದವನೊಬ್ಬ. 'ಚರಕ ಚಿಂತನಶೀಲ ಯಂತ್ರವೆಂದು ಅಮೆರಿಕದ ಜನಕ್ಕೆ ತಿಳಿಸಲಿಚ್ಛಿಸುತ್ತೇನೆ; ಏಕೆದರೆ ಚರಕ ತರಗತಿಗೆ ಹಾಜರಾದಾಗ ನನ್ನ ಚಿಂತನೆಯನ್ನು ಪ್ರೇರೇಪಿಸಿತು.' ಎಂದವನು ಗಾಂಧಿಯೊಡನೆ ನುಡಿದನು. ಜಾನ್ ಮಿಡ್ಲ್‌ಟನ್ ಮರ್ರೆಯ ವ್ಯಾಖ್ಯೆ ಇನ್ನೂ ಸಮಂಜಸವಾಗಿದೆ. 'ಮಹಾ ವ್ಯಾವಹಾರಿಕ ವಿವೇಕದಿಂದ ಚರಕ ಚಳುವಳಿ ಸ್ಫೂರ್ತಿ ಪಡೆದದ್ದೆಂಬುದನ್ನು ಅಲ್ಲಗಳೆಯಲು ಸಂಪೂರ್ಣವಾಗಿ ಶಾಸ್ತ್ರಕ್ಕೆ ದಾಸನಾಗಿರದ ವೃತ್ತಿಪರ ಅರ್ಥಶಾಸ್ತ್ರಜ್ಞನಿಗೂ ಸಾಧ್ಯವಿಲ್ಲವೆಂದು ನನಗನ್ನಿಸಿದೆ. ಕಟ್ಟುನಿಟ್ಟಾದ ಆರ್ಥಿಕ ದೃಷ್ಟಿಯಿಂದ ನೋಡಿದಾಗ ಭಾರತದ ಜರೂರು ಸಮಸ್ಯೆಯೆಂದರೆ ರೈತರ ಸಾರ್ವತ್ರಿಕ ನಿರುದ್ಯೋಗ.'[೨೮] ಭಾರತದ ಹಳ್ಳಿಗಳ ಜೀರ್ಣೋದ್ಧಾರವನ್ನು ಕುರಿತ ಅವರ ವಕೀಲಿತನ ಮತ್ತು ಬಲಾತ್ಕಾರದ ಸೋಮಾರಿತನದ ಕಾಲದಲ್ಲಿ ರೈತರು ತಮ್ಮ ಉದ್ಯೋಗವನ್ನು ತಾವೇ ಕಂಡುಕೊಳ್ಳಲು ಸಹಾಯವಾಗುವ ಚರಕದಂಥ ಸರಳ ಸಾಧನಗಳ ಬಳಕೆ ಹಲವು ಪಾಶ್ಚಾತ್ಯ ಲೇಖಕರಲ್ಲಿ ಸಹಾನುಭೂತಿಯ ಮೇಳವನ್ನು ಕಂಡುಕೊಂಡಿವೆ. ಭಾರತದ ಅರ್ಥವ್ಯವಸ್ಥೆಯ ಸಂದರ್ಭದಲ್ಲಿ ಗಾಂಧಿಯವರ ಯಂತ್ರವಿರೋಧಿ ನೀತಿಯ ಹಿನ್ನೆಲೆಯಲ್ಲಿರುವ ತಾತ್ವಿಕತೆಯನ್ನು ಜಿ.ಡಿ.ಎಚ್. ಕೋಲ್ ಗ್ರಹಿಸಬಲ್ಲವರಾಗಿದ್ದರು. 'ಅಧಿಕ ಪ್ರಮಾಣದ ಬಂಡವಾಳ ಹೂಡಿಕೆಯಿಂದ ಇಂಡಿಯಾವನ್ನು ಶೀಘ್ರವಾಗಿ ಬೃಹತ್ ಕೈಗಾರಿಕೀಕರಣ ರಾಷ್ಟ್ರಗಳ ಮಟ್ಟಕ್ಕೇರಿಸಬಹುದೆಂಬ ಭಾವನೆ ಅವಾಸ್ತವ. ಈಗಾಗಲೇ ಗತ್ಯಂತರವಿಲ್ಲದೆ ಉಪವಾಸಮಾಡುತ್ತಿರುವ, ಶೀಘ್ರವಾಗಿ ಬೆಳೆಯುತ್ತಿರುವ ಜನ ಸಮುದಾಯದ ಉಪವಾಸಾದಿ ಅಸಾಧ್ಯ ತ್ಯಾಗದಿಂದ ಮಾತ್ರವೇ ಗುರಿಯನ್ನು ಸಾಧಿಸಬಹುದು; ಅಥವಾ ತಾತ್ತ್ವಿಕವಾಗಿ, ಹೊರಗಡೆಯಿಂದ, ಮುಖ್ಯವಾಗಿ ಅಮೆರಿಕ ಸಂಯುಕ್ತ ಸಂಸ್ಥಾನಗಳಿಂದ ಅಪಾರ ಬಂಡವಾಳವನ್ನು ಎರವಲು ಪಡೆದು ಮುಂದುವರಿಬೇಕಾಗಿದೆ. ಯಾವುದಾದರೂ ಆಧಾರದ ಮೇಲೆ ಸಾಕಷ್ಟು ಪ್ರಮಾಣದ ಸಾಲಗಳನ್ನು ಎತ್ತಬಹುದೆಂದು ಊಹಿಸುವುದೇ ಭ್ರಮೆಯಾಗುತ್ತದೆ ; ಅದು ಸಾಧ್ಯವಾದರೂ, ಪರಿಣಾಮದಲ್ಲಿ ಸ್ವಾತಂತ್ರ್ಯವನ್ನು ಬಿಟ್ಟುಕೊಡಬೇಕಾಗುತ್ತದೆ. ಬಂಡವಾಳದ ಅಭಿವರ್ಧನೆ ಇಂಡಿಯಾಕ್ಕೆ ಅಗತ್ಯವಿಲ್ಲವೆಂದು ನಾನು ಹೇಳುತ್ತಿಲ್ಲ ; ಈ ರೀತಿಗಳಲ್ಲೇನು ಮಾಡಿದರೂ ಬಹುಕಾಲದ ತನಕ ಜನರ ಬಡತನದ ಮೇಲೆ

೨೮. J.M. Murray, *Mahatma Gandhi,* Edited by Radhakrishnan.

ಅದು ಅತ್ಯಲ್ಪ ಪ್ರಭಾವವನ್ನು ಬೀರುತ್ತದೆ. ತುಟ್ಟಿಯ ಯಂತ್ರೋಪಕರಣಗಳನ್ನಪೇಕ್ಷಿಸುವ ವಿಧಾನಗಳನ್ನು ಅವಲಂಬಿಸುವುದಕ್ಕಿಂತ, ಶ್ರಮಜೀವಿಗಳ ರೂಪದ ವಿಪುಲ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಉದ್ದೇಶಿಸಿರುವ ಗ್ರಾಮೀಣ ಕೈಗಾರಿಕೆಗಳ ಸಂವರ್ಧನೆ ಮತ್ತು ಗ್ರಾಮೀಣ ಪುನಶ್ಚೇತನಗಳನ್ನು ಬಂಡವಾಳದ ಅಭಿವರ್ಧನೆಯೊಡನೆ ಸೇರಿಸಿದರೆ ಮಾತ್ರ ಪೂರ್ಣ ವಿಕಾಸ ಸಾಧ್ಯವಾಗಬಹುದು.'[೨೯]

ಅನಭಿವೃದ್ಧಿಯ ದೇಶವನ್ನು ಪಾಶ್ಚಾತ್ಯರು ಶೋಷಣೆ ಮಾಡಿದ ಪರಿಣಾಮವಾಗಿ, ಅದು ಸ್ವಾತಂತ್ರ್ಯ ಪಡೆದ ಕೂಡಲೇ ಕೈಗಾರಿಕೀಕರಣಕ್ಕಾಗಿ ಹಾತೊರೆಯುತ್ತದೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಈ ಪ್ರವೃತ್ತಿಯಿಂದ ಇಂಡಿಯಾ ಪಾರಾಗದೆಂದೂ, ಬೇಗನೆಯೊ ತಡವಾಗಿಯೊ ಶೀಘ್ರ ಕೈಗಾರಿಕೀಕರಣದ ಪರವಾದಿಗಳೊಡನೆ ಒಪ್ಪಂದ ಮಾಡಿಕೊಳ್ಳುತ್ತಾರೆಂದೂ ಹೇಳಲಾಗಿದೆ. ಚರಕ ಮತ್ತು ಅದರ ಮತ್ತೊಂದು ರೂಪವಾದ ಅಂಬರ್ ಚರಕದಂಥ ಸಾಧನಗಳ ಬಳಕೆಗೆ ಭಾಗಶಃ ರಿಯಾಯಿತಿಯನ್ನು ನೀಡುವುದರ ಮೂಲಕ, ಯಂತ್ರೋಪಕರಣಗಳನ್ನು ದೂರವಿಡುವ ಗಾಂಧಿಯವರ ನಿಲುವಿಗೆ ತಡೆಹಾಕಬಹುದಾಗಿದೆ. ಭರತಖಂಡದ ಇಂದಿನ ಪರಿಸ್ಥಿತಿಯಲ್ಲಿ ಈ ವಾದಕ್ಕೆ ಬಲವಾದ ಬೆಂಬಲವಿರುವಾಗಲೇ, ಒಳ್ಳೆಯ ಅರ್ಥವ್ಯವಸ್ಥೆಯೆಂದು ತೋರುವ ಕೈಗಾರಿಕೀಕರಣ ಅಹಿತಕರ ಸಮಾಜ ವಿದ್ಯೆಯಾಗಿ, ಪರಿಣಮಿಸಬಹುದು. ಕೈಗಾರಿಕೀಕರಣದ ಪರಿಣಾಮಗಳು, (ಜನಸಂಖ್ಯೆಯ ವೇಗದ ಬೆಳವಣಿಗೆಯಿಂದಾಗಿ ಅದರ ಗುರಿಯೂ ನಿರ್ನಾಮವಾಗಿದೆ) ಅಂದರೆ ನಗರೀಕರಣ, ರಾಶಿ ಸಮಾಜದ ಉದಯ, ಮತ್ತು ಸಮಾಜದ್ವಯಗಳ ಬೆಳವಣಿಗೆ ಮಾತ್ರ ಈಗ ಉಳಿದಿವೆ. ಆರ್ಥಿಕ ಬೆಳವಣಿಗೆಯ ಉದ್ದೇಶವೇನೆಂಬುದೇ ಘಾತಕದ ಪ್ರಶ್ನೆಯಾಗಿದೆ. ಅದರ ಉದ್ದೇಶ ಮಾನವ ಅಭಿವೃದ್ಧಿಯೇ ಹೌದಾದರೆ, ನಮ್ಮ ಸಮಾಜವನ್ನು ಛಿದ್ರಗೊಳಿಸುವ ಪ್ರತಿಕೂಲ ಪರಿಣಾಮಗಳ ಉದ್ದನೆಯ ಪಟ್ಟಿಯನ್ನುಪೇಕ್ಷಿಸದೆ, ಕೈಗಾರಿಕೀಕರಣದ ಇಡೀ ಸಮಸ್ಯೆಯ ಪೂರ್ಣಾವಲೋಕನವನ್ನು ಗಮನಿಸಬೇಕಾಗಿದೆ.

ಕುಬ್ಜ ಬೆಳವಣಿಗೆ ದೇಶಗಳ ವಿಷಯದಲ್ಲಿ ಮತ್ತೊಂದು ವಾದ ಹುಟ್ಟಿಕೊಂಡಿದೆ. ಅದರ ಪ್ರತಿಧ್ವನಿ ನಮಗೆ ತುಂಬ ಅಸ್ಪಷ್ಟವಾಗಿ ಕೇಳಿಸುತ್ತದೆ. ಬೇ ಕೈಗಾರಿಕಾ ರಾಷ್ಟ್ರವೊಂದು ಬಲಹೀನ ರಾಷ್ಟ್ರವೆಂದು ಹೇಳಲಾಗಿದೆ – ಸೈನಿಕೀಯವಾಗಿ ತನ್ನನ್ನು ತಾನು ರಕ್ಷಿಸಿಕೊಳ್ಳುವ ಶಕ್ತಿಯಲ್ಲಿ ನಿತ್ರಾಣತೆಯಿದೆ; ನಗರ ಪ್ರದೇಶದಲ್ಲಿ ಮೂಡಿದ ಅನುಕೂಲಕರವಾದ ವ್ಯಾಪಾರ ಒಪ್ಪಂದಗಳನ್ನಾಗಲಿ ಅಥವಾ ಇತರ ವಾಣಿಜ್ಯ ನೀತಿಗಳನ್ನಾಗಲಿ ಪ್ರತಿಭಟಿಸುವ ಶಕ್ತಿಯಲ್ಲಿ ದುರ್ಬಲತೆಯಿದೆ. ಈ ವಾದ

೨೯. G.D.H. Cole, *Mahatma Gandhi,* Ed. Radhakrishnan, p. 379-80.



ಕೈಗಾರಿಕೀಕರಣ ಪರದ ವಿಷಯವನ್ನು ನಿರ್ಧರಿಸಲಾರದು; ಆದರೆ ವಿದೇಶೀ ಸಹಾಯ ಕಾರ್ಯಕ್ರಮವನ್ನು ತೀವ್ರಗೊಳಿಸುವ ದೃಷ್ಟಿಯಿಂದ ಹೊಸ ರೀತಿಯ ಆರ್ಥಿಕ ಕೌಶಲಕ್ಕೆ ದಾರಿಯನ್ನು ತೋರಿಸುತ್ತದೆಂದು ಪರೋಕ್ಷವಾಗಿ ವಾದ ಮಾಡಬಹುದು. ಇಲ್ಲಿ ಮತ್ತೆ ಅದೊಂದು ನೇರವಾದ ವಿಷಯವಲ್ಲ. ದಿಗಿಲು ಹುಟ್ಟಿಸಬಹುದಾದ ಹಣದ ವೆಚ್ಚವನ್ನು ಮಾತ್ರವಲ್ಲ, ಹೊಸ ಅನರ್ಥವನ್ನುಂಟುಮಾಡುವ ಸಾಮಾಜಿಕ ಬೆಲೆಯ ಆಯವ್ಯಯ ಪಟ್ಟಿಯನ್ನು ನಾವು ತಯಾರಿಸಬೇಕಾಗಿದೆ. ಆರ್ಥಿಕಾಭಿವೃದ್ಧಿಯ ಸಾಮಾಜಿಕ ಮನುಷ್ಯ ಶಾಸ್ತ್ರದ ಬಗ್ಗೆ ಚರ್ಚಿಸುವ ಲೇಖನೊಬ್ಬನ ಅಭಿಪ್ರಾಯವನ್ನು ಉದ್ಧರಿಸುವ ಮೂಲಕ ನಮ್ಮ ವಿಷಯವನ್ನು ಸ್ಪಷ್ಟಪಡಿಸಬಹುದು ಅಭಿವೃದ್ಧಿ ಹೊಂದದ ಜನರ ಆರ್ಥಿಕಾಭಿವೃದ್ಧಿ ಅವರ ಸಾಂಪ್ರದಾಯಕ ರೂಢಿ ನೀತಿಗಳೊಡನೆ ಹೊಂದಿಕೆಯಾಗುವುದಿಲ್ಲ. ಅವುಗಳಿಂದ ಮುಕ್ತಿ ಹೊಂದುವುದೇ ಆರ್ಥಿಕಾಭಿವೃದ್ಧಿಗೆ ಮುನ್ನಣಿ. ಅದಕ್ಕೆ ಆಗಬೇಕಾದ್ದೇನೆಂದರೆ, ಸಾಮಾಜಿಕ, ಸಾಂಸ್ಕೃತಿಕ, ಮತ್ತು ಮತೀಯ ವ್ಯವಸ್ಥೆಯಲ್ಲಿ, ಪದ್ಧತಿಗಳಲ್ಲಿ, ಅವರ ಮನೋವೈಜ್ಞಾನಿಕ ಪ್ರವೃತ್ತಿಯಲ್ಲಿ, ಅವರ ತತ್ತ್ವ ವಿದ್ಯೆಯಲ್ಲಿ ಮತ್ತು ಜೀವನ ವಿಧಾನದಲ್ಲಿ ಸಂಪೂರ್ಣ ಬದಲಾವಣೆಯಾಗಬೇಕು, ಅರ್ಥಾತ್ ಸಮಗ್ರ ಕ್ರಾಂತಿಯಾಗಬೇಕು. ವಾಸ್ತವವಾಗಿ ಆಗಬೇಕಾದ್ದು ಸಾಮಾಜಿಕ ಅವ್ಯವಸ್ಥೆ. ಯಾವುದಾದರೂ ಕಾಲ ಬಿಂದುವಿನಲ್ಲಿ ದೊರೆಯಬಹುದಾದುದಕ್ಕಿಂತ ಹೆಚ್ಚು ನಿರೀಕ್ಷಿಸುವ ಅಸಂತೋಷ ಮತ್ತು ಅಸಂತೃಪ್ತಿಗಳನ್ನು ಉತ್ಪಾದಿಸಬೇಕಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಸಂಭವಿಸಬಹುದಾದ ಸಂಕಟ ಮತ್ತು ಪಲ್ಲಟಗಳು ಆಕ್ಷೇಪಕ್ಕೊಳಗಾಗಬಹುದು; ಆದರೆ ಆರ್ಥಿಕಾಭಿವೃದ್ಧಿಗೆ ತೆರಬೇಕಾದ ಬೆಲೆಯೆಂದು ತೋರುತ್ತದೆ.'[೩೦] 'ಖಾಯಿಲೆಗಿಂತ ಚಿಕಿತ್ಸೆ ಹೆಚ್ಚು ಕೆಡುಕಾಗುವುದಿಲ್ಲವೆ?' ಎಂದೊಂದು ಗಾಂಧೀಜಿ ಅನುಯಾಯಿಯ ಧ್ವನಿ ಪ್ರಶ್ನಿಸಬಹುದಲ್ಲವೆ?

ಆರ್ನಾಲ್ಡ್ ಟಾಯನ್‌ಬೀ ತನ್ನ 'ದಿ ಸ್ಟಡಿ ಆಫ್ ಹಿಸ್ಟರಿ' *(The Study of History)* ಎಂಬ ಗ್ರಂಥದಲ್ಲಿ ಪಾಶ್ಚಾತ್ಯ ನಾಗರಿಕತೆಯ ಬಗೆಗಿನ ಗಾಂಧಿಯ ಮನೋಧರ್ಮವನ್ನೂ ರಾಜಕೀಯ ಮತ್ತು ಅರ್ಥಶಾಸ್ತ್ರಗಳ ಬಗೆಗಿನ ಅವರ ತಂತ್ರಗಳನ್ನೂ ವಿವರಿಸಿದ್ದಾನೆ. ಪಾಶ್ಚಾತ್ಯ ಪ್ರಪಂಚದ ಬಲೆಗಳಲ್ಲಿ ಇಂಡಿಯಾವನ್ನು ಸಿಕ್ಕುಗೊಳಿಸಿರುವ ಹತ್ತಿಯ ದಾರಗಳನ್ನು ಕತ್ತರಿಸಲು ಹಿಂದೂ ಪ್ರವಾದಿ ಹೊರಟಿದ್ದಾರೆ. ನಿಮ್ಮ ಇಂಡಿಯಾದ ಕೈಗಳಿಂದ ನಮ್ಮ ಇಂಡಿಯಾದ ಹತ್ತಿಯನ್ನು ಹಿಂಜಿ, ನೂಲು ತೆಗೆದು, ನೇಯಿರಿ ಎಂದವರು ಪ್ರಚಾರ ಮಾಡುತ್ತಾರೆ. ಪಾಶ್ಚಾತ್ಯ ವಿದ್ಯುತ್ ಮಗ್ಗಗಳ ಬಟ್ಟೆಗಳನ್ನು ಧರಿಸಬೇಡಿ; ಪಾಶ್ಚಾತ್ಯ ಮಾದರಿಯ ಹೊಸ

೩೦. J.L. Sadie, *Royal Economic Society; Economic Journal,* June 1960.

ಇಂಡಿಯಾ ವಿದ್ಯುತ್ ಮಗ್ಗಗಳನ್ನು ಇಂಡಿಯಾ ಭೂಮಿಯ ಮೇಲೆ ಸ್ಥಾಪಿಸಿ, ಈ ವಿದೇಶಿ ಉತ್ಪನ್ನಗಳನ್ನು ಹೊರದೂಡಬೇಡಿರೆಂದು ನಾನು ಬೇಡಿಕೊಳ್ಳುತ್ತೇನೆ, ಎಂಬುದಾಗಿ ಟಾಯಿನ್‌ಬೀ ಬರೆಯುತ್ತಾನೆ. ಈ ಸಂದೇಶವನ್ನು, ಗಾಂಧಿಯ ವಾಸ್ತವ ಸಂದೇಶವನ್ನು ಅವರ ದೇಶದ ಜನರೇ ಒಪ್ಪಿಕೊಂಡಿಲ್ಲ. ಆ ಜನರು ಸಂತರೆಂದವರನ್ನು ಒಪ್ಪಿಕೊಂಡಿದ್ದಾರೆ; ಆದರೆ ಪಾಶ್ಚಾತ್ಯೀಕರಣದ ಮಾರ್ಗದಲ್ಲಿ ಅವರನ್ನು ಕರೆದೊಯ್ಯುವಷ್ಟರಮಟ್ಟಿಗೆ ಮಾತ್ರ ಅವರ ಮಾರ್ಗದರ್ಶನವನ್ನನುಸರಿಸುತ್ತಾರೆ. ಹೀಗೆ ಸಮ್ಮೇಳನ, ವೋಟು, ವೇದಿಕೆ, ವಾರ್ತಾಪತ್ರಿಕೆ ಮತ್ತು ಪ್ರಚಾರಗಳನ್ನೊಳಗೊಂಡ ಪಾಶ್ಚಾತ್ಯ ಕಾರ್ಯಕ್ರಮದ ಮಾದರಿಯಲ್ಲಿ ರಾಜಕೀಯ ಚಳುವಳಿಯನ್ನಿಂದು ಗಾಂಧಿ ಉತ್ತೇಜಿಸುತ್ತಿರುವುದನ್ನು ನಾವು ಕಾಣುತ್ತೇವೆ. ಈ ಚಳುವಳಿಯಲ್ಲಿ ಪ್ರವಾದಿಯ ಅತ್ಯಂತ ಪರಿಣಾಮಕಾರಿಯಾದ, ಆದರೆ ಅವರ ಒಳ ವಲಯಕ್ಕೆ ಸೇರದ – ಬೆಂಬಲಿಗರೆಂದರೆ, ಪ್ರವಾದಿಯ ನಿಜವಾದ ಧ್ಯೇಯವನ್ನು ಸೋಲಿಸಲು ಸಾಕಷ್ಟು ಕಸರತ್ತು ಮಾಡಿದ ಭಾರತೀಯ ಉದ್ಯಮ ಪತಿಗಳು ಹಾಗೂ ಕೈಗಾರಿಕೀಕರಣದ ತಂತ್ರವನ್ನು ಭಾರತದಲ್ಲಿ ಒಗ್ಗಿಸಿದ ಜನರು,[೩೧] ಸೂಕ್ಷ್ಮೀಕರಣ ಎಂದು ಆರ್ನಾಲ್ಡ್ ಟಾಯನ್‌ಬೀ ಕರೆಯುವ ವಿಷಯವನ್ನು ಕುರಿತ ಸುದೀರ್ಘವೂ, ಸ್ವಾರಸ್ಯಕರವೂ ಆದ ಚರ್ಚೆಯ ಕೊನೆಯಲ್ಲಿ ಈ ಆರೋಪಣೆ ಮೊಗದೋರುತ್ತದೆ. ವರ್ಧಕ ಸರಳೀಕರಣ ನಿಯಮವೆಂದು ಕರೆಯಲ್ಪಡುವ ಈ ಭಾವನೆಯ ಕಡೆಗೆ ನಾವು ಗಮನ ಹರಿಸಬೇಕಾಗಿದೆ. ಟಾಯನ್‌ಬೀಯ ಪ್ರಕಾರ, ನಾಗರಿಕತೆಯ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಲು ತಂತ್ರಾಭಿವೃದ್ಧಿಯ ಇತಿಹಾಸ ಸುಳುಹುಕೊಡುವಲ್ಲಿ ಸೋಲುತ್ತದೆ; ಆದರೆ ಇಡೀ ಪ್ರಕ್ರಿಯೆಯ ಸಾಮರ್ಥ್ಯವನ್ನು ಹೆಚ್ಚಿಸುವ ತಂತ್ರದ ವರ್ಧಕ ಸರಳೀಕರಣದ ನಿಯಮವನ್ನು ಅಧ್ಯಯನ ಪ್ರಕಾಶಪಡಿಸುತ್ತದೆ. ಉದಾಹರಣೆಗೆ ತಂತಿಯ ವಾರ್ತಾ ವಾಹಕದ ಬದಲಿಗೆ ತಂತಿಯಿಲ್ಲದ ವಾರ್ತಾವಾಹಕ ಬಂತು. ಬೌದ್ಧಿಕ ಗ್ರಹಿಕೆಯ ಸೌಂದರ್ಯಾತ್ಮಕ ತೃಪ್ತಿಯಲ್ಲಿ ಅದೇ ತೆರನ ಪ್ರವೃತ್ತಿಯನ್ನು ಗಮನಿಸಬಹುದು. ಶಕ್ತಿಗಳನ್ನು ಬಂಧನದಿಂದ ಮುಕ್ತಿಗೊಳಿಸುವಲ್ಲಿ ಈ ಸರಳತೆಯ ಅಭಿವರ್ಧನೆಯನ್ನು ಕಾಣಬಹುದು. ಅದರಿಂದಾಗಿ ಆ ಶಕ್ತಿಗಳು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಬಲ್ಲುವು. ಈ ಭಾವನೆಯನ್ನು ಕಾರ್ಯಗತಗೊಳಿಸಿದ್ದಾದರೆ, ತಂತ್ರಜ್ಞಾನದ ಕ್ಷೇತ್ರದಲ್ಲಿ ಉತ್ತಮ ನಮೂನೆಯ ಯಂತ್ರೋಪಕರಣಗಳನ್ನು ಪಡೆಯಬಹುದು. ಅವು ಕಡಿಮೆ ವೇಳೆಯಲ್ಲಿ, ಕಡಿಮೆ ಶಕ್ತಿಯ ಬಳಕೆಯಲ್ಲಿ ಹೆಚ್ಚು ಸಮರ್ಥವಾಗಿ ಕೆಲಸಮಾಡಬಲ್ಲುವೆಂಬುದು ಅಂತಿಮ ಉತ್ಪನ್ನ ಹೊರಬಂದಾಗ ಸ್ಪಷ್ಟವಾಗುತ್ತದೆ. ಇದು ಪಾಶ್ಚಾತ್ಯ ಸಂಸ್ಕೃತಿಯ

೩೧. Arnold Toynbee, *The Study of History,* p. 205.



ಸಾಮರ್ಥ್ಯಕ್ಕೆ ನಿದರ್ಶನವಾಗುತ್ತದೆ. ಆ ನಾಗರಿಕತೆಯ ಹೊಂದಾಣಿಕೆಯಲ್ಲಿ ಅಥವಾ ಅಂಗೀಕಾರಾರ್ಹವಾದ ವಿಸ್ತರಣೆಯಲ್ಲಿ ಅದರ ವಿರೋಧ ಕೊನೆಗಾಣುತ್ತದೆ. ಗಾಂಧಿಯ ವಿಪರ್ಯಾಸದ ಬಗೆಗಿನ ಟಾಯನ್‌ಬೀಯ ಟೀಕೆಗೆ ಸರಳೀಕರಣ ನಿಯಮ ಅಥವಾ ಸೂಕ್ಷ್ಮೀಕರಣ ಕಾರಣ. ಅವನ ಪ್ರಕಾರ ಗಾಂಧಿ ಪಾಶ್ಚಾತ್ಯ ಪ್ರಜಾಪ್ರಭುತ್ವದ ಎಲ್ಲ ಸಾಮಗ್ರಿಗಳನ್ನು ಅನಾಮತ್ತಾಗಿ ಅನುಕರಿಸುತ್ತಾರೆ. ಆದರೆ ಕೈಗಾರಿಕಾ ತಂತ್ರಗಾರಿಕೆಯ ಕ್ಷೇತ್ರದಲ್ಲಿ ಪಾಶ್ಚಾತ್ಯ ನಾಗರಿಕತೆಯ ನೈಜ ಫಲಗಳನ್ನು ವಿರೋಧಿಸುತ್ತಾರೆ. ಟಾಯನ್‌ಬೀ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಲು ತಂತ್ರಾಭಿವೃದ್ಧಿಯ ಆರೋಪಣೆ ನಿಜಕ್ಕೂ ಗಂಭೀರವಾಗಿದೆ. ಪಾಶ್ಚಾತ್ಯ ಪ್ರಜಾಪ್ರಭುತ್ವ ತತ್ವ ಸಂಸ್ಥೆಗಳ ಬಗ್ಗೆ ಪಕ್ಷಪಾತದಿಂದಿರುವ ಗಾಂಧಿ ಉದ್ಯಮಪತಿಗಳಾಗಿರುವ ಹಾಗೂ ಮಹಾತ್ಮರ ಬೋಧನೆಗೆ ಕಿವುಡಾಗಿರುವ ತಮ್ಮ ದೇಶದ ಜನರ ಅರೆಮನಸ್ಸಿನ ಸಹಾಯದಿಂದ ಯಂತ್ರೋಪಕರಣದ ಬಳಕೆಯನ್ನು ತಿರಸ್ಕರಿಸುತ್ತಾರೆ. ಯಂತ್ರ ತಂತ್ರಗಾರಿಕೆಯ ಕ್ಷೇತ್ರಕ್ಕೆ ಅನ್ವಯವಾಗುವಂತೆ ಟಾಯನ್‌ಬೀಯ ಸರಳೀಕರಣ ನಿಯಮಗಳ ವಿವೇಚನೆ ತುಂಬ ಸ್ವಾರಸ್ಯಕರವಾಗಿರುತ್ತದೆ. ತಂತ್ರಗಾರಿಕೆಯ ಸರಳೀಕರಣದಿಂದ ಕಾರ್ಯ ನಿರ್ವಹಣೆಯಲ್ಲಿ ಸಾಮರ್ಥ್ಯವನ್ನೂ ಮಿತವ್ಯಯವನ್ನೂ ಸಾಧಿಸಬಹುದಾದರೂ, ಆ ಸರಳತೆಯೇ ತಂತ್ರಗಾರಿಕೆಯನ್ನು ಬಳಸುವ ಸಮಾಜದ ಮೇಲೆ ತೊಡಕಿನ ಸಮಸ್ಯೆಯನ್ನೆಸೆಯುತ್ತದೆ. ಟಾಯನ್‌ಬೀಗೂ ಅದು ಗೊತ್ತಿದೆ; ಅವನು ಆಧುನಿಕ ಸಂಚಾರೀ ಸಮಸ್ಯೆಯ ಉದಾಹರಣೆಯನ್ನು ಉಲ್ಲೇಖಿಸುತ್ತಾನೆ. ಹಿಂದಿನ ಕಾಲದಲ್ಲಿ ರಸ್ತೆ ಸಂಚಾರ ನಿಧಾನವಾಗುತ್ತಿತ್ತು; ರಸ್ತೆಯಲ್ಲದ ರಸ್ತೆಯಲ್ಲಿ ಜಗ್ಗಾಡುತ್ತಿತ್ತು. ಅದಕ್ಕೆ ಬದಲಾಗಿ, ಆಧುನಿಕ ಸಂಚಾರ ದುಂಬಿ ಅಥವಾ ಗುಂಡಿನ ವೇಗದಲ್ಲಿ ಬುಸುಗುಡುತ್ತ ಸಾಗುತ್ತದೆ. ಇದು ಸರಳತೆಯೆ? ಮತ್ತೆ ಟಾಯನ್‌ಬೀಯಿಂದಲೇ ಉದ್ಧರಿಸಬಹುದು; 'ಭೌತಿಕ ದೂರದ ಹಳೆಯ ಸವಾಲು ಇದೀಗ ಚಾಲಕರ ನಡುವಣ ಮಾನವ ಸಂಬಂಧಗಳ ಹೊಸ ಸವಾಲುಗಳಾಗಿ ರೂಪಾಂತರ ಹೊಂದಿವೆ. ದೂರವನ್ನು ಗೆಲ್ಲುವ ವಿಧಾನವನ್ನು ಕಲಿತ ಅವರು ನಿರಂತರ ಅಪಾಯದಲ್ಲಿ ಅಥವಾ ಪರಸ್ಪರ ವಿನಾಶದಲ್ಲಿ ತೊಡಗಿಕೊಂಡಿದ್ದಾರೆ. ಪ್ರತಿಯೊಂದು ಯುಗದಲ್ಲಿಯೂ, ಪ್ರತಿಯೊಂದು ಸಮಾಜದಲ್ಲಿಯೂ ನೈತಿಕ ವಿಷಯವೊಂದು ಯಾವಾಗಲೂ ಸವಾಲಾಗಿರುತ್ತದೆ; ಅದು ಸಮಾಜದ ಭವಿಷ್ಯವನ್ನು ನಿರ್ಧರಿಸುತ್ತದೆ; ಆದರದು ಹೇಗೆಯೇ ಇರಲಿ, ನಮ್ಮ ಸಮಾಜವನ್ನಿಂದು ಎದುರಿಸುತ್ತಿರುವುದು ಭೌತಿಕ ಸವಾಲಲ್ಲ, ನೈತಿಕಾಹ್ವಾನವೆಂಬುದರಲ್ಲಿ ಸಂದೇಹವಿಲ್ಲ.[೩೨] ಸೂಕ್ಷ್ಮೀಕರಣದ ಭಾವನೆಯ ಪೂರ್ಣಾರ್ಥವನ್ನು ಟಾಯನ್‌ಬೀ ಗ್ರಹಿಸಿಲ್ಲವೆಂದೇ ತೋರುತ್ತದೆ. ಗಾಂಧಿಯವರ

೩೨. Arnold Toynbee, *The Study of History,* p. 206.

ದರ್ಶನ ವಿಶಾಲವಾದದ್ದು ; ಸಂಘರ್ಷಗಳು ಎಲ್ಲಿರಬಹುದೆಂಬುದನ್ನು ಕಾಣುವ ಸಾಮರ್ಥ್ಯ ಅವರಿಗಿತ್ತು. ಪಾಶ್ಚಾತ್ಯ ಪ್ರಜಾಪ್ರಭುತ್ವದ ಎಲ್ಲ ಶೃಂಗಾರಗಳನ್ನು ಗಾಂಧಿಯವರು ಸ್ವೀಕರಿಸಿದರು. ಆಂಗ್ಲರನ್ನು ದೇಶದಿಂದಾಚೆಗಟ್ಟುವ ತಮ್ಮ ಸ್ವಾತಂತ್ರ್ಯ ಸಮರದಲ್ಲಿ ಭಾರತೀಯ ಉದ್ಯಮಪತಿಗಳ ಬೆಂಬಲವನ್ನು ಪಡೆದರು; ಆದರೆ ಆ ಉದ್ಯಮಪತಿಗಳು ಯಂತ್ರ ಬಳಕೆಯ ಬಗೆಗಿನ ಅವರ ಬೋಧನೆಯನ್ನು ಲಕ್ಷಿಸಲಿಲ್ಲವೆಂಬ ಆರೋಪ ಅವರ ಮೇಲಿದೆ. ಆದರೆ ಅವರಿಗೆ ಸಂಬಂಧಿಸಿದಂತೆ ಯಾವ ವಿಪರ್ಯಾಸವೂ ಇಲ್ಲ. ಆದಾಗ್ಯೂ ಯಾಂತ್ರೀಕರಣಕ್ಕೆ ಉತ್ತೇಜನ ಕೊಡಬಾರದೆಂಬ ಮಹಾತ್ಮರ ಮನವಿ ಸಂಪೂಣಘ ಯಶಸ್ವಿಯಾಗಲಿಲ್ಲವೆಂಬ ಟಾಯನ್‌ಬೀಯ ಅಭಿಪ್ರಾಯವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅವರ ಅನುಯಾಯಿಗಳಲ್ಲಿ ಯಾವಾಗಲೂ ವಿಪರ್ಯಾಸವಿದ್ದೇ ಇದೆ. ನಾಯಕರ ರಾಜಕೀಯ ಕಾರ್ಯಕ್ರಮಗಳಲ್ಲಿ ಅನುಯಾಯಿಗಳು ಸಂಪೂರ್ಣ ವಿಶ್ವಾಸವಿಟ್ಟಿದ್ದರೂ, ಅವರ ಆರ್ಥಿಕ ಕಾರ್ಯಕ್ರಮಗಳ ಬಗ್ಗೆ ಉದಾಸೀನವಾಗಿದ್ದರೂ. ಇಂಡಿಯಾದ ಆರ್ಥಿಕಾಭಿವೃದ್ಧಿಯ ಇಂದಿನ ಕಾರ್ಯಕ್ರಮದಲ್ಲಿ ಇದಕ್ಕೆ ಸ್ಪಷ್ಟ ಪ್ರಮಾಣ ಸಿಗುತ್ತದೆ. ಮುಂದೆ ಕೊಟ್ಟಿರುವ ಅಭಿಪ್ರಾಯ ಇಂದಿನ ಸ್ಥಿತಿಗತಿಯನ್ನು ಅಭಿವ್ಯಕ್ತಿಸುವಂತೆ ತೋರುತ್ತದೆ; ಉದಾಹರಣೆಗೆ, ಯಂತ್ರೋಪಕರಣ ಮತ್ತು ಮುಂದುವರಿದ ತಂತ್ರಗಾರಿಕೆಯನ್ನಾಧರಿಸಿದ ಆಧುನಿಕ ನಾಗರಿಕತೆಯ ನಿರಾಕರಣೆ ಗಾಂಧಿ ಸಿದ್ಧಾಂತದ ನಿಯಮಗಳಲ್ಲೊಂದು. ಕೈಕೆಲಸ ಪ್ರಧಾನವಾದ ಆರ್ಥಿಕತೆಯ ಪರಿಕಲ್ಪನೆ ಇದೀಗ ನಿಸ್ಸಂದಿಗ್ಧವಾಗಿ ತ್ಯಾಜ್ಯಗೊಂಡಿದೆ. ತುಂಬ ಮುಂದುವರಿದ ತಾಂತ್ರಿಕತೆಯಿಂದ ಕೂಡಿದ, ಹೆಚ್ಚು ಕೈಗಾರಿಕೀಕರಣಗೊಂಡ ಸಮಾಜದ ಪರಿಕಲ್ಪನೆ ಅದರ ಜಾಗದಲ್ಲಿ ಬಂದಿದೆ. ಈ ವಿಷಯದಲ್ಲೇನಾದರೂ ಅನುಮಾನವಿದ್ದರೆ, ಸರ್ಕಾರವೂ ಸ್ವೀಕರಿಸಿದ, ಕೈಗಾರಿಕೀಕರಣವೇ ಆಧಾರವಾಗುಳ್ಳ ದೇಶದ ನೂತನ ಅಭಿವೃದ್ಧಿ ಯೋಜನೆಗಳು ಸಂಪೂರ್ಣವಾಗಿ ಅದನ್ನು ತೊಲಗಿಸಿವೆ.'[೩೩]

ಉತ್ಪನ್ನ ಸಂಬಂಧದ ಪಾಶ್ಚಾತ್ಯ ತಂತ್ರವನ್ನು ಸ್ವೀಕರಿಸಲು ಮನಸ್ಸಿಲ್ಲದೆ, ಪಾಶ್ಚಾತ್ಯ ಪ್ರಜಾಪ್ರಭುತ್ವದ ಮಾರ್ಗಗಳನ್ನು ಅನುಸರಿಸುವ ಮಹಾತ್ಮರ ವಿಪರ್ಯಾಸವನ್ನು ಟಾಯನ್‌ಬೀ ಎತ್ತಿ ತೋರಿಸುತ್ತಾನೆ. ಪ್ರಜಾಪ್ರಭುತ್ವದ ಸತ್ವ ಪಾಶ್ಚಾತ್ಯ ನಾಗರಿಕತೆಗೆ ಮಾತ್ರವೇ ಸೀಮಿತವಾದ ಅಭಿವ್ಯಕ್ತಿಯೇ ಎಂಬುದರ ಬಗ್ಗೆ ಇಲ್ಲಿ ಚರ್ಚಿಸಬೇಕಾಗಿಲ್ಲ. ಭಾರತದಲ್ಲಿ ಪ್ರಾಚೀನಕಾಲದಿಂದ ಪ್ರಜಾಪ್ರಭುತ್ವದ ತತ್ವವನ್ನು ಸ್ವೀಕರಿಸಿದ ಸಂಸ್ಥೆಗಳು ಅಭಿವೃದ್ಧಿಗೊಂಡಿದ್ದವೆಂಬುದನ್ನು ಗಮನಿಸಿದರೆ ಸಾಕು. ಗಾಂಧಿಯವರ ರಾಜಕೀಯ ತಂತ್ರದಲ್ಲಿ ಮುಖ್ಯವಾದದ್ದೇನೆಂದರೆ, ಇಡೀ ಸಮಸ್ಯೆಗೆ ಸಂಬಂಧಿಸಿದ ನೈತಿಕ ಮಾರ್ಗ.

೩೩. E.M.S. Nambudripad, *Seminar,* June 1963.



ಈ ಸಂಗತಿ ಅರ್ಥವಾದರೆ, ಆರ್ಥಿಕ ಸಮಸ್ಯೆಯ ವಲಯದಲ್ಲಿಯು ಸಹ ಅದೇ ನೈತಿಕ ಮಾರ್ಗಕ್ಕೆ ಒತ್ತುನೀಡಲಾಗಿದೆಯೆಂಬ ಅಂಶವನ್ನು ಮನಗಾಣಬಹುದು. ಗಾಂಧಿಯವರ ರಾಜಕೀಯ ಮತ್ತು ಆರ್ಥಿಕ ಸಿದ್ಧಾಂತದಲ್ಲಿ ವಿಭಿನ್ನತೆಗಿಂತ ಬಹುಮುಖ್ಯವಾದ ಏಕೀಭಾವವಿದೆಯೆಂಬುದು ನಿಜ. ಲೇಖಕನೊಬ್ಬ ಆ ಬಗ್ಗೆ ಬರೆಯುವಂತೆ 'ಗಾಂಧಿ ಸಿದ್ಧಾಂತದ ವಿಕಾಸ ಸಮನ್ವಯಶೀಲವಾದದ್ದು. ಭಾರತದ ಸಾಂಪ್ರದಾಯಿಕತೆ ಮತ್ತು ಪಾಶ್ಚಾತ್ಯ ಆಧುನಿಕತೆ ಎರಡೂ ಗಾಂಧಿ ಸಿದ್ಧಾಂತವನ್ನು ರೂಪಿಸಿವೆ. ಎರಡೂ ಪ್ರವಾಹಗಳು ಹೇಗೆ ಪರಸ್ಪರವಾಗಿ ವಿಲೀನಗೊಂಡುವು ಮತ್ತು ಗಾಂಧಿಯವರ ಸೃಜನಾತ್ಮಕ ನಾಯಕತ್ವ ಕ್ರಿಯಾತಂತ್ರವನ್ನು ರೂಪಿಸುವಲ್ಲಿ ಎರಡರ ಮೂಲತತ್ವಗಳನ್ನು ಹೇಗೆ ರೂಪಾಂತರಗೊಳಿಸಿತೆಂಬುದು ಗಾಂಧಿ ಸಿದ್ಧಾಂತದ ಅತ್ಯಂತ ಸ್ವಾರಸ್ಯದ ಭಾಗವಾಗಿದೆ. ಅವರು ನೀಡಿರುವ ಮಹತ್ವದ ಕೊಡುಗೆಯೆಂದರೆ ಕ್ರಿಯಾತಂತ್ರ; ಪಾಶ್ಚಾತ್ಯರ ಮೇಲೆ ಗಾಂಧಿಯವರು ಮಾಡಿರುವ ಮಹಾ ಪ್ರಭಾವವೆಂದರೆ ಈ ಕ್ರಿಯಾತಂತ್ರವೇ ಆಗಿದೆ.'[೩೪]

ಉತ್ಪಾದನೆಗೆ ಸಂಬಂಧಿಸಿದ ಸಂಘಟನೆಯ ಮಾದರಿಯ ಬಗ್ಗೆಯೂ ಗಾಂಧಿ ಚರ್ಚಿಸಿದರು. ಕೈಗಾರಿಕೀಕರಣ ನಿರಾಕರಣೆಯ ಹಿನ್ನೆಲೆಯಲ್ಲಿ ಉತ್ಪನ್ನಗಳ ನಕ್ಷೆಯನ್ನು ವಿವರಿಸುವಂತೆ ಅವರನ್ನು ಕೇಳಲಾಯಿತು. ವಿದೇಶೀಯ ಭೇಟಿಗಾರರು ಈ ವಿಷಯದ ಬಗ್ಗೆ ಮತ್ತೆ ಮತ್ತೆ ಪ್ರಶ್ನಿಸಿದರು. ಭಾರಿ ಪ್ರಮಾಣದ ಉತ್ಪನ್ನಗಳ ಬಗೆಗಿನ ತಮ್ಮ ನಿಲವನ್ನು ಇಂಡಿಯಾದ ಅರ್ಥಶಾಸ್ತ್ರಜ್ಞರೂ ಸರಿಯಾಗಿ ಅರ್ಥಮಾಡಿಕೊಳ್ಳಲಾರರೆಂದು ಗಾಂಧಿ ಕೆಲವೊಮ್ಮೆ ನೊಂದುಕೊಂಡದ್ದುಂಟು. ೧೯೩೯ರಲ್ಲಿ ನಾಗಪುರದಲ್ಲಿ ನಡೆದ ಅರ್ಥಶಾಸ್ತ್ರಜ್ಞರ ಸಮ್ಮೇಳನಕ್ಕೆ ಬಂದಿದ್ದ ಸುಮಾರು ಮೂವತ್ತು ಭಾರತೀಯ ಅರ್ಥಶಾಸ್ತ್ರಜ್ಞರು ಗಾಂಧಿಯವರನ್ನು ಭೇಟಿ ಮಾಡಿದರು. ಆಧುನಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ತಮ್ಮ ನಿಲವನ್ನು ಟೀಕಿಸುವಂತೆ ಗಾಂಧಿ ಅವರಿಗೆ ತಿಳಿಸಿದರು. ಅವರಿಗೆ ಬೇಕಾದ್ದು ರಚನಾತ್ಮಕವಾದ ಟೀಕೆ. ಅವರು ಅರ್ಥಶಾಸ್ತ್ರಜ್ಞರಿಗೆ ಹೇಳಿದ್ದಿದು: 'ಇಡೀ ಯೋಜನೆಯೆ ಸಂಪೂರ್ಣವಾಗಿ ಸೋತಿತೆಂದು ಅಧಿಕಾರ ವಾಣಿಯಿಂದ ಕೆಲವರು ಅರ್ಥಶಾಸ್ತ್ರಜ್ಞರು ಆ ಮುನ್ನ ನುಡಿದಿದ್ದಂತೆ, ನೀವು ಹೇಳಬೇಡಿ.' 'ನೀವು ಅಧಿಕ ಪ್ರಮಾಣದ ಉತ್ಪತ್ತಿಗೆ ವಿರುದ್ಧವಾಗಿದ್ದೀರಾ?' ಎಂಬುದಾಗಿ ಹಾಜರಿದ್ದ ಅರ್ಥಶಾಸ್ತ್ರಜ್ಞರಲ್ಲೊಬ್ಬ ಕೇಳಿದನು. 'ನಾನೆಂದೂ ಹಾಗೆ ಹೇಳಿಲ್ಲ. ಇಂಥದೊಂದು ನಂಬಿಕೆ ಏನಿದೆ, ನನ್ನ ಬಗೆಗಿನ ಹಲವು ಮೂಢನಂಬಿಕೆಗಳಲ್ಲಿ ಇದೂ ಒಂದು. ನನ್ನ ಅರ್ಧ ಭಾಗ ಸಮಯ ಇಂಥ ವಿಷಯಗಳಿಗೆ ಉತ್ತರ ಹೇಳುವುದರಲ್ಲಿ ಕಳೆದುಹೋಗುತ್ತದೆ. ಗ್ರಾಮೀಣರು ಕಷ್ಟವಿಲ್ಲದೆ ಅಧಿಕ ಪ್ರಮಾಣದ ವಸ್ತುಗಳನ್ನು

೩೪. *Seminar,* No. 46. pp. 31-32.

ಉತ್ಪಾದಿಸುತ್ತಾರೆನ್ನುವ ವಿಷಯದ ವಿರುದ್ಧ ನಾನಿದ್ದೇನೆ, ನಿಜ' ಎಂದವರು ಉತ್ತರಿಸಿದರು. ಗ್ರಾಮೀಣರು ಅನುಭವಿಸಲಿಚ್ಛಿಸುವ, ತಾವು ಮಾಡಲಾಗದ ಹಲವು ವಸ್ತುಗಳ ಭಾರಿ ಪ್ರಮಾಣದ ಉತ್ಪಾದನೆಗೆ ಗಾಂಧೀಜಿ ಅವಕಾಶ ನೀಡುವರೆ? ಉತ್ತರಕ್ಕಾಗಿ ನಾವು ಅಗತ್ಯಗಳ ಸ್ವಾಪೇಕ್ಷೆಯ ಮಿತಿಯ ಅವರ ಮೂಲಭೂತ ತತ್ವದ ಕಡೆಗೆ ಹೊರಳಬೇಕಾಗುತ್ತದೆ. ಏಕೆಂದರೆ ನಗರಗಳ ಆಕ್ರಮಣದ ವಿರುದ್ಧವಾಗಿ ಹಳ್ಳಿಗಳನ್ನು ರಕ್ಷಿಸುವುದೇ ಅವರ ಅಪೇಕ್ಷೆಯಾಗಿತ್ತು. ಒಂದಾನೊಂದು ಕಾಲದಲ್ಲಿ ನಗರಗಳು ಹಳ್ಳಿಗಳನ್ನವಲಂಬಿಸಿದ್ದುವೆಂದು ಗಾಂಧಿ ಎತ್ತಿ ತೋರಿಸಿದರು. ಈಗದು ಹಿಂದುಮುಂದಾಗಿದೆ. ಆಗ ಪರಸ್ಪರಾವಲಂಬನೆಯಿರಲಿಲ್ಲ. ಹಳ್ಳಿಯ ಉತ್ಪಾದನೆಗಳಿಗೆ ಹಣವ್ಯಾಪಾರಿಗಳ ಕೇಂದ್ರ ಸಂಸ್ಥೆಯಾಗಿ ಸೇವೆ ಸಲ್ಲಿಸುವುದು ನಗರಗಳ ಸಮಂಜಸ ಕರ್ತವ್ಯವಾಗಿತ್ತು. ಗ್ರಾಮೀಣ ಅರ್ಥವ್ಯವಸ್ಥೆಯ ರಕ್ಷಣೆಯೇ ಗಾಂಧೀಜಿಯ ಅಪೇಕ್ಷೆಯಾಗಿತ್ತು. ಆರ್ಥಿಕಾಭಿವೃದ್ಧಿಯಿಂದಾಗಿ, ಇಂಡಿಯಾದಲ್ಲೀಗಲೂ ಕಾಣುತ್ತಿರುವ, ನಗರೀಕರಣಮುಖೀ ಮಾರ್ಗವನ್ನವರು ಖಂಡಿತವಾಗಿಯೂ ವಿರೋಧಿಸುತ್ತಾರೆ.

೧೯೩೪ರಲ್ಲಿ ಗಾಂಧಿಯವರನ್ನು ಲಂಡನ್ನಿನಲ್ಲಿ ಭೇಟಿ ಮಾಡಿದ ವಿದೇಶೀಯ ಭೇಟಿಕಾರನ ಜತೆಯಲ್ಲಿ ಹಳ್ಳಿಯ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸುವ ವಿಷಯವನ್ನು ಚರ್ಚಿಸಲಾಯಿತು. ಅಧಿಕ ಪ್ರಮಾಣದ ಉತ್ಪಾದನೆ ಜನರ ಜೀವನ ಮಟ್ಟವನ್ನು ಹೆಚ್ಚಿಸುತ್ತದೆಯೆ ಎಂದವನು ಕೇಳುತ್ತಾನೆ. ಅದು ಸಂದೇಹಾಸ್ಪದವೆಂದವನು ಉತ್ತರಿಸುತ್ತಾನೆ. ಅವರ ವಿಶ್ಲೇಷಣೆ ಸ್ವಾರಸ್ಯಕರವಾಗಿದೆ. ಗ್ರಾಹಕರ ವಾಸ್ತವ ಅಗತ್ಯವನ್ನು ಅಧಿಕೋತ್ಪಾದನೆ ಗಮನಿಸುವುದಿಲ್ಲ. ಅಧಿಕೋತ್ಪಾದನೆ ತನಗೆ ತಾನೇ ಒಳ್ಳೆಯದೆನ್ನುವುದಾದರೆ, ಅದಕ್ಕೆ ಅನಿಯಮಿತ ವಿಸ್ತಾರದ ಸಾಮರ್ಥ್ಯವಿರಬಹುದು. ಆದರೆ ಅಧಿಕೋತ್ಪಾದನೆಗೆ ತನ್ನದೇ ಆದಂಥ ಮಿತಿಗಳಿವೆಯೆಂಬುದನ್ನು ನಿಶ್ಚಿತವಾಗಿ ತೋರಿಸಬಹುದು. ಎಲ್ಲ ದೇಶಗಳೂ ಅಧಿಕೋತ್ಪಾದನೆಯ ವ್ಯವಸ್ಥೆಯನ್ನೊಪ್ಪಿಕೊಂಡದ್ದಾದರೆ, ಅವುಗಳ ಉತ್ಪನ್ನಗಳಿಗೆ ಸಾಕಷ್ಟು ದೊಡ್ಡ ಮಾರುಕಟ್ಟೆಗಳಿರುವುದಿಲ್ಲ. ಅಂಥ ಸಂದರ್ಭದಲ್ಲಿ ಅಧಿಕೋತ್ಪಾದನೆಯನ್ನು ನಿಲ್ಲಿಸಬೇಕಾಗುತ್ತದೆ, ಎಂದವನು ವಾದಿಸಿದನು. ಗಾಂಧಿಯವರ ಪ್ರಕಾರ, ಅಧಿಕೋತ್ಪಾದನೆಯ ಗೀಳು ಜಾಗತಿಕ ಬಿಕ್ಕಟ್ಟಿಗೆ ಕಾರಣ. ಮಾನವ ಸಮಾಜದ ಎಲ್ಲ ಅಗತ್ಯಗಳನ್ನು ಯಾಂತ್ರಿಕ ವ್ಯವಸ್ಥೆ ಒದಗಿಸುತ್ತದೆಂದಿಟ್ಟುಕೊಳ್ಳೋಣ. ಆದಾಗ್ಯೂ ಕೆಲವು ನಿರ್ದಿಷ್ಟ ಜಾಗಗಳಲ್ಲಿ ಉತ್ಪಾದನೆಯನ್ನು ಕೇಂದ್ರೀಕರಿಸುವುದರಿಂದ, ಹಂಚಿಕೆಯನ್ನು ಕ್ರಮಗೊಳಿಸಬೇಕಾದರೆ ಸುತ್ತು ಬಳಸಿನ ಹಾದಿಯನ್ನು ಹಿಡಿಯಬೇಕಾಗುತ್ತದೆ. ಅವರು ಅಪೇಕ್ಷಿಸಿದ್ದೇನೆಂದರೆ, ಉತ್ಪಾದನೆ ಮತ್ತು ಹಂಚಿಕೆಗಳ ಹೊಂದಾಣಿಕೆ; ಹಂಚಿಕೆಯ ಅಗತ್ಯವಿರುವ ಉತ್ಪಾದನೆಯ ಕೇಂದ್ರದ ಸ್ಥಾನನಿರ್ದೇಶನ. ಉತ್ಪಾದನೆ ಮತ್ತು ವಿನಿಯೋಗಗಳೆರಡೂ ಒಂದೇ ಸ್ಥಳಕ್ಕೆ ಸೀಮಿತಗೊಂಡದ್ದಾದರೆ,



ಉತ್ಪಾದನೆಯನ್ನು ಶೀಘ್ರಗೊಳಿಸುವ ಪ್ರಲೋಭನೆ ಕಾಣೆಯಾಗುತ್ತದೆಂದು ಅವರು ಯೋಚಿಸುತ್ತಾರೆ. ಕೆಲವು ಕೇಂದ್ರಗಳಲ್ಲಿಯ ಅಧಿಕೋತ್ಪಾದನೆಯ ಇಂದಿನ ಸಮಸ್ಯೆ ಕೊನೆಗೊಳ್ಳುತ್ತದೆಂದವರು ಯೋಚಿಸಿದರು. ಪಾಶ್ಚಾತ್ಯ ವಿಧಾನದ ಅಧಿಕೋತ್ಪಾದನೆಯಿಂದಾಗುವ ನಿಜವಾದ ತೊಂದರೆಗೆ ದೋಷಮುಕ್ತವಾದ ಹಂಚಿಕೆಯ ವಿಧಾನಗಳು ಕಾರಣವಲ್ಲವೆ ಎಂದೊಮ್ಮೆ ಪಾಶ್ಚಾತ್ಯ ವೀಕ್ಷಕನೊಬ್ಬ ಅವರನ್ನು ಪ್ರಶ್ನಿಸಿದನು. ದೋಷ ವ್ಯವಸ್ಥೆಯಲ್ಲಿಯೆ ಅಡಗಿದೆಯೆಂದು ಗಾಂಧಿ ಉತ್ತರಿಸಿದರು. ಉತ್ಪಾದನೆಯನ್ನು ಸ್ಥಳೀಕರಿಸಿದಾಗ ಹಂಚಿಕೆಯನ್ನು ಸಮೀಕರಿಸಬಹುದೆಂಬುದು ಅವರ ಅಭಿಪ್ರಾಯ. ಅವರು ನಿರೀಕ್ಷಿಸಿದ್ದೇನೆಂದರೆ, ಸಾಮಾನ್ಯರಿಂದ ಉತ್ಪಾದನೆಯಾಗಬೇಕೆ ಹೊರತು, ರಾಶಿ ಉತ್ಪಾದನೆಯಲ್ಲ. ಸಾಮಾನ್ಯರ ಉತ್ಪಾದನೆಯಲ್ಲಿ ಹಂಚಿಕೆಯ ಸಮಸ್ಯೆಯಿರುವುದಿಲ್ಲ. ಗಾಂಧಿಯವರು ವಿಕೇಂದ್ರೀಕೃತ ಉತ್ಪಾದನಾ ವ್ಯವಸ್ಥೆಯ ಗಟ್ಟಿ ಪ್ರತಿಪಾದಕರೆಂಬ ಸಂಗತಿ ಮೇಲಣ ಚರ್ಚೆಯಿಂದ ವೇದ್ಯವಾಗುತ್ತದೆ. ಗ್ರಾಮೀಣ ಆರ್ಥಿಕ ವ್ಯವಸ್ಥೆಯ ಮರುಕಳಿಕೆ ಮತ್ತು ಗ್ರಾಮೀಣ ಕೈಗಾರಿಕೆಗಳ ಉತ್ತೇಜನ ಮಾತ್ರ ಸರಿಯೆಂದು ಸಕಾರಣವಾಗಿ ತೋರುತ್ತದೆ. ಅವರ ಯೋಜನೆಯನ್ನು 'ಪೂರ್ಣ ಮಾನವ ಶಕ್ತಿಯ ವಿಕೇಂದ್ರೀಕೃತ ಉತ್ಪಾದನೆ' ಎಂದು ಕೆಲವು ಮಾತುಗಳಲ್ಲಿ ಹೇಳಬಹುದು. ದೇಶದ ಕಚ್ಚಾ ಸಾಮಗ್ರಿಗಳನ್ನು ಬಳಸಿಕೊಂಡು, ಅಧಿಕ ಬಲದ ಗುಪ್ತ ಮಾನವ ಶಕ್ತಿಯನ್ನು ತಿರಸ್ಕರಿಸಿದ ಯಾವ ಯೋಜನೆಯನ್ನೂ ಸಮತೂಕವಲ್ಲದಾಗಿ, ಮಾನವ ಸಮಾನತೆಗೆ ನೆರವಾಗುವುದಿಲ್ಲವೆಂಬ ಪ್ರಸ್ತಾವನೆಯನ್ನವರು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆ. ಇಂಡಿಯಾದ ಪೂರ್ಣ ಮಾನವ ಶಕ್ತಿಯನ್ನು ಪರಮ ಪ್ರಮಾಣದಲ್ಲಿ ವಿನಿಯೋಗಿಸುವ ಮತ್ತು ಕಚ್ಚಾಸಾಮಗ್ರಿಗಳನ್ನು ದೇಶದ ಹೊರಗಡೆ ಕಳಿಸಿ, ಅಲ್ಲಿಂದ ಸಿದ್ಧವಸ್ತುಗಳನ್ನು ಅಗಾಧ ಕ್ರಯಕ್ಕೆ ಕೊಳ್ಳುವ ಬದಲು ಇಲ್ಲಿಯ ಅಸಂಖ್ಯಾತ ಹಳ್ಳಿಗಳಿಗೆ ಕಚ್ಚಾ ಸಾಮಗ್ರಿಗಳನ್ನು ಹಂಚುವ ಯೋಜನೆ ಮಾತ್ರ ಸಾರ್ಥಕವಾದದ್ದೆಂದವರು ಸ್ಪಷ್ಟಪಡಿಸಿದರು.

* * * *

# ೩. ಗ್ರಾಮೀಣ ಚಳುವಳಿ

ಗಾಂಧಿಯವರ ಇಂಡಿಯಾ ಆರ್ಥಿಕ ಕಾರ್ಯಕ್ರಮದ ಕೇಂದ್ರದಲ್ಲಿ ಗ್ರಾಮೀಣ ಆರ್ಥಿಕತೆಯನ್ನು ಪುನರುಜ್ಜೀವಿಸುವ ಯೋಜನೆಯಿದೆ. ರೈತರ ಕಲ್ಯಾಣ ಕಾರ್ಯಕ್ರಮವನ್ನವರು ಕೈಗೆತ್ತಿಕೊಂಡರು. ನಗರೀಕರಣದ ಕಡೆಗಿದ್ದ ಪ್ರವೃತ್ತಿಯನ್ನು ಮತ್ತು ನಗರ ಕೇಂದ್ರಿತ ಅರ್ಥವ್ಯವಸ್ಥೆಗಾಗಿ ನಡೆಯುತ್ತಿದ್ದ ಹಳ್ಳಿಗಳ ಸುಲಿಗೆಯನ್ನವರು ಗಮನಿಸಿದರು. 'ನಮ್ಮ ಭೂಗೋಳ ಭಿನ್ನ, ನಮ್ಮ ಚರಿತ್ರೆಯೇ ಬೇರೆ, ನಮ್ಮ ಜೀವನ ವಿಧಾನಗಳೇ ಬೇರೆ, ನಮ್ಮ ಭೂಖಂಡ ವಿಶಾಲವಾಗಿದ್ದರೂ, ಭೂಮಂಡಲದಲ್ಲೊಂದು ಚುಕ್ಕೆಯಂತಿದೆ, ಆದರದು ಚೀನಾ ಬಿಟ್ಟರೆ, ದಟ್ಟವಾದ ಜನಸಂಖ್ಯೆಯನ್ನು ಹೊಂದಿರುವ ದೇಶ. ಜನಸಂಖ್ಯೆ ಒತ್ತಡ ಅಧಿಕವಾಗಿರುವ ಮತ್ತು ಒತ್ತಡ ಕಡಿಮೆಯಾಗಿರುವ ದೇಶಗಳ ಅರ್ಥವ್ಯವಸ್ಥೆ ಮತ್ತು ನಾಗರೀಕತೆಗಳು ಪರಸ್ಪರ ತೀರ ಭಿನ್ನವಾಗಿರುತ್ತವೆ. ಕಾರ್ಯಕ್ರಮದಲ್ಲಿ ಹಳ್ಳಿಗಳನ್ನು ಕೇಂದ್ರ ಭಾಗಕ್ಕೆ ತರುವುದೊಂದೇ ಗ್ರಾಮೀಣ ಪ್ರದೇಶಗಳ ಜನರ ಉತ್ತಮ ಜೀವನದ ಭರವಸೆಯ ದಾರಿಯೆಂಬುದನ್ನವರು ಬಲ್ಲವರಾಗಿದ್ದರು. ಕೆಲವೊಮ್ಮೆ ಈ ಗ್ರಾಮೀಣ ಚಳುವಳಿಯನ್ನು ಹಳ್ಳಿಗೆ ಹಿಂದಿರುಗಿ ಚಳುವಳಿಯೆಂದು ತಪ್ಪಾಗಿ ವ್ಯಾಖ್ಯಾನಿಸುವುದುಂಟು. ಗ್ರಾಮೀಣ ಆರ್ಥಿಕತೆಯ ಪುನರುಜ್ಜೀವನದ ಅವರ ವಕಾಲತ್ತಿಗೆ ನಗರಗಳನ್ನು ನಿರ್ಜನಗೊಳಿಸಿ, ಅಲ್ಲಿಯ ನಿವಾಸಿಗಳನ್ನೆಲ್ಲಾ ಹಳ್ಳಿಗಳಿಗೆ ರವಾನಿಸುವುದೆಂದು ಅರ್ಥವೆ ಎಂದೊಮ್ಮೆ ವಿದೇಶೀಯ ಬಾತ್ಮೀದಾರನೊಬ್ಬ ಅವರನ್ನು ಕೇಳಿದನು. ಬಡಹಳ್ಳಿಗರ ಮೇಲೆ ಪರೋಪಜೀವಿಗಳಾಗುವುದನ್ನು ನಿಲ್ಲಿಸಿ, ಹಾಳಾದ ಅವರ ಆರ್ಥಿಕತೆಯನ್ನು ಪುನಶ್ಚೇತನಗೊಳಿಸಲು ನಷ್ಟ ತುಂಬಿಕೊಡುವ ಮೂಲಕ ಮರು ಹೊಂದಾಣಿಕೆಯಾಗಬೇಕೆಂಬುದೇ ತಮ್ಮ ಭಾವನೆಯೆಂದು ಗಾಂಧಿ ಅವನಿಗೆ ಉತ್ತರಿಸಿದರು.

ಉಪಯೋಗಿಸದ ನಿರುದ್ಯೋಗಿ ಗ್ರಾಮೀಣ ಶ್ರಮದೊಡನೆ ರೊಟ್ಟಿ ದುಡಿಮೆಯ ಕಲ್ಪನೆಯನ್ನು ಅವರು ಜೋಡಿಸಿದರು. 'ನೆರವೇರಿಸಬೇಕಾದ ಕೆಲಸಕ್ಕೆ ಬೇಕಾದ ಕೈಗಳು ತುಂಬ ಕಡಿಮೆಯಿರುವಾಗ ಯಾಂತ್ರೀಕರಣ ಒಳ್ಳೆಯದು. ಇಂಡಿಯಾದಲ್ಲಿರುವಂತೆ ನಿರ್ದಿಷ್ಟ ಕೆಲಸಕ್ಕೆ ಎಷ್ಟು ಕೈಗಳು ಬೇಕೊ, ಅವಕ್ಕಿಂತ ಹೆಚ್ಚು ಕೈಗಳಿರುವುದೊಂದು ದೋಷ. ವರ್ಷದಲ್ಲಿ ಆರು ತಿಂಗಳ ಕೆಲಸದ ದಿನಗಳಿಗೆ



ಸಮನಾದ ಅವರ ವ್ಯರ್ಥ ಗಂಟೆಗಳನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದೇ ನಮ್ಮ ಸಮಸ್ಯೆ' ಎಂದವರು ನುಡಿದರು. ಪುನಶ್ಚೇತನಗೊಳಿಸಬಹುದಾದ ಕೈಗಾರಿಕೆಗಳ ಪ್ರಸ್ತಾಪ ಬಂದಾಗ, ಗಾಂಧಿಯವರು ಖಾದಿ ಕಾರ್ಯಕ್ರಮಕ್ಕೆ ಹೆಮ್ಮೆಯ ಸ್ಥಾನವನ್ನು ನೀಡುತ್ತಾರೆ. ಅದು ವಾಸ್ತವವಾಗಿ ಮೂಲಭೂತ ಕಾರ್ಯಕ್ರಮದೋಪಾದಿಯಲ್ಲಿ ನೂಲುಗಾರಿಕೆಯ ಪ್ರಸ್ತಾವನೆಯಾಗಿತ್ತು. 'ಖಾದಿ ಹಳ್ಳಿಯ ಸೂರ್ಯಮಂಡಲದ ಸೂರ್ಯ. ವಿವಿಧ ಕೈಗಾರಿಕೆಗಳೇ ಗ್ರಹಗಳು, ಅದರಿಂದ ಪಡೆಯುವ ಕಾಲವು ಮತ್ತು ಕೆಲವು ಸತ್ವಗಳಿಗೆ ಬದಲಾಗಿ ಅವು ಖಾದಿಯನ್ನು ಬೆಂಬಲಿಸಬಹುದು.' ಅವರು ಚರಕದ ವಿಷಯವೆತ್ತಿಕೊಂಡಾಗ ಭಾವಾವಿಷ್ಟರಾಗಿ ಮಾತಾಡುತ್ತಿದ್ದರು; ಏಕೆಂದರೆ, ಬಡತನದ ದವಡೆಯಲ್ಲಿರುವ ಕೋಟ್ಯಂತರ ಜನರಿಗೆ ಸಮಾಧಾನವುಂಟುಮಾಡುವ ಸರಳ ಯಂತ್ರವದೆಂದವರಿಗೆ ಮನವರಿಕೆಯಾಗಿತ್ತು. ೧೯೦೮ರಲ್ಲಿ ಅವರು ನೂಲಿನ ಯಂತ್ರವನ್ನು ಲಂಡನ್ನಿನಲ್ಲಿ ಕಂಡುಹಿಡಿದರು. ಅಲ್ಲಿ ಅವರು ಅನೇಕ ಭಾರತೀಯರೊಡನೆ ಮನಃಪೂರ್ವಕವಾಗಿ ಚರ್ಚಿಸಿದರು. 'ನೂಲಿನ ಚಕ್ರವಿಲ್ಲದೆ ಸ್ವರಾಜ್ಯ ಸಾಧ್ಯವಿಲ್ಲವೆಂದು ನಾನೊಂದು ಹೊಳಹನ್ನು ಕಂಡೆ. ಪ್ರತಿಯೊಬ್ಬರೂ ನೂಲು ತೆಗೆಯಬೇಕೆಂದು ನನಗೆ ಸ್ಪಷ್ಟವಾಯಿತು.' ಚರಕವನ್ನು ೧೯೦೮ರಲ್ಲಿ ಗಾಂಧಿಯವರು ಪುನಶ್ಶೋಧಿಸಿದರೂ, ಹಲವು ವರ್ಷಗಳ ತಾಳ್ಮೆಯ ಮತ್ತು ಪರಿಶ್ರಮದ ಪ್ರಯತ್ನದ ತರುವಾಯ ೧೯೧೮ರಲ್ಲಿ ಅದಕ್ಕೆ ಕೆಲಸ ಒದಗಿಸಲಾಯಿತು. ಅವರು ದಾರಿಯಲ್ಲಿ ದಾಟಬೇಕಾಗಿದ್ದ ಹಲವು ಹೊಂಡಗಳನ್ನು ತಿಳಿಯಬೇಕಾದರೆ ಅವರ ಬರಹಗಳನ್ನೋದಬೇಕು. ಹರಿಕಾರನ ಉತ್ಸಾಹ ಅವರಲ್ಲಿ ಅಪಾರವಾಗಿತ್ತು. ಈ ಮಹತ್ಕಾರ್ಯದಲ್ಲಿ ಅವರಿಗೆ ಸಮರ್ಥರೂ ವಿಶ್ವಾಸಾರ್ಹರೂ ಅಹಂತ್ಯಾಜ್ಯರೂ ಆದ ಯೋಧರ ಬೆಂಬಲವಿತ್ತು. ಚರಕದ ಕಾಣ್ಮೆಯ ಮತ್ತು ಗ್ರಾಮೀಣ ಆರ್ಥಿಕತೆ ಹೊಂದಿಕೊಳ್ಳುವಂತೆ ಅದನ್ನು ರೂಪಿಸಿದ ಕಥೆ ಸತ್ತ ಗ್ರಾಮೀಣ ಕೈಗಾರಿಕೆಯನ್ನು ಪುನರುಜ್ಜೀವಿಸುವಲ್ಲಿ ಮಹಾಕಾವ್ಯದ ಒಂದು ಅಧ್ಯಾಯದಂತೆ ಓದಿಸಿಕೊಳ್ಳುತ್ತದೆ. ಹಳ್ಳಿಯ ಮಾದರಿಗೆ ಹೊಂದಿಕೊಳ್ಳುವಾಗ ಏಕೈಕ ಸಾಧನವಾದ ಚರಕವನ್ನು ರೂಪಿಸಲು ಪ್ರೇರಕವಾದ ಮೂಲಭೂತ ಆರ್ಥಿಕ ವಿದ್ಯಮಾನಗಳ ಅವರ ವಿಶ್ಲೇಷಣೆ ಸೂಕ್ತವಾಗಿತ್ತು. ಇಂಡಿಯಾದ ದಾರಿದ್ರ್ಯ ಮತ್ತು ಸಂಕಟವನ್ನು ಕಡಿಮೆ ಮಾಡುವ ಪ್ರಾಯೋಗಿಕ ಸಾಧನಗಳನ್ನು ರೂಪಿಸಲು ಎಷ್ಟರ ಮಟ್ಟಿಗೆ ಇಂಡಿಯಾ ಮತ್ತು ಮನುಕುಲಗಳ ಪ್ರೀತಿಕಾರ ಉದ್ಯುಕ್ತನಾಗುತ್ತಾನೆಂಬುದೇ ಈಗಿನ ಏಕಮಾತ್ರ ಪ್ರಶ್ನೆ. ಮಾನವ ಕೌಶಲ ಕಲ್ಪಿಸಿಕೊಳ್ಳಬಹುದಾದ ಯಾವ ನೀರಾವರಿ ಯೋಜನೆಯಾಗಲಿ, ವ್ಯವಸಾಯದ ಮೇಲ್ಪಾಡಾಗಲಿ ಭಾರತದ ಅಪಾರ ಜನಸಂಖ್ಯೆಯ ಸಮಸ್ಯೆಯನ್ನು ನೀಗಲಾರದು ಅಥವಾ ಆಗಾಗ್ಗೆ ನೌಕರಿಯನ್ನು ಕಳೆದುಕೊಳ್ಳುವ ಮಂದಿಗೆ ಉದ್ಯೋಗವನ್ನು ದೊರಕಿಸಲಾರದು. ಸರಾಸರಿ ದಿನಕ್ಕೆ ಐದು ಗಂಟೆ ಮಾತ್ರ

ಕೆಲಸ ಮಾಡುವ ರಾಷ್ಟ್ರವನ್ನು ಊಹಿಸಿಕೊಳ್ಳಿ ಅದೂ ಆಯ್ಕೆಯಿಂದಲ್ಲ, ಸನ್ನಿವೇಶದ ಒತ್ತಡದಿಂದೆಂಬುದನ್ನು ಮರೆಯಲಾಗದು, ಆಗ ನಿಮಗೆ ಇಂಡಿಯಾದ ವಾಸ್ತವ ಚಿತ್ರ ದೊರೆಯುತ್ತದೆ.

ಗಾಂಧಿಯವರ ವಿಶ್ಲೇಷಣೆ ಮತ್ತು ಚರಕದ ಜನಪ್ರಿಯತೆಯ ಅಗತ್ಯ ಅವರ ಜೀವಮಾನ ಕಾಲದಲ್ಲಿಯೇ ಸಹಾನುಭೂತಿ ಗಳಿಸಿತೆಂದು ಹೇಳುವಂತಿಲ್ಲ. ಜಗತ್ತಿನಲ್ಲೆಲ್ಲಾ ಹರಡುತ್ತಿದ್ದ ಯಾಂತ್ರೀಕರಣದ ಪ್ರವೃತ್ತಿಗೆ ವಿರುದ್ಧವಾಗಿ ಹುಡುಗಾಟದ ಚರಕವನ್ನೆತ್ತಿ ಹಿಡಿಯುವುದರ ನಿರರ್ಥಕತೆಯ ಬಗ್ಗೆ ಮೇಲಿಂದ ಮೇಲೆ ಅವರನ್ನು ಪ್ರಸ್ನಿಸುತ್ತಿದ್ದುದುಂಟು. ಇಡೀ ಚಳುವಳಿಯೆ ಪ್ರಗತಿ ವಿರೋಧಿಯೆಂದು, ಜನಶಕ್ತಿ ಮತ್ತು ಹಣದ ಪೋಲೆಂದು ದೂರಲಾಯಿತು. ಗಾಂಧಿ ಟೀಕಾಕಾರರಿಗೆ ಈ ರೀತಿ ಉತ್ತರಿಸಿದರು. : 'ಇಂಡಿಯಾದ ರೈತಾಪಿ ಜನರ ಬಗ್ಗೆ ಟೀಕಾಕಾರರಿಗೆ ಹೆಚ್ಚು ಅನುಭವವಿಲ್ಲವೆಂದು ತೋರುತ್ತದೆ. ಚರಕದ ಕೆಲಸದ ಬಗ್ಗೆ, ಅದು ಈಗ ಹೇಗೆ ಕೆಲಸ ಮಾಡುತ್ತಿದೆ ಎಂಬುದರ ಬಗ್ಗೆ ತಿಳಿದುಕೊಳ್ಳಲು ಅವನಿಗೆ ಸಾಧ್ಯವಾಗಿಲ್ಲ. ರೈತರು ಚರಕದಲ್ಲಿ ಇಡೀ ದಿನ ದುಡಿಯಬೇಕಾಗಿಲ್ಲ. ಬಿಡುವು ವೇಳೆಯಲ್ಲಿ ನೂಲು ತೆಗೆಯುತ್ತಾರೆ. ತಮ್ಮ ಸಂಪಾದನೆಯನ್ನು ಪೂರಕಗೊಳಿಸಲು ಅಥವಾ ಬಿಡುವು ವೇಳೆಯನ್ನು ಬಳಸಿಕೊಳ್ಳಲು ರೈತರಿಗೆ ಉಪಕಸಬೊಂದು ಬೇಕೆಂಬುದು ಇಡೀ ಜಗತ್ತಿನ ಅನುಭವವಾಗಿದೆ.'[೩೫]

ಬೆಳೆಯುತ್ತಿರುವ ಜನಸಂಖ್ಯೆಯ ಎದುರಿನಲ್ಲಿ ಚರಕ ಚಳುವಳಿಯ ಮೂಲಕ ಗ್ರಾಮೀಣ ದಾರಿದ್ರ್ಯದ ಸಮಸ್ಯೆಯ ಪರಿಹಾರ ನಿಷ್ಪ್ರಯೋಜಕವಾದ ಕೆಲಸವೆಂದು ಕೆಲವರು ಬಗೆದದ್ದುಂಟು. 'ಒಂದೇ ಸಮನೆ ಹೆಚುತ್ತಿದ್ದ ಅಪಾರ ಜನಸಂಖ್ಯೆಯುಳ್ಳ ಇಂಡಿಯಾದಲ್ಲಿ ಪ್ರತಿಯೊಬ್ಬನಿಗೂ ಯಾವ ಕಾಲದಲ್ಲಾದರೂ ಮಿತ ಸೌಲಭ್ಯವನ್ನೊದಗಿಸಲಾಗದೆಂಬುದು ನನ್ನ ಕಳವಳವಾಗಿದೆ. ಉತ್ತಮಗೊಂಡ ಶಿಕ್ಷಣ ಮತ್ತು ನಿರ್ಮಲೀಕರಣದಿಂದಾಗಿ ಬದುಕು ದೀರ್ಘವಾಗುತ್ತದೆ, ಸಾವಿನ ಸಂಖ್ಯೆ ಕಡಿಮೆಯಾಗುತ್ತದೆ. ಜನಸಂಖ್ಯೆಯ ದೃಷ್ಟಿಯಿಂದ ಪರಿಸ್ಥಿತಿ ಇನ್ನೂ ಬಿಗಡಾಯಿಸುತ್ತದೆ. ಆದ್ದರಿಂದ ಜನನಿಯಂತ್ರಣದ ಬಗೆಗಿನ ಕ್ರಮಕ್ಕೆ ಪ್ರಥಮ ಆದ್ಯತೆ ನೀಡಬೇಕೆಂದು, ಜನನಿಯಂತ್ರಣವಿಲ್ಲದೆ ಅದು ಸಾಧ್ಯವಾಗದೆಂದು ಹೇಳಿದರೆ ತಾವು ಕ್ಷಮಿಸುತ್ತೀರೆಂದು ನಂಬಿದ್ದೇನೆ' ಎಂದೊಬ್ಬ ವಿಮರ್ಶಕ ಬರೆದನು.

ಕೃತಕ ವಿಧಾನಗಳ ಮೂಲಕ ಸಾಧಿಸುವ ಜನನಿಯಂತ್ರಣದ ಬಗೆಗಿನ ಗಾಂಧೀಜಿಯವರ ಅಭಿಪ್ರಾಯಗಳು ಜಗಜ್ಜಾಹೀರಾಗಿವೆ. 'ಕೆಲವು ಸನ್ನಿವೇಶಗಳಲ್ಲಿ ಕೃತಕವಿಧಾನದ ಜನನ ನಿಯಂತ್ರಣ ನ್ಯಾಯ ಸಮ್ಮತವೆಂದು ಭಾವಿಸುವುದಾದರೂ

೩೫. *Young India,* Aug. 21, 1924.



ಕೋಟ್ಯಂತರ ಜನರಿರುವಾಗ ಈ ವಿಧಾನ ಯಶಸ್ವಿಯಾಗಲಾರದೆಂದು ತೋರುತ್ತದೆ. ಗರ್ಭನಿರೋಧಕಗಳ ನಿಯಂತ್ರಣಕ್ಕಿಂತ ಆತ್ಮಸಂಯಮದ ಮೂಲಕ ನಿಯಂತ್ರಿಸುವಂತೆ ಪ್ರೇರೇಪಣೆ ಮಾಡುವುದು ಸುಲಭವೆಂದು ತೋರುತ್ತದೆ' ಎಂದವರು ಸೂಚಿಸಿದರು. ಜನಸಂಖ್ಯೆ ಪ್ರಶ್ನೆಯ ಬಗೆಗಿನ ಗಾಂಧಿಯವರ ನಿಲವಿನ ಅಯುಕ್ತತೆಯನ್ನು ಬಹಿರಂಗಪಡಿಸಲು ಇಂದಿನ ದಿನಗಳ ಜನಾಂಗೀಯ ಸಮಾಜ ವಿಜ್ಞಾನಿಗೆ ಕಷ್ಟವಾಗಲಾರದು. ಆದರೆ ಜನಸಂಖ್ಯಾ ಏರಿಕೆಯ ಇಳಿಮುಖದ ಎದುರಿನಲ್ಲಿ ಅವರ ಪ್ರಯತ್ನ ಚಿಗಟಕಡಿತದಷ್ಟಾಗುತ್ತದೆಂಬ ಕಾರಣದ ಮೇಲೆ ಹಳ್ಳಿಗಳಿಗೆ ಜೀವ ತುಂಬುವ ಅವರ ಪರಿಹಾರಕಾರ್ಯದ ಬಗ್ಗೆ ಅಪನಂಬಿಕೆ ಸಲ್ಲದು. ಚರಕದ ಮೇಲೆ ತಮ್ಮ ಶ್ರದ್ಧೆಯನ್ನೂರುವ ಗಾಂಧೀಜಿಯ ಪ್ರಯತ್ನವನ್ನು ಮುಂದಿನ ಪರಿವೀಕ್ಷಣೆ ಬೆಂಬಲಿಸುತ್ತದೆ. 'ಕೈಗಾರಿಕೀಕರಣದ ಪ್ರಯತ್ನಗಳಲ್ಲಿ ಕೀಳ್ಮಟ್ಟದ ಬೆಳವಣಿಗೆಯ ದೇಶಗಳ ಜನ ಮಿತಿಮೀರಿದ ಅಧಿಕ ಜನಸಂಖ್ಯೆ ಮತ್ತು ಬಾಲ್ಯಾವಲಂಬನದ ಬಹು ಭಾರಗಳ ಜತೆಗೆ ಹಲವು ಇತರ ಅಡ್ಡಿಗಳನ್ನೆದುರಿಸಬೇಕಾಗುತ್ತದೆ. ತಮ್ಮ ಪರಿಸ್ಥಿತಿಯನ್ನು ಉತ್ತಮಗೊಳಿಸುವ ಯಾವುದೇ ವಿಧಾನಗಳನ್ನು ಅನಭಿವೃದ್ಧಿ ದೇಶಗಳು ನಿರ್ಲಕ್ಷಿಸಲಾಗದೆಂಬ ಭಾವನೆಯನ್ನು ಸಂಕಷ್ಟಗಳ ಅಸ್ತಿತ್ವ ಬೆಂಬಲಿಸುತ್ತದೆ.'[೩೬]

ಚರಕದ ಬಗೆಗಿನ ಗಾಂಧಿಯವರ ವಕಾಲತ್ತನ್ನು ಇತ್ತೀಚೆಗೆ ಟೀಕಿಸುವವರಲ್ಲಿ ಪ್ರೊ. ಸರ್ ಗಾಲ್‌ಬ್ರೈತ್ ಒಬ್ಬರು. ಚರಕದಿಂದ ನೂಲು ತೆಗೆಯುವ ವಿಧಾನವನ್ನುಳಿಸಿಕೊಳ್ಳಬೇಕೆಂಬ ಗಾಂಧೀಜಿಯ ಹಠಕ್ಕಾಗಿ ಅವರು ಮರುಕವನ್ನು ವ್ಯಕ್ತಪಡಿಸಿದರು. 'ಗಾಂಧಿಯವರಿಂದಾಗಿ ಯಂತ್ರದ ನೂಲು ನೇಯ್ಗೆಗಳನ್ನು ತೊರೆಯಬೇಕೆಂಬ ಅಥವಾ ಬಹುವಾಗಿ ಕಡಮೆಮಾಡಬೇಕೆಂಬ ಮತ್ತು ಚರಕ ಹಾಗೂ ಕೈ ಮಗ್ಗಗಳನ್ನು ಪುನಶ್ಚೇತನಗೊಳಿಸಬೇಕೆಂಬ ಬಹುಜನರ ಬೇಡಿಕೆಯನ್ನು ಇಂಡಿಯಾ ಎದುರಿಸಬೇಕಾಗಿದೆ. ಧಾರ್ಮಿಕ ಚಳುವಳಿಯ ಉದಾತ್ತ ಲಕ್ಷಣವನ್ನು ಪಡೆದಿರುವಷ್ಟರ ಮಟ್ಟಿಗೆ ಮನೆಗಿರವನ್ನು ಇದು ಪ್ರತಿಬಿಂಬಿಸುತ್ತದೆ.'[೩೭] ಪ್ರೊಫೆಸರ್ ಗಾಲ್‌ಬ್ರೈತ್‌ರ ಈ ಅಭಿಪ್ರಾಯ ಚಿಂತನ ಯೋಗ್ಯವಾಗಿದೆ. ರಾಟೆ ಮತ್ತು ಕೈ ಮಗ್ಗಗಳನ್ನು ಉತ್ತೇಜಿಸುವ ಸಲುವಾಗಿ, ಬಟ್ಟೆಗಿರಣಿಗಳ ನೂಲು ಮತ್ತು ಬಟ್ಟೆ ತಯಾರಿಕೆಗಳನ್ನು ನಿಯಂತ್ರಿಸಬೇಕೆಂಬ ವಾದವಿದ್ದದ್ದು ನಿಜ. ಶ್ರೀ ವೈಕುಂಠಮೆಹ್ತಾ ಅವರ ಸೂಚನೆಯ ಪ್ರಕಾರ, ಕೈ ನೂಲುಗಾರಿಕೆ ಮತ್ತು ನೇಯ್ಗೆಗಳ ರಕ್ಷಣೆಗೆ ಭಾವಾತ್ಮಕ ಅನುರಾಗ ಕಾರಣವಲ್ಲ. ಅಷ್ಟೇ ಅಲ್ಲ ಗುಡಿಕೈಗಾರಿಕೆಗಳು ರಾಷ್ಟ್ರೀಯ ಯೋಜನೆಯಲ್ಲಿ ಸೇರ್ಪಡೆಗೊಳ್ಳಬೇಕೆಂಬ ನಿರ್ಣಯವನ್ನು ಪ್ರಥಮ ಪಂಚವಾರ್ಷಿಕ

೩೬. *Population Studies,* No. 17, p. 287; Dept. of Social affairs, U.N., New York, 1953.

೩೭. Galbraith, *Liberal Hour,* AICC. Economic Review, Jan 6, 1961.

ಯೋಜನೆಯಲ್ಲಿಯೇ ತೆಗೆದುಕೊಳ್ಳಲಾಯಿತು. ಯಾವುದೇ ರೀತಿಯಿಂದಲೂ ಗುಡಿ ಕೈಗಾರಿಕೆಗಳ ಬಗ್ಗೆ ಭಾವುಕರಲ್ಲದ ಬೊಂಬಾಯಿ ಯೋಜನೆಯ (೧೯೪೪–೪೫) ನಿರ್ಮಾಪಕರು ಗುಡಿ ಕೈಗಾರಿಕೆಗಳ ಮೂಲಕ ಗ್ರಾಹಕರ ವಸ್ತುಗಳ ಉತ್ಪಾದನೆಯನ್ನು ತೀವ್ರಗೊಳಿಸಬೇಕೆಂಬ ನಿಲುವನ್ನು ಬೆಂಬಲಿಸಿದರು.

ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಸರಳವಾದ ರಾಟೆಯನ್ನು ಉತ್ತಮೀಕರಿಸುವ ದಿಶೆಯಲ್ಲಿ ಗಾಂಧೀಜಿ ವಿಮುಖವಾಗಿರಲಿಲ್ಲ. ಅವರ ಜೀವಿತ ಕಾಲದಲ್ಲಿಯೇ ಅದನ್ನು ಉತ್ತಮಪಡಿಸಲು ಪ್ರಯತ್ನ ನಡೆಸಲಾಯಿತೆಂಬುದೇ ಈ ಮಾತಿಗೆ ನಿದರ್ಶನ. ೧೯೨೭ರಲ್ಲಿಯೇ ಗಾಂಧೀಜಿಯವರ ಸೂಚನೆ ಮೇರೆಗೆ, ಸಂಪ್ರದಾಯದ ರಾಟೆಗಿಂತ ಹೆಚ್ಚು ಉತ್ಪಾದಿಸುವ ಮತ್ತು ಉತ್ತಮ ದಾರವನ್ನು ಕೊಡುವ ಹಳ್ಳಿಯ ಬಡಗಿಗಳು ಮತ್ತು ಕಮ್ಮಾರರು ತಯಾರಿಸಬಲ್ಲ ಮತ್ತು ದುರಸ್ತಿಮಾಡಬಲ್ಲ ವಿದ್ಯುಚ್ಛಕ್ತಿಯ ರಾಟೆಯನ್ನು ಕಂಡುಹಿಡಿಯಲು ದೊಡ್ಡ ಮೊತ್ತದ ಹಣದ ಬಹುಮಾನವನ್ನು ಪ್ರಕಟಿಸಲಾಯಿತು. ೧೯೫೦ರಲ್ಲಿ ರಾಟೆಯ ಉತ್ತಮಗೊಂಡ ರೂಪಾಂತರ ಬೆಳಕಿಗೆ ಬಂತು. ಅದನ್ನು ಅಂಬರ್ ಚರಕ ಎಂದು ಕರೆಯಲಾಗಿದೆ. ಎರಡನೆಯ ಯೋಜನಾವಧಿಯಲ್ಲಿ ಹೆಚ್ಚು ಸಮರ್ಥವಾದ ಮತ್ತು ಹುಟ್ಟುವಳಿ ನೀಡುವ ಅಂಬರ್‌ಚರಕವನ್ನು ಬಳಸುವುದರಿಂದ, ಸಾಂಪ್ರದಾಯಿಕ ಚರಕದ ಪ್ರಾಮುಖ್ಯ ಕಡಿಮೆಯಾಗಿ, ಖಾದಿಯ ಮುಂದಿನ ಅಭಿವೃದ್ಧಿಯಲ್ಲಿ ಅಂಬರ್ ಚರಕ ಮಹತ್ವದ ಪಾತ್ರ ವಹಿಸಬಹುದು. ಈ ನಿರೀಕ್ಷೆಗಳು ಪೂರ್ತಿಯಾಗಿ ನೆರವೇರಲಿಲ್ಲ. ಸಾಂಪ್ರದಾಯಿಕ ಚರಕ ಎಂದಿನಂತೆ ನಿರ್ದಿಷ್ಟವಾದ ಪಾತ್ರವನ್ನು ವಹಿಸುತ್ತದೆ. ರಾಟೆಯಂಥ ಸರಳ ಯಂತ್ರವನ್ನು ಉತ್ತಮಪಡಿಸುವ ದಾರಿಯಲ್ಲಿ ಇತಿಮಿತಿಗಳಿವೆಯೆಂಬುದನ್ನು ಕೆಲವು ತಾಂತ್ರಿಕ ಸುಧಾರಣೆಗಳನ್ನು ಪೂರೈಸಿದ ನಂತರ, ಅದು ಗ್ರಾಮೀಣ ಆರ್ಥಿಕತೆಗೆ ಹೊಂದಿಕೊಳ್ಳಲಾರದೆಂಬುದನ್ನು ಇದು ತೋರಿಸುತ್ತದೆ. ಆರ್ಥಿಕ ಪರಿಗಣನೆಯ ದೃಷ್ಟಿಯಿಂದಲೂ ಅಂಬರ್ ಚರಕ ಭಾರಿ ಪ್ರಮಾಣದ ಬಂಡವಾಳವನ್ನು ಪೋಲು ಮಾಡುವ ಭಾಗವಾಗಬಹುದೆಂದು ಹೇಳಲಾಗಿದೆ.

ಗ್ರಾಮೀಣ ಕೈಗಾರಿಕೆಗಳ ಉತ್ಪಾದನೆಗಳನ್ನು ಜನಪ್ರಿಯಗೊಳಿಸಲು ಪರಿಣಾಮಕಾರಿಯಾದ ಕ್ರಮಗಳನ್ನು ಕೈಗೊಳ್ಳದಿದ್ದರೆ, ಗ್ರಾಮೀಣ ಚಳುವಳಿ ಪ್ರಗತಿ ಹೊಂದಲಾರದೆಂದು ಗಾಂಧಿ ಸ್ಪಷ್ಟಪಡಿಸಿದರು. ಸ್ವದೇಶೀ ಭಾವನೆಯನ್ನು ಈ ನಿಟ್ಟಿನಲ್ಲಿ ಜನಪ್ರಿಯಗೊಳಿಸುವುದೇ ಅವರ ಈ ತಂತ್ರದ ಗುಟ್ಟು. ಅವರ ಇತರ ಭಾವನೆಗಳಂತೆ ಸ್ವದೇಶೀ ಪರಿಕಲ್ಪನೆಯ ಅಂತರಾಳದಲ್ಲಿ ಉಚ್ಚ ನೈತಿಕ ಶ್ರದ್ಧೆಯಿತ್ತು. ಅಂತಿಮದ ಮತ್ತು ಅಧ್ಯಾತ್ಮದ ಅರ್ಥದಲ್ಲಿ 'ಸ್ವದೇಶಿ' ಎಂದರೆ ಭೂಮಿಯ ನಿರ್ಬಂಧದಿಂದ ಆತ್ಮನ ಕಟ್ಟಕಡೆಯ ಮುಕ್ತಿ ಎಂದವರು ಹೇಳಿದರು. ಆದರೆ



ಅವರು ಆದರಿಸುತ್ತಿದ್ದ ಆರ್ಥಿಕ ಕಾರ್ಯಕ್ರಮದ ಪರಿಕಲ್ಪನೆಯ ಕಾರ್ಯಸಾಧನೆಗಾಗಿ ನಿಜವಾದ ಸ್ವದೇಶಿ ಆರಾಧಕ ತನ್ನ ಜೀವನ ವಿಧಾನವಾಗಿ ತನ್ನನ್ನು ಸಮರ್ಪಿಸಿಕೊಳ್ಳುತ್ತಾನೆಂಬುದು ಅದರ ಮಥಿತಾರ್ಥ. 'ಸಮಾಜಕ್ಕೆ ಅನ್ವಯಿಸುವಲ್ಲಿ ಸ್ವದೇಶಿ ಸಿದ್ಧಾಂತದ ಅನಿವಾರ್ಯವೂ ಅತಿ ಮುಖ್ಯವೂ ಆದ ಉಪ ಸಿದ್ಧಾಂತವಾಗಿ ನಾನು ಖಾದಿಯನ್ನು ಗುರಿಯಾಗಿಟ್ಟುಕೊಂಡದ್ದುಂಟು. ಎಲ್ಲರೂ ಸುಲಭವಾಗಿ ಗ್ರಹಿಸುವ ಮತ್ತು ಮೆಚ್ಚುವ, ಸುಲಭವಾಗಿ ನಿರ್ವಹಿಸಲು ಹಾಗೂ ಅದೇ ಸಮಯದಲ್ಲಿ ನಮ್ಮ ದೇಶದ ಕೋಟ್ಯಂತರ ಅರೆಹೊಟ್ಟೆಯ ಜನ ಬದುಕಲು, ಆ ಜನಕ್ಕೆ ಇಂದು ಬೇಕಾದ ಸೇವೆ ಯಾವುದು? ಖಾದಿ ಮತ್ತು ರಾಟೆಯ ಸಾರ್ವತ್ರೀಕರಣ ಮಾತ್ರವೇ ಈ ಷರತ್ತುಗಳನ್ನು ಪೂರೈಸುತ್ತದೆಂಬ ಉತ್ತರ ಕೂಡಲೇ ಲಭಿಸಿತು' ಎಂದವರು ವಿಶದಪಡಿಸಿದರು. ಖಾದಿಯ ಉತ್ತೇಜನದ ಅಗತ್ಯವನ್ನವರು ಒತ್ತಿಹೇಳಿದರು. ಅಷ್ಟೇ ಅಲ್ಲ, ಹಳ್ಳಿಗರು ಉತ್ಪಾದಿಸಿದ, ಆದರೆ ಯಂತ್ರಗಳು ಉತ್ಪಾದಿಸಿದ ವಸ್ತುಗಳ ಪೈಪೋಟಿಯಿಂದಾಗಿ ಮಾರಾಟ ಮಾಡಲಾಗದ ಹಲವು ವಸ್ತುಗಳ ಬಿಕರಿಗೆ ಬೇಕಾದ ವ್ಯವಸ್ಥೆಯ ಬಗ್ಗೆಯೂ ಅವರು ಮಾತಾಡಿದರು. 'ನಾವು ಜವಳಿ ಸಕ್ಕರೆ ಮತ್ತು ಅಕ್ಕಿಗಿರಣಿಗಳಿಗೆ ಅನಾವಶ್ಯಕವಾಗಿ ಸಹಾಯ ಮಾಡುವುದಾಗಿ ಒಪ್ಪಿಕೊಳ್ಳಬಹುದು; ಆದರೆ ಆ ನಿಟ್ಟಿನಲ್ಲಿ ಹಳ್ಳಿಯ ರಾಟೆ, ಕೈಮಗ್ಗ ಮತ್ತು ಅವುಗಳು ಉತ್ಪಾದಿಸಿದ ಖಾದಿ, ಕಬ್ಬಿಣ, ಗಾಣ ಮತ್ತು ಅದರ ಉತ್ಪನ್ನಗಳು, ವಿಟಮಿನ್ನು ತುಂಬಿದ ಪುಷ್ಟಿಕರ ಬೆಲ್ಲ, ಕಾಕಂಬಿ ಮತ್ತು ಒನಕೆ ಹಾಗೂ ಅದರ ಉತ್ಪನ್ನ, ತಳಿಸದ ಅಕ್ಕಿ, ಇವನ್ನು ಮುಗಿಸಿಬಿಡುತ್ತೇವೆ. ಆದ್ದರಿಂದ ರಾಟೆ, ಗಾಣ, ಒನಕೆ ಮೊದಲಾದವುಗಳ ಅಸ್ತಿತ್ವವನ್ನುಳಿಸಿಕೊಳ್ಳುವ ಸಾಧ್ಯತೆಯ ಬಗ್ಗೆ ಶೋಧನೆ ನಡೆಸುವುದು; ಉತ್ಪನ್ನಗಳನ್ನು ಜಾಹೀರುಗೊಳಿಸಿ ಅವುಗಳ ಗುಣಗಳನ್ನು ಪತ್ತೆ ಮಾಡುವುದು; ಕೆಲಸಗಾರರ ಸ್ಥಿತಿಗಳನ್ನು ತಿಳಿದುಕೊಂಡು, ವಿದ್ಯುತ್‌ಚಾಲಿತ ಯಂತ್ರಗಳಿಂದಾಗಿ ಕೆಲಸ ಕಳೆದುಕೊಂಡ ಜನರ ಸಂಖ್ಯೆಯನ್ನು ಖಚಿತಪಡಿಸಿಕೊಳ್ಳುವುದು; ಅವುಗಳ ಗ್ರಾಮೀಣ ಗುಣಗಳನ್ನುಳಿಸಿಕೊಂಡು ಅವುಗಳನ್ನು ಉತ್ತಮೀಕರಿಸುವ ವಿಧಾನವನ್ನು ಕಂಡುಹಿಡಿಯುವುದು; ಗಿರಣಿಗಳ ಪೈಪೋಟಿಯನ್ನೆದುರಿಸುವಂತೆ ಅವುಗಳಿಗೆ ಉತ್ತೇಜನ ನೀಡುವುದು; ಇವು ನಮ್ಮ ಕರ್ತವ್ಯಗಳಾಗಬೇಕು.' ಹಳ್ಳಿಗಳಲ್ಲಿ ತಯಾರಾದ ವಸ್ತುಗಳ ಬೇಡಿಕೆ ತಗ್ಗದಂತೆ ನೋಡಿಕೊಳ್ಳಲು ಸ್ವದೇಶೀ ವ್ರತವನ್ನು ಕವಚವನ್ನಾಗಿ ಬಳಸಿಕೊಂಡರು.

* * * *

## ೪. ಹಂಚಿಕೆಯ ಸಮಸ್ಯೆ

ಸಾಂಪ್ರದಾಯಿಕ ಆರ್ಥಿಕ ಸಿದ್ಧಾಂತದಲ್ಲಿ ಚರ್ಚಿತವಾಗುವ ಹಂಚಿಕೆಯ ಸಮಸ್ಯೆಗೆ ಗಾಂಧಿ ಪರಿಕಲ್ಪನೆಯ ಅರ್ಥಶಾಸ್ತ್ರದಲ್ಲಿ ಸ್ಥಾನವಿಲ್ಲ. ಉತ್ಪಾದನೆಯ ವಿವಿಧ ಬಾಬುಗಳಿಗೆ ಸಂಬಂಧಿಸಿದ ಹಂಚಿಕೆಯ ಬಗ್ಗೆ ಗಾಂಧೀಜಿಯವರು ಪೇಚಾಡಲಿಲ್ಲ; ಆದರೆ ಅವರ ಮಾರ್ಗ ವ್ಯಕ್ತೀಕರಣಮುಖಿಯಾಗಿತ್ತು. ತತ್‌ಕ್ಷಣದ ಬಳಕೆಗೆ ಬೇಡವಾದ ಸಾವಮಾನನ್ನು ವಶಪಡಿಸಿಕೊಳ್ಳುವುದಾಗಲಿ ಕೂಡಿಟ್ಟುಕೊಳ್ಳುವುದಾಗಲಿ, ಬೇರೊಬ್ಬರಿಂದ ಕದ್ದುಕೊಂಡಂತಾಗುತ್ತದೆಂದವರು ಭಾವಿಸಿದ್ದರು. ನಿಸರ್ಗಮಾತೆ ದೈನಂದಿನ ಜೀವನಕ್ಕೆ ಬೇಕಾದದ್ದನ್ನು ಸಾಕಷ್ಟು ಉತ್ಪಾದಿಸುವ ದಯಾಮಯಿಯಾಗಿದ್ದಳೆಂದು, ನಮಗೆ ಅಗತ್ಯವಿದ್ದಷ್ಟರಿಂದ ತೃಪ್ತಿ ಹೊಂದುವುದಾದರೆ, ಜಗತ್ತಿನಲ್ಲಿ ಬಡವರೇ ಇರುವುದಿಲ್ಲವೆಂದೂ ಅವರು ಹೇಳುತ್ತಿದ್ದರು. ನಾಳೆಯ ಯೋಚನೆ ಬೇಡ ಎಂಬ ಎಚ್ಚರಿಕೆ ಹೆಚ್ಚು ಕಡಿಮೆ ಪ್ರಪಂಚದ ಎಲ್ಲ ಧಾರ್ಮಿಕ ಗ್ರಂಥಗಳಲ್ಲಿಯೂ ಮಾರ್ದನಿಸುತ್ತದೆಂದವರು ಬರೆದರು. 'ಕ್ರಮಬದ್ಧವಾದ ಸಮಾಜದಲ್ಲಿ ಜೀವನ ಸಂಪಾದನೆ ಜಗತ್ತಿನಲ್ಲಿಯೇ ಪ್ರಾಚೀನತಮವೂ ಸುಲಭವೂ ಆದ ಸಂಗತಿಯಾಗಿದೆ. ನಿಜಕ್ಕೂ ಒಂದು ದೇಶದ ಸುವ್ಯವಸ್ಥೆಯ ಒರೆಗಲ್ಲೆಂದರೆ, ಅದರಲ್ಲಿರುವ ಕೋಟ್ಯಧೀಶ್ವರರ ಸಂಖ್ಯೆಯಲ್ಲ, ಹಸಿದ ಹೊಟ್ಟೆಯ ಬಡವರೇ ಇಲ್ಲದಿರುವುದು. ಭೌತಿಕಾಭಿವೃದ್ಧಿಯೇ ನೈತಿಕ ಪ್ರಗತಿಯೆಂಬ ನಿಯಮವನ್ನು ಸಾರ್ವತ್ರಿಕವಾಗಿ ಅನ್ವಯಿಸುವಂತೆ ಕಾನೂನು ರಚಿಸಬಹುದೆ ಎಂಬ ಹೇಳಿಕೆಯನ್ನು ಪರೀಕ್ಷಿಸಬೇಕಾಗಿದೆ,' ಎಂದವರು ಬರೆದರು. ಸಂಪತ್ತಿನ ಸ್ವಾಧೀನ ನಿಜವಾದ ಬೆಳವಣಿಗೆಗೆ ಅಡ್ಡಿಯಾಗುತ್ತದೆಂಬುದು ಅವರ ಭಾವನೆ. ನೈತಿಕ ಪ್ರಗತಿಯೇ ನಿಜವಾದ ಪ್ರಗತಿಯೆಂಬ ಗಾಂಧಿಯವರ ನಿಲುವು ಅಚಲ. 'ಅರ್ಥಶಾಸ್ತ್ರದ ಸಿದ್ಧಾಂತಗಳನ್ನು ಕುರಿತಂತೆ ಆಧುನಿಕ ಕಾಲದ ಪಠ್ಯಗ್ರಂಥಗಳಿಗಿಂತ ಜಗತ್ತಿನ ಪವಿತ್ರ ಗ್ರಂಥಗಳು ಹೆಚ್ಚು ವಿಶ್ವಸನೀಯವೂ ನಿರಪಾಯಕಾರಿಯೂ ಆದ ಗ್ರಂಥಗಳೆಂದು ಯೋಚಿಸಲು ನಾನು ಹಿಂಜರಿಯಲಾರೆ,' ಎಂದೊಮ್ಮೆ ಅವರು ಹೇಳಿದ್ದುಂಟು.

ಬಡವರ ಬದುಕು ಅಸಹ್ಯವಾಗಿದೆಯೆಂದು, ಕನಿಷ್ಠ ಸೌಲಭ್ಯಗಳೂ ಇಲ್ಲದ ಜನ ನೀತಿ ಬೋಧನೆಗೆ ಮಿಡಿಯುತ್ತಾರೆಂದು ನಿರೀಕ್ಷಿಸುವುದು ಅತಿಯಾಯಿತೆಂದು



ಡಾ. ಅಲ್‌ಫ್ರೆಡ್ ಮಾರ್ಷಲ್ ಸೂಚಿಸಿದಂತೆ, 'ಹಿಂಡುವ ಬಡತನ ನೈತಿಕಾವನತಿಗಿಂತ ಯಾವ ಕಡೆಗಾದರೂ ಒಯ್ಯಬಹುದೆಂದು ಯಾರೂ ಎಂದು ಸೂಚಿಸಲಿಲ್ಲವೆಂಬುದು ಗಾಂಧಿಯ ಅಭಿಪ್ರಾಯವಾಗಿತ್ತು. ಪ್ರತಿಯೊಬ್ಬರಿಗೂ ಬದುಕುವ ಹಕ್ಕಿದೆ. ಆದ್ದರಿಂದ ಆಹಾರವನ್ನು ಪಡೆಯುವ ದಾರಿಯನ್ನು ಕಂಡುಕೊಳ್ಳಲು ಮತ್ತು ಆವಶ್ಯಕತೆಗೆ ತಕ್ಕಂತೆ ಬಟ್ಟೆ ಮತ್ತು ಮನೆಯನ್ನು ಹೊಂದಲು ಸಹ ಅವನಿಗೆ ಹಕ್ಕಿದೆ. ಈ ಸರಳ ವ್ಯವಹಾರಕ್ಕಾಗಿ ಅರ್ಥಶಾಸ್ತ್ರಜ್ಞರಿಂದಾಗಲಿ ಅಥವಾ ಅವರ ಸಿದ್ಧಾಂತಗಳಿಂದಾಗಲಿ ನಮಗೆ ಯಾವ ಸಹಾಯವೂ ಬೇಕಿಲ್ಲ' ಎಂದು ಗಾಂಧಿ ಎಣಿಸಿದರು. ಸೋದರ ಮಾನವರು ಬಡತನದ ನೋವನ್ನನುಭವಿಸುವಾಗ, ಕೆಲವರು ಮಾತ್ರವೇ ಭೋಗದಲ್ಲಿ ಮುಳುಗಿ ತೇಲುವುದಾಗಲಿ, ಹೆಚ್ಚು ಆಸ್ತಿಯನ್ನು ಸಂಪಾದಿಸುವುದಾಗಲಿ ಸರಿಯಲ್ಲವೆಂಬುದು ಅವರ ನಿಶ್ಚಿತಮತ. 'ಈ ಕೋಟ್ಯಂತರ ಜನ ಉತ್ತಮವಾಗಿ ಉಂಡುಡುವ ತನಕ ನನಗಾಗಲಿ, ನಿಮಗಾಗಲಿ ಏನನ್ನೂ ಸಂಗ್ರಹಿಸಿಟ್ಟುಕೊಳ್ಳುವ ಹಕ್ಕಿಲ್ಲ' ಎಂದು ಹೇಳುತ್ತಾ ಸ್ವಸಂತೋಷದ ಬಡತನವನ್ನವರು ಬೋಧಿಸಿದರು. 'ನಾನು ನೀವು ಸರಿಯಾಗಿ ಈ ಸಂದರ್ಭವನ್ನರಿತುಕೊಳ್ಳಬೇಕು, ನಮ್ಮ ಅಗತ್ಯಗಳನ್ನು ಹೊಂದಿಸಿಕೊಳ್ಳಬೇಕು. ಅವರಿಗೆ ಉಣ್ಣಿಸಿ, ಉಡಿಸಿ, ಪೋಷಿಸುವ ಸಲುವಾಗಿ ನಾವು ಸ್ವಯಿಚ್ಛೆಯಿಂದ ಹಸಿದಿರಬೇಕು' ಎಂದವರು ಸ್ಪಷ್ಟಪಡಿಸಿದರು. ಸಮನಾದ ಹಂಚಿಕೆಯ ಆದರ್ಶಗಳನ್ನು ಎಲ್ಲರೂ ಶ್ರದ್ಧೆಯಿಂದ ಪಾಲಿಸಬೇಕೆಂದು ಅವರ ಆಶಯ. ಸತ್ಯನಿಷ್ಠರಾದ ಅವರು 'ಸರ್ವರಿಗೂ ಸಮಪಾಲು' ಎಂಬ ಆದರ್ಶವನ್ನು ಕಾರ್ಯಗತಗೊಳಿಸಲು ಪ್ರಯತ್ನಿಸುತ್ತಾರೆ. 'ನಾವೆಲ್ಲರೂ ಹುಟ್ಟಿನಿಂದ ಸಮಾನರಾಗಿದ್ದೇವೆ. ಆದ್ದರಿಂದ ಸಮಾನಾವಕಾಶದ ಹಕ್ಕು ನಮಗಿದೆ. ಆದರೆ ಎಲ್ಲರ ಶಕ್ತಿ ಸಾಮರ್ಥ್ಯ ಒಂದೇ ಪ್ರಮಾಣದಲ್ಲಿಲ್ಲ. ಪ್ರಕೃತಿ ಸಹಜವಾಗಿಯೇ ಅದು ಸಾಧ್ಯವಿಲ್ಲ. ಬುದ್ಧಿಬಲವುಳ್ಳ ಜನ ಹೆಚ್ಚು ಪಡೆಯುತ್ತಾರೆ; ಅವರು ತಮ್ಮ ಸಾಮರ್ಥ್ಯವನ್ನು ಈ ಉದ್ದೇಶಕ್ಕಾಗಿ ಬಳಸುತ್ತಾರೆ' ಎಂದವರು ಲಿಖಿಸಿದರು. ಬುದ್ಧಿಬಲದಿಂದಾಗಿ ಹೆಚ್ಚು ಸಂಪಾದಿಸಿದ ಜನ ತಮ್ಮ ಶ್ರಮದ ಫಲವನ್ನನುಭವಿಸಲವಕಾಶ ಉಂಟೆ? ಎಂಬ ಪ್ರಶ್ನೆಗೆ ಉತ್ತರ ನೀಡಬೇಕಾಗಿದೆ. ಗಾಂಧೀಜಿ ಮತ್ತೆ ತಮ್ಮ ನೀತಿ ಸೂತ್ರವನ್ನು ಆಧಾರವಾಗಿಟ್ಟುಕೊಂಡು, ಆ ಪ್ರಶ್ನೆಗೆ ಉತ್ತರ ನೀಡಿದರು. 'ಬುದ್ಧಿಬಲ ಇರುವ ಮನುಷ್ಯ ಹೆಚ್ಚು ಸಂಪಾದನೆ ಮಾಡಲವಕಾಶವುಂಟು. ಅವನು ಪ್ರತಿಭೆಯನ್ನು ಬಂಧಿಸುವುದಿಲ್ಲ. ಆದರೆ ಸಂಪಾದನೆ ಮಾಡಬಲ್ಲ ಎಲ್ಲ ಮಕ್ಕಳ ಆದಾಯ ಒಟ್ಟು ಕುಟುಂಬದ ನಿಧಿಗೆ ಸೇರುವಂತೆ, ಬುದ್ಧಿವಂತರ ಸಂಪಾದನೆಯು ಬಹುಭಾಗ ರಾಜ್ಯದ ಕ್ಷೇಮಕ್ಕಾಗಿ ಬಳಸಲ್ಪಡಬೇಕಾಗುತ್ತದೆ. ಅವರು ಧರ್ಮದರ್ಶಿಗಳಂತೆ ತಮ್ಮ ಹೆಚ್ಚಿನ ಗಳಿಕೆಯನ್ನು ಕೂಡಿಡಬೇಕಾಗುತ್ತದೆ.' ಆರ್ಥಿಕ ಸಮಾನತೆಯ ತಮ್ಮ ಪರಿಕಲ್ಪನೆಯನ್ನು ವಿವರಿಸುವಂತೆ

ಯಾರೊ ಕೇಳಿದಾಗ, 'ಪ್ರತಿಯೊಬ್ಬರಿಗೂ ಅವರವರ ಅಗತ್ಯಕ್ಕೆ ತಕ್ಕಂತೆ' ಎಂದು ಆರ್ಥಿಕ ಸಮಾನತೆಯ ಅರ್ಥವನ್ನವರು ವಿವರಿಸುತ್ತಾರೆ. 'ಮಡದಿ ಮತ್ತು ನಾಲ್ಕು ಮಕ್ಕಳುಳ್ಳ ಮನುಷ್ಯನಿಗೆಷ್ಟು ಬೇಕೋ ಅಷ್ಟನ್ನೇ ಒಬ್ಬ ಕೇಳುವುದಾದರೆ, ಅದು ಆರ್ಥಿಕ ಸಮಾನತೆಯ ಉಲ್ಲಂಘನೆಯಾಗುತ್ತದೆ' ಎಂದವರು ಸ್ಪಷ್ಟಪಡಿಸುತ್ತಾರೆ.

ಅವರು ಬಂಡವಾಳದ ಸ್ವರೂಪವನ್ನು ಚರ್ಚಿಸಲಿಲ್ಲ. ಬಂಡವಾಳದ ವಿವಿಧ ರೂಪಗಳು ಅವರಿಗೆ ಗೊತ್ತಿಲ್ಲದಿದ್ದರೂ, ಶ್ರಮವೊಂದೇ ಬಂಡವಾಳವೆಂದು, ಅದಕ್ಕೇ ಹೆಚ್ಚು ಒತ್ತುಕೊಡಬೇಕೆಂದು ಅವರು ಮೇಲಿಂದ ಮೇಲೆ ಹೇಳುತ್ತಿದ್ದರು. 'ನನ್ನ ವ್ಯವಸ್ಥೆಯಲ್ಲಿ ಚಲಾವಣೆಯಲ್ಲಿರುವ ನಾಣ್ಯವೆಂದರೆ ಶ್ರಮವೇ ಹೊರತು, ಲೋಹವಲ್ಲ. ಯಾರು ಶ್ರಮವನ್ನು ಬಳಸುತ್ತಾರೆಯೋ, ಆತನ ಬಳಿ ಆ ನಾಣ್ಯವೂ ಇದೆ, ಸಂಪತ್ತೂ ಇದೆ. ಅವನು ತನ್ನ ಶ್ರಮವನ್ನು ಬಟ್ಟೆಯನ್ನಾಗಿ, ಧಾನ್ಯವನ್ನಾಗಿ ಪರಿವರ್ತಿಸುತ್ತಾನೆ. ತಾನಾಗಿಯೇ ಉತ್ಪಾದಿಸಲಾಗದ ಎಣ್ಣೆ ಬೇಕಾದಾಗ, ಅದನ್ನು ಪಡೆಯಲು ತನ್ನ ಹೆಚ್ಚಿನ ಧಾನ್ಯವನ್ನು ಬಳಸುತ್ತಾನೆ. ಮುಕ್ತವೂ, ನ್ಯಾಯಪರವೂ, ಸಮಾನವೂ ಆದ ಷರತ್ತುಗಳ ಮೇಲೆ ನಡೆಯುವ ವಿನಿಮಯವದು. ಇದು ಪ್ರಾಚೀನ ವಿನಿಮಯ ವ್ಯವಸ್ಥೆಯ ಹಿಮ್ಮರಳಿಕೆಯೆಂದು ನೀವು ಆಕ್ಷೇಪವೆತ್ತಬಹುದು. ಆದರೆ ಅಂತರರಾಷ್ಟ್ರೀಯ ವ್ಯಾಪಾರವೆಲ್ಲವೂ ವಿನಿಮಯ ವ್ಯವಸ್ಥೆಯ ಮೇಲೆ ನಿಂತಿವೆಯಷ್ಟೇ' ಎಂದವರು ತಮ್ಮ ನಿಲುವನ್ನು ಸ್ಪಷ್ಟಪಡಿಸಿದರು.

'ಎಪ್ಪತ್ತು ಲಕ್ಷ ಹಳ್ಳಿಗಳಲ್ಲಿ ಚದುರಿಹೋಗಿರುವ ಹಳ್ಳಿಗರನ್ನು ಪ್ರತಿನಿಧಿಸುವ ಕೋಟ್ಯಂತರ ಜೀವಂತ ಯಂತ್ರಗಳ ವಿರುದ್ಧವಾಗಿ ನಿರ್ಜೀವ ಯಂತ್ರಗಳನ್ನು ಸ್ಪರ್ಧಿಗಳಂತೆ ಬಳಸಬಾರದು' ಎಂದವರು ನುಡಿದರು. ಬಂಡವಾಳದ ವಿವಿಧ ರೂಪಗಳ ಸೂಕ್ಷ್ಮತೆಗಳ ಗೋಜಿಗೆ ಅವರು ಹೋಗುವುದಿಲ್ಲ. ಅವರ ಕಲ್ಪನೆಯ ಹಂಚಿಕೆಗೆ ಶ್ರಮದ ವಿಚಾರವೊಂದೆ ಸಾಕಾಗಿತ್ತು. 'ರೊಟ್ಟಿದುಡಿಮೆ' ಭಾವನೆಯ ಬಗೆಗಿನ ಅವರ ಒಲವೇ ಈ ಮನೋಧರ್ಮಕ್ಕೆ ಕಾರಣವಾಗಿತ್ತು. ದುಡಿಮೆ ಮತ್ತು ಬಂಡವಾಳಗಳ ಬಗ್ಗೆ ಮಾತಾಡಬೇಕಾದ ಸಂದರ್ಭವೊದಗಿದಾಗ, ಬಂಡವಾಳ ಶ್ರೀಮಂತರ ಪ್ರತಿನಿಧಿಯಾದದ್ದರಿಂದ, ಅವರು ದುಡಿಮೆಯನ್ನು ಎತ್ತರದ ಮಟ್ಟದಲ್ಲಿರಿಸಿದರು. ಮಹತ್ತರ ಶಕ್ತಿಯುಳ್ಳ ಶ್ರಮಜೀವಿಗಳು ದಣಿಗೆ ವಿರುದ್ಧವಾದ ಆದರೆ ನ್ಯಾಯವಾದ ತಮ್ಮ ಬೇಡಿಕೆಗಳಿದ್ದಾಗ ತಮ್ಮ ಅಸಹಕಾರದಿಂದ ತಮ್ಮ ಬೇಡಿಕೆಗಳನ್ನೊಪ್ಪಿಕ್ಕೊಳ್ಳುವಂತೆ ಬಲಾತ್ಕರಿಸಬಹುದು. ಬಂಡವಾಳ ಮತ್ತು ದುಡಿಮೆ ಎರಡೂ ಅಗತ್ಯವೆಂದು ಕೆಲವು ಚರ್ಚೆಯ ಸಂದರ್ಭಗಳಲ್ಲಿ ಅವರು ಸೂಚ್ಯವಾಗಿ ತಿಳಿಸುತ್ತಿದ್ದರು. ಆ ಎರಡರ ನಡುವೆ ಸೌಹಾರ್ದ ಸಂಬಂಧವಿರತಕ್ಕದ್ದೆಂಬುದು ಅವರ ಗುರಿಯಾಗಿತ್ತು. ಅವರು ಯಾವಾಗಲೂ ಲಾಭೋದ್ದೇಶವನ್ನು ಖಂಡಿಸುತ್ತಿದ್ದರು.



ಬಂಡವಾಳಗಾರರಿಗೆ ಸಲ್ಲಬೇಕಾದ ಪಾಲಿನ ಬಗ್ಗೆ ಅವರೆಂದೂ ನಿಷ್ಕೃಷ್ಟವಾಗಿ ಚರ್ಚಿಸಿದ್ದಿಲ್ಲ. ಅವರ ವಿವಿಧೋದ್ದೇಶ ನೀತಿಯಲ್ಲಿ ಈ ಸಮಸ್ಯೆಯೂ ಸೇರುತ್ತದೆ. ಸಾಮಾಜಿಕ ಕ್ಷೇಮಕ್ಕಾಗಿ ಸಹಾಯ ಮಾಡಿದವರಿಗೆ ಹಣ ಸಲ್ಲಿಸುವುದರಲ್ಲಿ ಆ ನೀತಿ ಅಡ್ಡಬರುತ್ತಿರಲಿಲ್ಲ. ಆ ಪ್ರಕ್ರಿಯೆಯಲ್ಲಿ ಬಂಡವಾಳ ತೊಡಗಿಸಿದವನು ಹಣವನ್ನು ಶೇಖರಿಸಿದ್ದಾದರೆ ಹೆಚ್ಚಿನ ಹಣವನ್ನವನು ಧರ್ಮದರ್ಶಿಯಾಗಿ ನೋಡಿಕೊಳ್ಳಬೇಕಾಗುತ್ತದೆ. ಅವರ ಎಲ್ಲ ವ್ಯವಹಾರ ಸರಳ ಆರ್ಥಿಕ ವ್ಯವಸ್ಥೆಗೆ ಸಂಬಂಧಿಸಿದ್ದು, ಪರಿಮಿತ ರೀತಿಯದಾದ್ದರಿಂದ, ಉತ್ಪಾದನೆಯಲ್ಲಿ ಬಂಡವಾಳದ ಪಾತ್ರದ ಹಾಗೂ ವಾಣಿಜ್ಯ ಸಾಹಸಗಾರರ ಆವಶ್ಯಕತೆಯ ಬಗ್ಗೆ ಯಾವುದೇ ಪ್ರಗತಿಯನ್ನು ಸಾಧಿಸಲಿಲ್ಲ. ವಿವಿಧ ಮಟ್ಟದ ಕೌಶಲವನ್ನು ಹೊಂದಿರುವ ಜನರ ನಡುವೆ ಅಸಮಾನತೆ ಅನಿವಾರ್ಯವಾದ್ದರಿಂದ ಇಂಥ ಸನ್ನಿವೇಶದ ಬಗ್ಗೆ ಅವರಿಗೆ ಆಕ್ಷೇಪವಿರಲಿಲ್ಲ. ಆದರೆ ಐಶ್ವರ್ಯದ ಕೇಂದ್ರೀಕರಣ ಹಾಗೂ ಅದರಿಂದ ಉಂಟಾಗುವ ಕೇಡುಗಳ ರೂಪದಲ್ಲಿ ಈ ಅಸಮಾನತೆ ನಿರಂತರವಾಗಿ ಉಳಿದುಬಿಡುತ್ತದೆ. ಕೆಲವು ಕಡೆಗಳಲ್ಲಿ ಐಶ್ವರ್ಯ ಸಂಗ್ರಹವಿರುತ್ತದಷ್ಟೆ. ಆದರೆ ಅವುಗಳಿಗೆ ಸಾಮುದಾಯಿಕ ಪ್ರಾಮುಖ್ಯತೆ ಉಂಟು. ಏಕೆಂದರೆ ಐಶ್ವರ್ಯವನ್ನು ಹೊಂದಿರುವ ಈ ಜನ ಸಾಮೂಹಿಕ ಕ್ಷೇಮಕ್ಕಾಗಿ ಅದನ್ನು ಬಳಸುತ್ತಾರೆ. ಅವರು ನ್ಯಾಯವಿಶ್ವಾಸ ಅಥವಾ ಧರ್ಮದರ್ಶಿ ತತ್ತ್ವವನ್ನು ರೂಪಿಸಿದರು. ಖಾಸಗಿ ಒಡೆತನದಿಂದ ಧರ್ಮದರ್ಶಿ ವ್ಯವಸ್ಥೆಗೆ ಹೇಗೆ ಪರಿವರ್ತಿಸುತ್ತೀರೆಂದು ಅವರನ್ನು ಕೇಳಿದಾಗ, ಮಾತಿನ ಪ್ರೇರಣೆಯಿಂದ ಮಾತ್ರವೇ ಅದು ಸಾಧ್ಯವಾಗದೆಂದವರು ನುಡಿದರು. 'ನಾನು ಸಿಂಧುವಾದ ಮಾರ್ಗಗಳನ್ನು ಹಿಡಿಯುತ್ತೇನೆ. ನನ್ನ ಕಾಲದ ಮಹಾಕ್ರಾಂತಿಕಾರಿಯೆಂದು ಕೆಲವರು ನನ್ನನ್ನು ಕರೆದಿದ್ದಾರೆ. ಅದು ತಪ್ಪಿರಬಹುದು. ಆದರೆ ನಾನೊಬ್ಬ ಕ್ರಾಂತಿಕಾರಿ – ಅಹಿಂಸಾತ್ಮಕ ಕ್ರಾಂತಿಕಾರಿ– ಎಂದು ನಂಬಿಕೊಂಡಿದ್ದೇನೆ. ಅಸಹಕಾರವೇ ನನ್ನ ಮಾರ್ಗ. ಸಂಬಂಧಪಟ್ಟ ಜನರ ಇಷ್ಟಾತ್ಮಕ ಅಥವಾ ಬಲಾತ್ಕಾರದ ಸಹಕಾರವಿಲ್ಲದೆ ಯಾರೂ ಐಶ್ವರ್ಯವನ್ನು ಕೂಡಿಡಲಾರರು.'[೩೮]

ಗಾಂಧೀಜಿಯವರು ಪ್ರತಿಪಾದಿಸುವ ಈ ಧರ್ಮದರ್ಶಿ ತತ್ತ್ವ ನವೀನವಾದದ್ದು, ಆರ್ಥಿಕ ಜೀವನದ ವಿವಿಧ ವಲಯಗಳಲ್ಲಿ ಅದನ್ನು ಪ್ರಯೋಗಿಸುವ ಸಾಧ್ಯತೆಗಳಿವೆ. ಅದರ ಪರಿಶೀಲನೆ ಇನ್ನೂ ಅಗತ್ಯವಾಗಿದೆ. ವಂಶಪಾರಂಪರ್ಯ ಆಸ್ತಿಯ ಮೂಲಕವೊ, ವ್ಯಾಪಾರ ಮತ್ತು ಕೈಗಾರಿಕೆಯ ಮೂಲಕವೊ, ಜನ ಐಶ್ವರ್ಯವನ್ನು ಗಳಿಸಿದ್ದಾದರೆ, ಅದು ತಮಗೆ ಸೇರಿದ್ದಲ್ಲವೆಂದು ಅವರು ತಿಳಿಯಬೇಕೆಂದು ಗಾಂಧಿ ಅಭಿಪ್ರಾಯ

೩೮. *Young India,* Nov 26, 1931.

ಹೊಂದಿದ್ದರು. ಗೌರವಯುತವಾದ ಜೀವನಕ್ಕರ್ಹರಾಗಿರುವ ಕೋಟ್ಯಂತರ ಜನರೊಡನೆ ಸಮನಾಗಿ ಬದುಕಲು ಬೇಕಾದ ಶ್ರೀಮಂತಿಕೆಯಷ್ಟಕ್ಕೆ ಮಾತ್ರ ಅವರು ಹಕ್ಕು ಸಾಧಿಸಬಲ್ಲರು. ಜಮೀನ್ದಾರರ ಮತ್ತು ಇತರ ಶ್ರೀಮಂತರ ವಿರುದ್ಧವಾಗಿ ಸಮಾಜವಾದಿಗಳು ತಮ್ಮ ವಾದವನ್ನು ಮಂಡಿಸಿರುವಾಗ ತಾವು ಈ ತತ್ವವನ್ನು ಪ್ರತಿಪಾದಿಸುತ್ತಿರುವುದಾಗಿ ಅವರು ಸ್ಪಷ್ಟಪಡಿಸಿದರು. ಪ್ರತಿಷ್ಠಿತ ವರ್ಗಗಳು ಅಳಿದುಹೋಗಬೇಕೆಂದು ಸಮಾಜವಾದಿ ಹೇಳುತ್ತಾನೆ. ಆದರೆ ಈ ವರ್ಗಗಳನ್ನು ಮುಗಿಸಲು ಬಳಸುವ ಹಿಂಸಾತ್ಮಕ ವಿಧಾನವನ್ನು ಗಾಂಧಿಯವರು ಒಪ್ಪುವುದಿಲ್ಲ. ಈ ಜನ ಒಡೆತನದ ಭಾವನೆಯನ್ನು ದುರಾಶೆಯನ್ನು ತ್ಯಜಿಸಬೇಕೆಂದವರು ವಾದಿಸಿದರು. ದುಡಿಮೆಯಿಂದ ರೊಟ್ಟಿ ಸಂಪಾದಿಸುವವರಿಗೆ ಸಮನಾದ ಮಟ್ಟದಲ್ಲಿ ಅವರಿರಬೇಕು. ಅವರೊಮ್ಮೆ ಹೇಳಿದರು : 'ಬಹುಮಂದಿ ಬಂಡವಾಳಗಾರರು ನನ್ನ ಸ್ನೇಹಿತರಾಗಿದ್ದರೆಂದು, ನನ್ನ ಬಗ್ಗೆ ಅವರಿಗೆ ಯಾವ ಹೆದರಿಕೆಯೂ ಇಲ್ಲವೆಂದು ಹೇಳಲು ನನಗೆ ನಾಚಿಕೆಯಾಗದು. ತುಂಬ ಮುಂದುವರಿದ ಸಮಾಜವಾದಿ ಅಥವಾ ಕಮ್ಯೂನಿಸ್ಟ್‌ರಂತಲ್ಲವಾದರೂ, ಹೆಚ್ಚು ಕಡಿಮೆ ಬಂಡವಾಳಗಾರಿಕೆಯನ್ನು ಮುಗಿಸುವ ನನ್ನ ಬಯಕೆ ಅವರಿಗೆ ಗೊತ್ತಿದೆ. ಆದರೆ ನಮ್ಮ ವಿಧಾನಗಳು ಬೇರೆ, ಭಾಷೆಗಳು ಬೇರೆ. ನನ್ನ ಧರ್ಮದರ್ಶಿ ತತ್ವ ಹಂಗಾಮಿ ಏರ್ಪಾಡೂ ಅಲ್ಲ, ಛದ್ಮವೂ ಅಲ್ಲ. ಎಲ್ಲ ತತ್ವಗಳು ಅಳಿದ ಮೇಲೆಯೂ ಅದು ಬದುಕುತ್ತದೆ. ಅದರ ಹಿಂದುಗಡೆ ತತ್ವಶಾಸ್ತ್ರದ ಮತ್ತು ಧರ್ಮದ ಅನುಮತಿಯಿದೆ. ಬೇರೆ ಯಾವ ತತ್ತ್ವವೂ ಅಹಿಂಸೆಯೊಡನೆ ಹೊಂದಿಕೊಳ್ಳಲಾರದು.' ತಮ್ಮ ತತ್ತ್ವದ ಮಹತ್ವದ ಬಗ್ಗೆ ಎಷ್ಟು ವಿಶ್ವಾಸವಿತ್ತೆಂದರೆ, ಸ್ವಯಿಚ್ಛೆಯಿಂದ ತಮ್ಮ ಐಶ್ವರ್ಯದ ಧರ್ಮದರ್ಶಿಗಳಾಗಿ ಪರಿವರ್ತನೆ ಹೊಂದುವುದು, ಅಥವಾ ವರ್ಗಕಲಹಕ್ಕೆ ಸಿದ್ಧವಾಗುವುದು, ಇವೆರಡರಲ್ಲೊಂದನ್ನು ಇಂದಿನ ಶ್ರೀಮಂತರು ಆರಿಸಿಕೊಳ್ಳಲಾಗುತ್ತದೆಂದವರು ಎಚ್ಚರಿಸಿದರು. ಶ್ರೀಮಂತ ತಾನು ಧರ್ಮದರ್ಶಿಯೆಂದರಿತುಕೊಳ್ಳಲು ಹಾಗೂ ದೃಢನಿಶ್ಚಯ ಮಾಡಲು ಎಷ್ಟು ದಿನ ಕಾಯಬೇಕಾದೀತೆಂದು, ಒಮ್ಮೆ ಗಾಂಧಿಯವರನ್ನು ಕೇಳಲಾಯಿತು. ಅಹಿಂಸೆಯೇ ತಮಗೆ ಪರೀಕ್ಷೆಯೆಂದು ಗಾಂಧಿ ಉತ್ತರಿಸಿದರು. ಕಮ್ಯೂನಿಸ್ಟರು ವಾದಿಸುವಂತೆ, ಐಶ್ವರ್ಯವನ್ನು ತ್ಯಜಿಸಲು ಶ್ರೀಮಂತರ ಮೇಲೆ ಬಲಪ್ರಯೋಗಿಸುವುದನ್ನವರು ಸಹಿಸುವುದಿಲ್ಲ. ಶ್ರೀಮಂತನನ್ನು ತಮ್ಮ ವಿಚಾರಧಾರೆಯ ಕಡೆಗೆ ತಿರುಗಿಸಿಕೊಳ್ಳುವತನಕ ಅವರು ಕಾಯುತ್ತಾರೆ. ಕೋಟ್ಯಂತರ ರೂಪಾಯಿ ಮೊತ್ತವನ್ನು ಸಂಪಾದಿಸುವ ಮಾರ್ಗದ ಶುದ್ಧಿಯನ್ನು ಒತ್ತಾಯಿಸುವುದರ ಬದಲಾಗಿ ಗಾಂಧಿಯವರು ಧರ್ಮದರ್ಶಿ ಸಿದ್ಧಾಂತವನ್ನೇಕೆ ಪ್ರಚಾರ ಮಾಡಬೇಕೆಂದು ಶಂಕರರಾವ್ ದೇವ್ ಒಮ್ಮೆ ಪ್ರಶ್ನೆಯೆತ್ತಿದರು. 'ಮಾರ್ಗಶುದ್ಧಿಯ ಮೇಲೆ ಕಠಿಣವಾಗಿ ಕಣ್ಣಿರಿಸಿದ ಪಕ್ಷದಲ್ಲಿ



ಕೋಟ್ಯಂತರ ರೂಪಾಯಿಯನ್ನು ಸಂಪಾದಿಸಲಾಗದು; ಸಮಾಜಕ್ಕಾಗಿ ಖರ್ಚು ಮಾಡುವ ಬಗೆಗಿನ ಸಮಸ್ಯೆ ಚಿಕ್ಕಪ್ರಮಾಣದ್ದಾಗಿ ತೋರುತ್ತದೆ' ಎಂದು ದೇವ್ ಅಭಿಪ್ರಾಯಪಟ್ಟರು. ಸಾಮಾನ್ಯವಾಗಿ ಶ್ರೀಮಂತರು, ಅವರೆ ಏಕೆ ಬಹುಮಂದಿ, ಹಣಸಂಪಾದಿಸುವ ಮಾರ್ಗದ ಬಗ್ಗೆ ನಿಶ್ಚಿಂತರಾಗಿದ್ದರೆಂಬುದನ್ನು ಗಾಂಧಿ ಒಪ್ಪಿಕೊಳ್ಳುತ್ತಾರೆ. 'ಅಹಿಂಸಾ ವಿಧಾನದ ಪ್ರಯೋಗದಲ್ಲಿ, ವ್ಯಕ್ತಿಯೊಬ್ಬ ಎಂಥ ಭ್ರಷ್ಟನೇ ಆಗಿರಲಿ, ದಯೆಯ ಮತ್ತು ಕೌಶಲದ ಉಪಚಾರದಿಂದ ಅವನನ್ನು ಸುಧಾರಿಸಬಹುದೆಂಬ ಸಾಧ್ಯತೆಯನ್ನು ಎಲ್ಲರೂ ನಂಬಬೇಕು' ಎಂದವರು ಭಾವಿಸಿದರು. ಧರ್ಮದರ್ಶಿತ್ವವನ್ನು ಪ್ರತಿಪಾದಿಸುವುದರ ಬದಲಾಗಿ, ಖಾಸಗಿ ಸ್ವತ್ತಿಗೆ ಪ್ರತಿಯಾಗಿ ಸರ್ಕಾರಿ ಒಡೆತನವನ್ನು ಚಲಾಯಿಸುವುದು ಮೇಲೆಂದು ಗಾಂಧೀಜಿಗೆ ಸೂಚಿಸಲಾಯಿತು. ಆದರವರು ಈ ಅಭಿಪ್ರಾಯವನ್ನಂಗೀಕರಿಸಲಿಲ್ಲ. 'ಸರ್ಕಾರ ಹಿಂಸೆಯ ಮೂಲಕ ಬಂಡವಾಳಶಾಹಿಯನ್ನು ನಿಗ್ರಹಿಸಿದ್ದಾದರೆ, ಮುಂದೆಂದೂ ಅಹಿಂಸಾ ತತ್ವವನ್ನು ಅಭಿವೃದ್ಧಿಗೊಳಿಸಲಾಗದು. ಭಟ್ಟಿ ರೂಪದ, ಅಂದರೆ ಸಾಂದ್ರವಾದ ಹಿಂಸೆಯನ್ನು ಸರ್ಕಾರ ಪ್ರತಿನಿಧಿಸುತ್ತದೆ. ವ್ಯಕ್ತಿಗೆ ಆತ್ಮವುಂಟು. ಆದರೆ ಆತ್ಮಶೂನ್ಯ ಯಂತ್ರ; ತನ್ನ ಅಸ್ತಿತ್ವಕ್ಕೆ ಕಾರಣವಾದ ಹಿಂಸೆಯಿಂದ ಅದನ್ನು ಬೇರ್ಪಡಿಸಲಾಗದು. ಆದ್ದರಿಂದ ನಾನು ಧರ್ಮದರ್ಶಿ ಸಿದ್ಧಾಂತಕ್ಕೆ ಆದ್ಯತೆ ನೀಡುತ್ತೇನೆ' ಎಂದವರು ವಿವರಿಸಿದರು. ಸರ್ಕಾರದ ಕೈಗಳಲ್ಲಿಯ ಅಧಿಕಾರದ ಕೇಂದ್ರೀಕರಣಕ್ಕೆ ಅವರು ವಿರೋಧಿಯಾಗಿದ್ದರು; ಅವರು ಧರ್ಮದರ್ಶಿತ್ವದ ಅರ್ಥವನ್ನು ವಿಸ್ತರಿಸಲು ಸಿದ್ಧವಾಗಿದ್ದರು ; ಏಕೆಂದರೆ, 'ಖಾಸಗಿ ಒಡೆತನದ ಹಿಂಸೆ ಸರ್ಕಾರದ ಹಿಂಸೆಗಿಂತ ಕಡಿಮೆ ಅಪಾಯಕಾರಿಯೆಂದವರು ತಿಳಿದಿದ್ದರು. ಗಾಂಧಿಯವರ ಈ ಪರಿಕಲ್ಪನೆ ಎಲ್ಲ ಕಡೆಯೂ ಅಪಾರ ಆಸಕ್ತಿಯನ್ನು ಕೆರಳಿಸಿತ್ತು ; ಸಾಮಾನ್ಯವಾಗಿ ಆ ವಿಷಯದ ಎಲ್ಲ ಮುಖಗಳು ಚರ್ಚಿತವಾಗಿದ್ದವು. ಕೆಲವರಲ್ಲಿಯೇ ಐಶ್ವರ್ಯ ಕೇಂದ್ರೀಕೃತವಾಗಿರುವ ಈ ಪ್ರಶ್ನೆಯನ್ನು ಬಿಡಿಸಬೇಕು, ತಮಗೆ ಕಂಡ ರೀತಿಯಲ್ಲಿ ಬಹು ಬೇಗ ಬಿಡಿಸಬೇಕೆಂದು ಗಾಂಧಿಯವರು ಯೋಚಿಸಿದ್ದರು. ಇಂದೊ ನಾಳೆಯೊ ಸಿಡಿಯಲಿರುವ ಜನಸಮೂಹದ ಹಿಂಸೆಯಿಂದ ಅಪಾರ ಐಶ್ವರ್ಯದ ಒಡೆಯನನ್ನುಳಿಸುವ ಸಲುವಾಗಿ ಧರ್ಮದರ್ಶಿ ಎಂಬೊಂದು ಆಘಾತ ಪರಿಹಾರಕ ಸಾಧನವನ್ನವರು ಸೃಷ್ಟಿಸಿದರು. 'ಹೆಚ್ಚು ಸಂಪತ್ತುಳ್ಳ ಬಂಡವಾಳಗಾರನ ಸ್ವಯಿಚ್ಛೆಯ ಶರಣಾಗತಿ ಮತ್ತು ಅದರ ಪರಿಣಾಮವಾದ ಸರ್ವರ ಕ್ಷೇಮದ ಸಂಪಾದನೆಯೊಂದು ಕಡೆಯಾದರೆ, ಮತ್ತೊಂದು ಕಡೆ ಸೂಕ್ತ ಸಮಯದಲ್ಲಿ ಶ್ರೀಮಂತ ಜಾಗೃತಗೊಳ್ಳದೆ, ಜಾಗೃತಗೊಂಡ, ಆದರೆ ಅಜ್ಞಾನವಶರಾದ, ಹಸಿವಿನಿಂದ ನರಳುವ ಕೋಟ್ಯಂತರ ಜನ ದೇಶದಲ್ಲಿ ಸಿಡಿಸಿದ ಪ್ರಳಯವನ್ನು, ಅಧಿಕಾರಾರೂಢ ಸರ್ಕಾರದ ಆಯುಧಪಾಣಿ ಸೈನ್ಯ ಸಹ ತಡೆಯದ

ಪರಿಸ್ಥಿತಿ, ಇವೆರಡ ನಡುವೆ ಆಯ್ಕೆಯೇ ಹೊರತು ಬೇರೆ ಪರ್ಯಾಯವಿಲ್ಲ' ಎಂದವರು ಬರೆದರು. ಅಂಥದೇ ಭಾವನೆಯನ್ನು ಥೋರ್‌ಸ್ಟೀನ್ ವೆಬ್ಲೆನ್ ಮುಂದಿನ ವಾಕ್ಯಗಳಲ್ಲಿ ವ್ಯಕ್ತಗೊಳಿಸಿದ್ದಾನೆ: 'ಪಟ್ಟ ಭದ್ರ ಹಿತಾಸಕ್ತಿಗಳ ಮತ್ತು ಸಾಮಾನ್ಯ ಸಮೂಹದ ವಿವಿಧಾಭಿರುಚಿಗಳ ನಡುವಣ ಬಿರುಕು ಮುಂದುವರೆಯುತ್ತಿದೆ. ಹಳೆಯಕಾಲದ ನ್ಯಾಯನೀತಿ ಮತ್ತು ಒಳ್ಳೆಯ ಪ್ರಯೋಗಗಳ ಪೂರ್ವ ಕಲ್ಪನೆಗಳಲ್ಲಿ ಬೇರೂರಿದ ಮನವಿಗಳ ಬಗ್ಗೆ ಸಾಮಾನ್ಯ ಮಾನವ ಉದಾಸೀನನಾಗಿದ್ದಾನೆ ಮಾತ್ರವಲ್ಲ, ದರ್ಪಿಷ್ಠವಾಗಿದ್ದಾನೆ.'[೩೯]

* * * *

೩೯. Veblen : *The Vested Interests and the Common Man,* p. 179.



## ೫. ವೆಚ್ಚ (ಬಳಕೆ)

ಒಂದು ಹಂತದಿಂದಾಚೆಗೆ ಪ್ರಾಪಂಚಿಕ ವಸ್ತುಗಳು ಅಡ್ಡಿಯಾಗುತ್ತವೆ ಎಂದು ಗಾಂಧಿ ನಂಬಿದ್ದರು. ಪ್ರಾಚೀನರ ಹೆಜ್ಜೆ ಹಿಡಿದು, ಸುಖವೊಂದು ಮಾನಸಿಕ ಸ್ಥಿತಿಯೆಂದು ಗಾಂಧಿಯವರು ವಿವರಿಸಿದುದರಿಂದ, ಅವರು ಸುಲಭವಾಗಿ ಅನೇಕ ನಿಷೇಧಗಳನ್ನು ಸೂಚಿಸಬಹುದಿತ್ತು. ಯಾರೂ ಮದ್ಯ, ಮಾಂಸ, ಟೀ, ಕಾಫಿ, ಕೋಕೊ, ಹೊಗೆ ಸೊಪ್ಪು, ಮಸಾಲೆ ಸಂಬಾರಗಳನ್ನು ಬಳಸಬಾರದೆಂದವರು ಬಯಸಿದ್ದರು. ಹೆಚ್ಚುವರಿ ಬಟ್ಟೆಗಳನ್ನು, ರುಮಾಲುಗಳನ್ನು, ಬೂಟು ಮತ್ತು ಆಭರಣಗಳನ್ನು ತ್ಯಜಿಸುವಂತೆ ಜನರಿಗೆ ಕರೆ ನೀಡಿದ್ದರು. ಮೊದಮೊದಲ ವರ್ಷಗಳಲ್ಲಿ ಅವರು ಒಂದು ಶರಟು ಮತ್ತು ರುಮಾಲನ್ನು ಮಾತ್ರ ಧರಿಸುತ್ತಿದ್ದರು. ಕೊನೆ ಕೊನೆಗೆ ಲುಂಗಿಯನ್ನು ಉಡುತ್ತಿದ್ದರು. ಅವರು ನಿಜವಾದ ಭಾರತವನ್ನು ನಾಟಕೀಕರಣಗೊಳಿಸಿದರಲ್ಲದೆ, ಒಳ್ಳೆಯ ಬದುಕಿಗೆ ಆವಶ್ಯಕವಾದ ವೆಚ್ಚದ ಬಗ್ಗೆ ತಮ್ಮ ಸಲಹೆಯನ್ನು ಸ್ವೀಕರಿಸುವಂತೆ ತಮ್ಮ ಉದಾಹರಣೆಯ ಮೂಲಕ ಪ್ರೇರಿಸಿದರು. ತಮಗೆ ಸಾಧ್ಯವಾಗಬಹುದಾದ ರಾಷ್ಟ್ರೀಯ ಕನಿಷ್ಠ ಪ್ರಮಾಣದ ವೆಚ್ಚಕ್ಕಿಂತ ತೀರ ಅತಿಯಾದ ವೆಚ್ಚದಲ್ಲಿ ಅನಭಿವೃದ್ಧಿ ದೇಶಗಳು ತೊಡಗುವ ಪ್ರವೃತ್ತಿ ಇದೀಗ ಕಾಣಿಸಿಕೊಳ್ಳುತ್ತಿದೆ. ಹಲವು ವಿಕಾಸಶೀಲ ದೇಶಗಳಿಗೆ ಸಮುದಾಯದ ಉಳಿಕೆಯನ್ನು ಹೆಚ್ಚಿಸಲು ಕಷ್ಟವಾಗಿರುವಾಗ, ಅಗತ್ಯವೆಚ್ಚದ ಒತ್ತಾಯ ಹೆಚ್ಚು ಮುಖ್ಯವಾಗುತ್ತದೆ. ಡಾ. ವಿ. ಕೆ. ಆರ್. ವಿ. ರಾವ್ ಹೇಳುವಂತೆ 'ದರಿದ್ರ ನಾರಾಯಣನ ಬಗ್ಗೆ ಮಾತಾಡುವ ಗಾಂಧೀಜಿ ನಡುವಿಗೊಂದು ತುಂಡನ್ನುಡುತ್ತಿದ್ದರು. ಮೂರನೆಯ ತರಗತಿಯ ರೈಲಿನಲ್ಲಿ ಪ್ರಯಾಣಮಾಡುತ್ತಿದ್ದರು; ಗುಡಿಸಲುಗಳಲ್ಲಿ ಬದುಕಿ, ಮಲಗುತ್ತಿದ್ದರು. ಅವರದು ಎದ್ದು ಕಾಣುವ ಕಠೋರಸಂಯಮ;[೪೦] ಖರ್ಚಿನ ವಿಷಯದ ಬಗೆಗಿನ ಗಾಂಧಿಯವರ ಗೊತ್ತು ಪಾಡು ತುಂಬ ಕಠಿನವಾದದ್ದೆಂದು ಕೆಲವರು ಶಂಕಿಸುತ್ತಾರೆ; ಆದರೆ ಇಂಥದೊಂದು ಸರಳ ಜೀವನ ಸಾಧ್ಯವಿಲ್ಲದ ಕೋಟ್ಯಂತರ ಜನರನ್ನು ಗಮನದಲ್ಲಿರಿಸಿಕೊಂಡಾಗ, ಇಂಡಿಯಾಕ್ಕೆ ಯೋಗ್ಯವಾದದ್ದು ಇಷ್ಟೇ ವೆಚ್ಚ ಎಂಬುದನ್ನು ಪ್ರತಿಯೊಬ್ಬರೂ ನೆನಪಿನಲ್ಲಿಟ್ಟುಕೊಳ್ಳಬೇಕು. ಕೋಟ್ಯಂತರ ಜನರಿಗೆ ಈ ಕಠಿಣ ಮಿತಿ ಕಡ್ಡಾಯ

೪೦. A I R Talk, Delhi, Sept. 4, 1962

ವೆಚ್ಚದ ಮಟ್ಟದ್ದಾಗಿದೆಯೆಂದು ತುಸು ಹೆಚ್ಚು ಅದೃಷ್ಟವಂತರಾದ ಜನ ಸಹ ಈ ಮಾದರಿಯನ್ನೇ ಅನುಸರಿಸತಕ್ಕದ್ದೆಂದು, ಸ್ವಯಿಚ್ಛೆಯಿಂದ ಈ ವೆಚ್ಚದ ಮಟ್ಟವನ್ನೊಪ್ಪಿಕೊಳ್ಳಬೇಕೆಂದು ಗಾಂಧೀಜಿ ಆಶಿಸಿದರು.

ಇಷ್ಟೆಲ್ಲ ಚರ್ಚೆ ಮತ್ತು ಕಟ್ಟಳೆಗಳ ನಡುವೆಯೂ ಮುಂದೆ ಉದ್ಧರಿಸಿರುವ ಪ್ರೊ. ಗಾಲ್‌ಬ್ರೈತ್‌ನ ವಾದವನ್ನೆ ಕೆಲವರು ಒಪ್ಪುತ್ತಾರೆ : 'ಕ್ರಿಶ್ಚಿಯನ್' ಸನ್ಯಾಸಿ ಧ್ಯಾನ ನಿಮಗ್ನ ಬೌದ್ಧ ಮತ್ತು ಅತ್ಯಂತ ನಿಷ್ಠ ಗಾಂಧಿವಾದಿ ಸಹ ಬೈಸಿಕಲ್, ಸ್ಕೂಟರ್, ಅಥವಾ ರೇಡಿಯೋಗಳ ಮೋಹದಿಂದ ಸಂಪೂರ್ಣವಾಗಿ ಪಾರಾಗಿದ್ದಾರೆಂದು ಹೇಳುವಂತಿಲ್ಲವೆಂಬುದು ನನ್ನ ತಿಳುವಳಿಕೆ.' 'ಖರ್ಚಿನ ಬಾಹ್ಯ ಮಿತವ್ಯಯದ ದೃಷ್ಟಿಯಿಂದ ಗಾಂಧಿಯ ವೆಚ್ಚದ ಮಿತಿಯ ಅರ್ಥ ಪಾಶ್ಚಾತ್ಯರಿಗೆ ಹಿಡಿಸಬಹುದು. ಡಾ. ಕೆನೆತ್ ರಿವೆಟ್ ಹೇಳುವಂತೆ, ಕೆಲವು ಸಾಂಪ್ರದಾಯಿಕ ನಿಯಮಗಳಂತೆ, ಒಬ್ಬ ಪಾಶ್ಚಾತ್ಯ ಕೆಲವು ಸಾಮಾನುಗಳಿಗೆ ಹೆಚ್ಚು ಬೆಲೆಯನ್ನು ತೆರಬೇಕಾಗುತ್ತದೆ. ಅಂದರೆ ಅವನು ರೂಢಿಯಂತೆ ಅನಾವಶ್ಯಕವಾಗಿ ಹೆಚ್ಚು ಹಣವನ್ನು ವ್ಯಯಿಸುತ್ತಾನೆ. ಪಾಶ್ಚಾತ್ಯ ವೆಚ್ಚದ ಬಾಹ್ಯ ಆರ್ಥಿಕ ದುರ್ವ್ಯವಹಾರಗಳಿಂದ ಗಾಂಧಿಯವರ ಸಲಹೆಗಳು ಭಾರತೀಯರನ್ನು ರಕ್ಷಿಸುವುದರಲ್ಲಿ ಸಂದೇಹವಿಲ್ಲ.[೪೧]

* * * *

೪೧. Kenneth Rivett, *Economic Thought of Mahatma Gandhi,* P. 22.



# ೬. ಶ್ರಮಿಕರ ಸಮಸ್ಯೆಗಳು

ಶ್ರಮಿಕರ ಸಮಸ್ಯೆಗಳ ವಲಯದಲ್ಲಿ ಗಾಂಧಿಯವರ ಕೊಡುಗೆ ಅನನ್ಯ. ಪ್ರಾರಂಭದಿಂದ ಕೆಲಸಗಾರರ ಸ್ಥಿತಿಗತಿ, ಕೂಲಿಗಳು ಇವೇ ಮೊದಲಾದವುಗಳಿಗೆ ಸಂಬಂಧಿಸಿದ ವಿವಿಧ ಸಮಸ್ಯೆಗಳಲ್ಲಿ ಅವರು ಮುಳುಗಿದ್ದುದರಿಂದ ಈ ವಲಯಕ್ಕೆ ಅವರು ನೀಡಿರುವ ಕೊಡುಗೆ ಅಮೂಲ್ಯವಾದದ್ದು. ರೈತರ ಸಮಸ್ಯೆಗಳ ಪರಿಹಾರಕ್ಕೆ ಬಳಸಿದ ತಂತ್ರಗಳ ಮೂಲಕ ಈ ವರ್ಗದ ಜನರಿಗೂ ಸಹಾಯ ಮಾಡಬಹುದೆಂದು, ಅದು ತಮ್ಮ ಕರ್ತವ್ಯವೆಂದವರು ಭಾವಿಸುತ್ತಾರೆ. ಅವರ ಪ್ರಯತ್ನ ರಚನಾತ್ಮಕವಾಗಿದ್ದುದು ಮಾತ್ರವಲ್ಲ, ವರ್ಗಕಲಹದಲ್ಲಿ ಮತ್ತು ವಾಣಿಜ್ಯ ಸಂಘಗಳ ಚಳುವಳಿ ರೂಪದ ಪಾತ್ರದಲ್ಲಿ ನಂಬಿಕೆಯಿದ್ದ ಶ್ರಮಿಕರಿಗೆ ಪರಿಚಿತವಾಗಿದ್ದ ಅಡ್ಡಿ ಆತಂಕಗಳನ್ನು ತಪ್ಪಿಸುತ್ತದೆ. 'ನಿಮಗೆ ತಿಳಿದಂತೆ ನಾನೊಬ್ಬ ಶ್ರಮಿಕ. ಜಲಗಾರ, ನೇಕಾರ, ನೂಲಿಗ, ರೈತ, ಎಂದು ಮೊದಲಾಗಿ ನನ್ನನ್ನು ನಾನು ಕರೆದುಕೊಳ್ಳಲು ಹೆಮ್ಮೆಯಾಗುತ್ತದೆ. ಶ್ರಮಿಕವರ್ಗದೊಡನೆ ತಾದಾತ್ಮ್ಯದಿಂದಿರುವುದೇ ಸಂತೋಷದ ವಿಷಯ. ಏಕೆಂದರೆ ಶ್ರಮವಿಲ್ಲದೆ ನಾವೇನೂ ಸಾಧಿಸಲಾರೆವು' ಎಂದವರು ಶ್ರಮಿಕರ ಸಭೆಯಲ್ಲಿ ಒಮ್ಮೆ ಘೋಷಿಸಿದರು. ಅವರು ಅಹಮದಾಬಾದಿನಲ್ಲಿ ಕೆಲವು ಕಾಲ ಶ್ರಮಿಕರ ಸಂಘದ ಪ್ರಮುಖ ಸಲಹೆಗಾರರಾಗಿದ್ದರು. ಶ್ರಮಿಕರ ಮತ್ತು ಬಂಡವಾಳಗಾರರ ನಡುವಣ ಪ್ರಮುಖ ಸಮಸ್ಯೆಗಳನ್ನು ಅಹಿಂಸಾತ್ಮಕವಾಗಿ ಪರಿಹರಿಸಬೇಕೆಂಬುದೇ ಅವರ ಗುರಿಯಾಗಿತ್ತು. 'ಶ್ರಮವಿಲ್ಲದೆ ಬಂಡವಾಳ ಪೂರ್ಣ ನಿಷ್ಪ್ರಯೋಜಕವೆಂಬ ಸಂಗತಿ ಶ್ರಮಿಕರಿಗೆ ಅರಿವಾದರೆ, ಅವರು ತಮ್ಮ ಕರ್ತವ್ಯವನ್ನು ಮಾಡಿಯೇ ಮಾಡುತ್ತಾರೆ' ಎಂದವರು ತಮ್ಮ ಕಾರ್ಮಿಕ ಸ್ನೇಹಿತರಿಗೆ ಬೋಧಿಸುತ್ತಿದ್ದರು. ಶ್ರಮವೇ ನಿಜವಾದ ಬಂಡವಾಳ; ಹಣದ ಬಂಡವಾಳದಂತೆ ಜೀವಂತ ಬಂಡವಾಳ ಮುಗಿದುಹೋಗುವಂಥವಲ್ಲ ಎಂದವರು ನುಡಿದು ಕಾರ್ಮಿಕರನ್ನು ಪ್ರೋತ್ಸಾಹಿಸುತ್ತಿದ್ದರು. ಶ್ರಮಿಕರು ಸಹಜವಾಗಿಯೇ ಬಲವಂತರೆಂಬ ಸೂತ್ರ ಗಾಂಧಿಯವರು ಮಾರ್ಗದರ್ಶಕರಾಗಿದ್ದ ಸಂಘಕ್ಕೆ ಆಧಾರವಾಗಿತ್ತು. ಶ್ರಮಿಕರ ದೋಷಗಳ ವಿಶ್ಲೇಷಣೆಯಲ್ಲಿ ಗಾಂಧೀಜಿ ಸ್ವಂತಿಕೆಯನ್ನು ಮೆರೆದಿದ್ದರು. ಬಂಡವಾಳದ ರೋಗವನ್ನು ಗುಣಪಡಿಸುವುದರ ಬದಲು ಅದನ್ನು ಸ್ವಾಧೀನಪಡಿಸಿಕೊಂಡು, ಬಂಡವಾಳಗಾರನ ಪಾತ್ರವನ್ನು ಅಭಿನಯಿಸಬೇಕೆಂದು ಪ್ರಯತ್ನಿಸಿದುದರಿಂದ

ಕಾರ್ಮಿಕರು ಸೋಲನುಭವಿಸಬೇಕಾಯಿತೆಂದವರು ಸ್ಪಷ್ಟಪಡಿಸಿದರು. ಬಂಡವಾಳದ ಪರವಾದ ಈ ದೌರ್ಬಲ್ಯವನ್ನರಿತ ಬಂಡವಾಳಗಾರ ಕಾರ್ಮಿಕರ ಆಕ್ರಮಣ ಪ್ರವೃತ್ತಿಯನ್ನು ದುರ್ಬಲಗೊಳಿಸುವ ಸಲುವಾಗಿ ಕೆಲವು ಕಾರ್ಮಿಕರನ್ನು ತಮ್ಮ ಹಂಗಿಗೊಳಪಡಿಸಿಕೊಳ್ಳುತ್ತಿದ್ದರೆಂಬುದನ್ನವರು ಎತ್ತಿ ತೋರಿದರು. ಕಾರ್ಮಿಕರ ಸಮಸ್ಯೆಗಳ ಪರಿಹಾರ ಅವರ ಕೈಯಲ್ಲೇ ಇದೆಯೆಂಬ ಭರವಸೆಯನ್ನು ಈ ವಿಶ್ಲೇಷಣೆ ನೀಡಿತಲ್ಲದೆ, ಬಂಡವಾಳದ ಸಮತೋಲನ ಅಥವಾ ದುರ್ಬಲೀಕರಣ ಕಾರ್ಮಿಕರ ಗುರಿಯಾಗಿರಬೇಕೆಂದು ಬೋಧಿಸಿ, ವರ್ಗಕಲಹದ ವ್ಯಾಮೋಹಕ್ಕೆ ತಡೆಯೊಡ್ಡಿತು.

ಬಂಡವಾಳದ ಬಲವನ್ನರಿತನಂತರ, ಬಂಡವಾಳಗಾರರೊಡನೆ ಶ್ರಮಿಕರು ಏಕೆ ಸಹಕರಿಸಬೇಕೆಂಬ ಅವರ ವಿಶ್ಲೇಷಣೆ ಅತ್ಯುತ್ಕೃಷ್ಟವಾದುದು. ಈ ಬಲ ಅಧಿಕಾರದ ಅಹಂಕಾರದಿಂದ ಮೂಡಿದ್ದಲ್ಲ ; ಸ್ವಸ್ಥವಾದ ವಿವೇಕವನ್ನಾಧರಿಸಿದ ಸಹಜ ಬಲದ ಶಾಂತಿಯುತ ವಿಚಾರಣೆಯ ಫಲ. 'ಎಲ್ಲ ತಾರತಮ್ಯಗಳನ್ನು ಸಮ ಮಾಡುವ ಶಕ್ತಿಗಳು ಶ್ರಮಜೀವಿಗಳು. ಈ ಸತ್ಯ ಅವರಿಗರಿವಾಗುವುದಾದರೆ, ಅವರು ಮತ್ತೊಂದು ಹೆಜ್ಜೆ ಮುಂದೆ ಹೋಗಬೇಕೆಂದು ನಾನು ಬಯಸುತ್ತೇನೆ. ಕಾರ್ಮಿಕರು ಅಶಿಕ್ಷಿತರಾಗಿಯೇ ಉಳಿದದ್ದರಿಂದ, ಅವರು ದಾಸರಂತುಳಿದರು, ಇಲ್ಲವೇ ಬಂಡವಾಳಗಾರರ ಸಾಮಾನು ಮತ್ತು ಯಂತ್ರಗಳ ವಿನಾಶಕಾರ್ಯದಲ್ಲಿ ಅಹಂಕಾರದಿಂದ ನಂಬಿಕೆ ಇರಿಸಿದರು. ಚಿನ್ನದ ಮೊಟ್ಟೆಗಳನ್ನಿಡುತ್ತಿದ್ದ ಬಾತುಕೋಳಿಯನ್ನು ಕೊಂದಂತೆ ಇದು ಮಹಾಪರಾಧವಾಗುತ್ತದೆ. ಕಾರ್ಮಿಕರು ತಂತಮ್ಮಲ್ಲಿಯೇ ಸಹಕರಿಸಲು ಕಲಿಯಬೇಕು; ಮತ್ತು ಗೌರವಯುತವಾದ ಸಮಾನತೆಯ ಷರತ್ತಿನ ಮೇಲೆ ಬಂಡವಾಳಗಾರರಿಗೆ ಸಹಾಯಹಸ್ತ ನೀಡಬೇಕು. ಶ್ರಮವನ್ನು ಬಂಡವಾಳ ನಿಯಂತ್ರಿಸುತ್ತದೆ; ಏಕೆಂದರೆ ಅದಕ್ಕೆ ಕೂಟದ ವಿಸ್ತೀರ್ಣದ ಅರಿವಿದೆ'– ಇವು ಗಾಂಧೀಜಿ ಉದ್ಧರಿಸಿದ ಮಾತುಗಳು.

ಕಾರ್ಮಿಕರ ಸಹಜ ಬಲವನ್ನು ಹೆಚ್ಚಿಸಲು ಗಾಂಧೀಜಿ ಒಂದು ಸಲಹೆಯನ್ನು ನೀಡಿದರು. ಕಾರ್ಮಿಕರು ಯಾವುದಾದರೂ ಉಪವೃತ್ತಿಯನ್ನು ಕಲಿಯಬೇಕೆಂದವರು ಸಲಹೆ ಮಾಡಿದರು. ೧೯೧೮ರಲ್ಲಿ ಅಹಮದಾಬಾದಿನ ಗಿರಣಿಯ ಕಾರ್ಮಿಕರು ಮುಷ್ಕರ ಹೂಡಿದಾಗ ಈ ಭಾವನೆ ಗಾಂಧೀಜಿಗೆ ಹೊಳೆಯಿತು. ಮುಷ್ಕರ ಯಶಸ್ವಿಯಾಗಬೇಕಾದರೆ, ಪೂರ್ಣವಾಗಿಯೊ ಪಾರ್ಶ್ವಿಕವಾಗಿಯೊ ತಮ್ಮನ್ನು ಕಾದುಕೊಳ್ಳುವ ಉದ್ಯೋಗವನ್ನು ಕಾರ್ಮಿಕರು ಹಿಡಿದಿರಬೇಕು. ಕಾರ್ಮಿಕರು ಭಿಕ್ಷೆಯನ್ನವಲಂಬಿಸಬಾರದೆಂದವರು ನುಡಿದರು. ಗಾಂಧಿಯವರ ಮಾತಿನಲ್ಲಿಯೇ ಹೇಳುವುದಾದರೆ 'ಬಂಡವಾಳಗಾರನಿಗೆ ಲೋಹವೆಂತೊ, ಅಂತೆಯೇ ವಿವಿಧ ವೃತ್ತಿಗಳ ಕ್ರಿಯಾತ್ಮಕ ಜ್ಞಾನ ಕಾರ್ಮಿಕರಿಗೆ ಬೇಕು. ಶ್ರಮಕೌಶಲವೇ ಕಾರ್ಮಿಕನ ಬಂಡವಾಳ'. ಸಾಬೂನು ಮತ್ತು ಕಾಗದ ತಯಾರಿಕೆ, ಮೊಳೆ ಜೋಡಣೆ ಮತ್ತು ಹೊಲಿಗೆಯಂಥ ಯಾವುದಾದರೂ ವೃತ್ತಿಯನ್ನು ಕಲಿಯಲು ಕಾರ್ಮಿಕರು ಬಿಡುವು ವೇಳೆಯಲ್ಲಿ ಬಳಸಿಕೊಳ್ಳಬೇಕೆಂಬುದು ಅವರ ಯೋಜನೆ. ತಮಗೆ ಸಲ್ಲುವ ಕೂಲಿಗೆ ತಕ್ಕಂತೆ ಪ್ರಾಮಾಣಿಕ ಸೇವೆಯನ್ನು ಸಲ್ಲಿಸಿದಾಗ, ಉದ್ಯೋಗದಲ್ಲಿ ಹಣ ತೊಡಗಿಸಿರುವ ಧನಿಕರಂತೆಯೇ ತಾವೂ ಸಹ ಆ ಉದ್ಯೋಗದ ಭಾಗಶಃ ಪಾಲುದಾರರೆಂದು ಕಾರ್ಮಿಕರು ತಿಳಿಯಬೇಕೆಂಬುದು ಗಾಂಧಿಯವರ ಭಾವನೆ. ಯಂತ್ರೋಪಕರಣಗಳನ್ನು ಮತ್ತು ಕಾರ್ಖಾನೆಯನ್ನು ಕಾರ್ಮಿಕರು ಸರಿಯಾಗಿ ನೋಡಿಕೊಳ್ಳಬೇಕೆಂದು ಗಾಂಧೀಜಿ ಸೂಚಿಸುವಲ್ಲಿ ಅವರು ಭಾಗಶಃ ಪಾಲುಗಾರಿಕೆಯ ನಿಜಾರ್ಥವನ್ನು ಮತ್ತೆ ಒತ್ತಿ ಹೇಳುತ್ತಾರೆ.



ಮುಷ್ಕರದ ಬಗ್ಗೆಯೂ ಅವರು ವಿಸ್ತಾರವಾಗಿ ಚರ್ಚಿಸಿದರು. ಅವರ ಪ್ರಕಾರ, ಧರ್ಮದ ಮೂಲಾಧಾರದಿಂದ ಬದುಕನ್ನು ಬೇರುಮಟ್ಟ ಬೇರ್ಪಡಿಸಿದ್ದುದು ಮತ್ತು ಅದರ ಜಾಗದಲ್ಲಿ ಧನಪಿಶಾಚಿ ಒಳಗಡೆ ನುಗ್ಗಿದ್ದೇ ಮುಷ್ಕರದ ಮೂಲಭೂತ ಕಾರಣ. ಧರ್ಮ ಸಾಮಾನ್ಯ ಜೀವನದ ಅಸ್ತಿಭಾರವಾದರೂ, ಶ್ರಮ ಮತ್ತು ಬಂಡವಾಳದ ನಡುವಣ ಸಂಬಂಧವನ್ನು ಕ್ರಮಗೊಳಿಸುವುದು ಕಷ್ಟವಾಗುತ್ತದೆ. ಆಗ ಮುಷ್ಕರಗಳು ಅನಿವಾರ್ಯವಾಗುತ್ತವೆ ಮತ್ತು ಒಂದು ಕಡೆ ಕಾರ್ಖಾನೆಗಳ ಯಜಮಾನರಿಂದ ಮತ್ತೊಂದು ಕಡೆ ಮುಷ್ಕರಗಾರರಿಂದ ಸ್ವಾರ್ಥಪರ ಕಾರ್ಯ ನಡೆದೇ ನಡೆಯುತ್ತದೆ. ಆದರೆ ಈ ಮುಷ್ಕರಗಳು ಪೂರ್ಣ ಅಹಿಂಸಾತ್ಮಕವಾಗಿರಬೇಕು; ಯಾರನ್ನೂ ನೋಯಿಸಬಾರದು. ರಾಜಕೀಯ ಉದ್ದೇಶಿತವಾದ ಮುಷ್ಕರಗಳನ್ನವರು ಬಲವಾಗಿ ವಿರೋಧಿಸಿದರು; ಕಾರ್ಮಿಕರ ಹಿತಕ್ಕಾಗಿ ಮಾತ್ರವೇ ಮುಷ್ಕರಗಳು ನಡೆಯಬೇಕೆಂದು ಸ್ಪಷ್ಟಪಡಿಸಿದರು. 'ಎಲ್ಲರ ಒಳಿತಿಗಾಗಿ ಕಾರ್ಮಿಕರ ಕೆಲಸ ಮಾಡಲು ಸಿದ್ಧರಾಗುವ ತನಕ ಕಾರ್ಮಿಕರನ್ನು ರಾಜಕೀಯೋದ್ದೇಶಕ್ಕೆ ಬಳಸಿಕೊಳ್ಳುವುದು ತುಂಬ ಅಪಾಯಕಾರಿಯೆಂದು ಅರಿತುಕೊಳ್ಳಲು ಬುದ್ಧಿಯ ಪ್ರಯಾಸಬೇಕಿಲ್ಲ'ವೆಂದವರು ನುಡಿದರು.

ಮುಷ್ಕರಕ್ಕೆ ಸಂಬಂಧಿಸಿದಂತೆ ಅವರು ಕೆಲವು ಷರತ್ತುಗಳನ್ನು ವಿಧಿಸಿದರು: ಅವುಗಳನ್ನಿಲ್ಲಿ ಗುರುತಿಸಬಹುದು. : (೧) ಮುಷ್ಕರದ ಕಾರಣ ನ್ಯಾಯಯುತವಾಗಿರಬೇಕು. (೨) ಮುಷ್ಕರಗಾರರಲ್ಲಿ ಒಗ್ಗಟ್ಟಿರಬೇಕು. ಮುಷ್ಕರದಲ್ಲಿ ಭಾಗಿಗಳಾದವರ ವಿರುದ್ಧವಾಗಿ ಹಿಂಸೆಯನ್ನು ಬಳಸಬಾರದು. (೩) ಮುಷ್ಕರಾವಧಿಯಲ್ಲಿ ಸಂಘದ ನಿಧಿಯನ್ನವಲಂಬಿಸದೆ ಮುಷ್ಕರಗಾರರು ತಮ್ಮ ಬದುಕನ್ನು ತಾವೇ ಸಾಗಿಸುವಂತಿರಬೇಕು; ಉಪಯುಕ್ತವೂ ಲಾಭದಾಯಕವೂ ಆದ ಹಂಗಾಮಿ ಉದ್ಯೋಗದಲ್ಲಿ ತೊಡಗಿಕೊಳ್ಳಬೇಕು. ಮುಖಂಡತ್ವದ ಬಗ್ಗೆ ಕಾರ್ಮಿಕರಲ್ಲಿ ಸರಿಯಾದ ಮಾರ್ಗದರ್ಶನವಿಲ್ಲವೆಂಬುದು ಅವರ ಭಾವನೆ. 'ಎರಡು

ವರ್ಗದ ನಾಯಕರ ನಡುವೆ ನೀವು ವ್ಯತ್ಯಾಸ ಮಾಡಬೇಕಾಗುತ್ತದೆ. ನಿಮ್ಮ ಮಧ್ಯದಲ್ಲಿಯೇ ನಿಮ್ಮ ನಾಯಕರಿದ್ದಾರೆ; ಕಾರ್ಮಿಕರಲ್ಲದವರು, ಆದರೆ ಕಾರ್ಮಿಕರ ಬಗ್ಗೆ ಸಹಾನೂಭೂತಿಯುಳ್ಳವರು ಅವರಿಗೆ ಬುದ್ಧಿವಾದ ಹೇಳುತ್ತಾರೆ ಮತ್ತು ಮಾರ್ಗದರ್ಶನ ನೀಡುತ್ತಾರೆ. ಈ ಮೂವರ ನಡುವೆ ಪೂರ್ತಿ ತಾಳೆ ಇಲ್ಲದಿದ್ದ ಪಕ್ಷದಲ್ಲಿ ಅಪಯಶಸ್ಸು ಖಾತರಿ' ಎಂದವರು ಕಾರ್ಮಿಕರ ಸಭೆಯಲ್ಲಿ ಹೇಳಿದ್ದುಂಟು.

ಸಹಾನುಭೂತಿಯ ಮುಷ್ಕರಗಳಿಗೆ ಅವರು ವಿರೋಧಿ. ತಮ್ಮ ಕೈಯಲ್ಲಿರುವ ಎಲ್ಲ ನ್ಯಾಯಸಮ್ಮತವಾದ ಮಾರ್ಗಗಳನ್ನು ಸಂಬಂಧಪಟ್ಟ ವ್ಯಕ್ತಿಗಳು ಮುಗಿಸಿದ ನಂತರವೇ ಮುಷ್ಕರ ಹೂಡತಕ್ಕದ್ದೆಂದು ಅವರು ಎಚ್ಚರಿಸುತ್ತಾರೆ.

ಅವರು ಕಾರ್ಮಿಕರಿಗೆ ನಡತೆಯ ನಿಯಮಗಳನ್ನು ರಚಿಸಿದರಲ್ಲದೆ, ಶ್ರಮಿಕರ ಸಮಸ್ಯೆಗಳ ಎಲ್ಲ ಮುಖಗಳ ಕಡೆಗೆ ಗಮನ ಹರಿಸಿದರು. ಈ ಕೊಡುಗೆಯ ಜತೆಗೆ ಅವರು ಅಹಮದಾಬಾದಿನಲ್ಲಿ ಕಾರ್ಮಿಕ ನಾಯಕರೂ ಆಗಿದ್ದರು; ತಮ್ಮ ಪಾರುಪತ್ಯೆಯಲ್ಲಿ ಹಲವು ವರ್ಷಗಳ ಕಾಲ ಕಾರ್ಮಿಕ ಸಂಬಂಧಗಳನ್ನು ಸಮರ್ಥವಾಗಿ ರೂಢಿಸಬಲ್ಲವರಾಗಿದ್ದರು.

* * * *



## ೭. ಆಹಾರ ಸಮಸ್ಯೆ

ಕೃಷಿ ಪರಿಸ್ಥಿತಿ ಮತ್ತು ಆಹಾರ ಸಮಸ್ಯೆಗಳ ಬಗ್ಗೆಯೂ ಗಾಂಧೀಜಿ ಯೋಚನಾ ಲಹರಿ ಹರಿಸಿದರು. ಸಾವಯವ ಗೊಬ್ಬರದ ಬಳಕೆ ಮತ್ತು ಜಾನುವಾರು ಅಭಿವೃದ್ಧಿಯ ಮೂಲಕ ಮಣ್ಣಿನ ಫಲವಂತಿಕೆಯನ್ನು ಹೆಚ್ಚಿಸುವಲ್ಲಿ ಗಾಂಧೀಜಿ ಕಾಳಜಿವಹಿಸಿದ್ದರು. ಏಕೆಂದರೆ ವ್ಯವಸಾಯಕ್ಕೆ ಸಂಬಂಧಿಸಿದ ಇತರ ಸಮಸ್ಯೆಗಳು ಕಠಿಣವಾಗಿದ್ದುದರಿಂದ ಸರ್ಕಾರದ ಸಹಾಯವಿಲ್ಲದೆ ಕೂಡಲೇ ಅವುಗಳ ಪರಿಹಾರ ವ್ಯಕ್ತಿಯನ್ನು ಮೀರಿದ್ದಾಗಿತ್ತು. ಕಳೆದ ಯುದ್ಧ ಸಮಯದ ಆಹಾರ ಕೊರತೆ ಮತ್ತು ನಿಯಂತ್ರಣಗಳ ಘೋಷಣೆಗಳ ಫಲವಾಗಿ ಗಾಂಧಿಯವರ ಕಡೆಯಿಂದ ಚರ್ಚೆಗೆ ಆಹ್ವಾನ ನೀಡಿದಂತಾಯಿತು. ನಾವು ಸ್ವಾವಲಂಬಿಗಳಾಗಬೇಕು ಎಂಬ ಚಿಂತನೆ ಗಾಂಧೀಜಿಯವರ ಎಲ್ಲ ಬರಹಗಳಲ್ಲಿಯೂ ಹರಿಯುತ್ತದೆ. 'ನಾವು ಕಲಿಯಬೇಕಾದ ಮೊದಲ ಪಾಠವೆಂದರೆ, ಸ್ವ–ಸಹಾಯ ಮತ್ತು ಆತ್ಮವಿಶ್ವಾಸ. ನಾವು ಈ ಪಾಠವನ್ನು ಜೀರ್ಣಿಸಿಕೊಂಡದ್ದಾದರೆ, ವಿದೇಶಗಳ ಮೇಲಣ ಅನರ್ಥಕಾರಿ ಅವಲಂಬನೆಯಿಂದ ಮತ್ತು ಕೊಟ್ಟ ಕೊನೆಯ ದಿವಾಳಿತನದಿಂದ ಕೂಡಲೇ ನಾವು ನಮ್ಮನ್ನು ಮುಕ್ತಗೊಳಿಸಿಕೊಳ್ಳಬಹುದು. ಈ ಮಾತು ಅಹಂಕಾರದಿಂದ ಬಂದದ್ದಲ್ಲ, ಅದು ವಾಸ್ತವ ಪರಿಸ್ಥಿತಿಯ ಪ್ರತಿಬಿಂಬ. ಆಹಾರ ಪೂರೈಕೆಗಾಗಿ ಹೊರಗಣ ಸಹಾಯವನ್ನವಲಂಬಿಸಲು ನಮ್ಮದು ಸಣ್ಣ ಪ್ರದೇಶವಲ್ಲ' ಎಂದವರು ವಿಶದಪಡಿಸಿದರು. ಜೀವನದ ಈ ಬಹುಮುಖ್ಯ ಅಗತ್ಯಕ್ಕಾಗಿ ಜನ ಸರ್ಕಾರವನ್ನವಲಂಬಿಸಬೇಕಾದ ಗತಿಯನ್ನವರು ಸಹಿಸಲಾರರು. ಯುದ್ಧದಂಥ ತುರ್ತುಪರಿಸ್ಥಿತಿಯ ಕಾಲದಲ್ಲಿ ಆರ್ಥಿಕ ಕ್ರಮ ಭಂಗದ ಪರಿಣಾಮಗಳನ್ನೆದುರಿಸಲು ಸರ್ಕಾರ ಮುಂದಾಗುವುದವರಿಗೆ ಅರ್ಥವಾಗುತ್ತದೆ. ಆದರೆ ಯುದ್ಧಾನಂತರವೂ ನಿಯಂತ್ರಣ ಮತ್ತು ಪಡಿಭತ್ಯಗಳ ಮುಂದುವರಿಕೆ ಖಂಡಿತವಾಗಿಯೂ ಅಪರಾಧವೆಂದವರು ತಿಳಿದಿದ್ದರು. 'ದೂರದೃಷ್ಟಿಯ ವ್ಯವಹಾರವನ್ನು ಸರ್ಕಾರದ ಕೆಲವು ಸದಸ್ಯರಿಂದ ರಾಷ್ಟ್ರವನ್ನು ತುಂಬಿಕೊಂಡಿರುವ ಕೋಟ್ಯಂತರ ಜನರ ಹೆಗಲಿಗೆ ತಟಾಯಿಸುವುದೇ ನಿಯಂತ್ರಣದ ಅರ್ಥ' ಎಂದವರು ವಿವರಿಸಿದರು.

* * * *

# ೮. ಸರ್ವೋದಯ

ತಮ್ಮ ಓದು ತುಂಬ ಮಿತವಲಯಕ್ಕೆ ಸೀಮಿತವಾಗಿತ್ತೆಂದು, ಆದರೆ ಅದರಿಂದ ಒಳ್ಳೆಯ ಪರಿಣಾಮವಾಯಿತೆಂದು ಗಾಂಧೀಜಿ ಹೇಳುತ್ತಿದ್ದರು. ತಾವು ಓದಿದ್ದನ್ನೆಲ್ಲ ಪೂರ್ತಿ ಅರಗಿಸಿಕೊಳ್ಳಬಲ್ಲವರಾಗಿದ್ದರು. ಅವುಗಳ ಪೈಕಿ, ನನ್ನ ಜೀವನದಲ್ಲಿ ತತ್‌ಕ್ಷಣದ ಕ್ರಿಯಾತ್ಮಕ ಪರಿವರ್ತನೆಯನ್ನುಂಟುಮಾಡಿದ ಗ್ರಂಥವೆಂದರೆ 'ಅಂತ್ಯೋದಯ' (Unto this Last)' ಎಂದು ಅವರೇ ಹೇಳಿದ್ದಿದೆ. ಹೇಗೆ ಎಲ್ಲರ ಒಳಿತಿನಲ್ಲಿ ವ್ಯಕ್ತಿಯ ಒಳಿತೂ ಸೇರಿದೆ ಎಂಬುದನ್ನು ಈ ಗ್ರಂಥದಿಂದವರು ಅರ್ಥ ಮಾಡಿಕೊಂಡರು. ಹೆಚ್ಚು ಜನರಿಗೆ ಹೆಚ್ಚು ಒಳಿತನ್ನು ಮಾಡಬೇಕೆಂಬ ಪ್ರಯೋಜನಾತ್ಮಕ ಸೂತ್ರವನ್ನು ಅಹಿಂಸೆಯ ಆರಾಧಕರು ಒಪ್ಪಲಾರರು. ಅವರು ಸರ್ವರ ಪರಮಾವಧಿಯ ಒಳಿತಿಗಾಗಿ ಪ್ರಯತ್ನಿಸುತ್ತಾರೆ; ಆ ಆದರ್ಶ ಸಾಧನೆಯಲ್ಲಿ ಸಾಯಲೂ ಸಿದ್ಧರಾಗಿರುತ್ತಾರೆ. ಅವರ ದೃಷ್ಟಿಯಲ್ಲಿ ಸರ್ವರ ಪರಮಾವಧಿಯ ಒಳಿತಿನಲ್ಲಿ ಬಹು ಸಂಖ್ಯೆಯ ಒಳಿತು ಸೇರುವುದರಿಂದ, ಗಾಂಧೀಜಿ ಪ್ರಯೋಜನವಾದಿಗಳಲ್ಲಿ ಹಲವು ಸಾಮಾನ್ಯ ಸಂಗತಿಗಳನ್ನು ಕಾಣುತ್ತಾರೆ. ಆದರೆ ಗಾಂಧಿವಾದಿ ಸರ್ವರ ಒಳಿತಿಗಾಗಿ ಕೆಲಸ ಮಾಡುವುದರಿಂದ, ಕೆಲವು ಸಮಯದ ನಂತರ ಅವರು ಬೇರೆಯಾಗುತ್ತಾರೆ. ಬಹುಸಂಖ್ಯೆಯ ಪರಮಾವಧಿ ಕ್ಷೇಮವನ್ನೊಳಗೊಂಡ ಪಾಶ್ಚಾತ್ಯ ಭಾವನೆಯಲ್ಲಿ ಅಲ್ಪಸಂಖ್ಯಾತ ಮತ್ತು ಬಹುಸಂಖ್ಯಾತರ ಸಮಸ್ಯೆಗಳ ಬೀಜಗಳಿವೆಯೆಂದು ಹೇಳಲಾಗಿದೆ. ಮನುಷ್ಯ ಮನುಷ್ಯರ ನಡುವಣ ಅಥವಾ ಜನರ ಪರಸ್ಪರ ಹಿತಸಂಬಂಧಗಳ ಸಂಘರ್ಷಕ್ಕಾಗಿ ಮಾನವ ಸಮಾಜ ಸೃಷ್ಟಿಯಾಗಿರಲಾರದು. ವೈಯಕ್ತಿಕ ಅನುಭವಗಳಿಂದಾಗಿ ಜನರ ನಡುವೆ ಮತ ಭೇದಗಳಿರಬಹುದು; ಆದರೆ ಆಲೋಚನೆ ಮತ್ತು ಕ್ರಿಯೆಗಳಲ್ಲಿ ಸಂಪೂರ್ಣ ಸಾಮರಸ್ಯವಿರಬೇಕು. ಆದರೆ ದುರ್ದೈವದಿಂದ ಆಚರಣೆಯಲ್ಲಿ ಜನರ ಬದುಕೆಷ್ಟು ಹೊಂದಾಣಿಕೆಯ ಹಳಿತಪ್ಪಿದೆಯೆಂದರೆ, ವ್ಯಕ್ತಿ ವ್ಯಕ್ತಿಗಳ ನಡುವೆ ಹಿತಾಸಕ್ತಿಗಳ ಸಂಘರ್ಷ ಇದ್ದೇ ಇದೆ. ನಾವು ಐಶ್ವರ್ಯಕ್ಕೆ ಮತ್ತು ಇತರ ಪದಾರ್ಥಗಳಿಗೆ ಎಷ್ಟು ಬೆಲೆ ಕೊಟ್ಟಿದ್ದೇವೆಂದರೆ, ಇತರರ ಅಗತ್ಯಗಳನ್ನು ಕಡೆಗಣಿಸಿ ಅವನ್ನು ಸ್ವಾಧೀನಪಡಿಸಿಕೊಳ್ಳುತ್ತೇವೆಂದು ಗಾಂಧಿ ತೋರಿಸಿದರು.

ಸರ್ವೋದಯ ತತ್ವದ ಜನಹಿತ ಅರ್ಥಶಾಸ್ತ್ರಕ್ಕೆ ಗಾಂಧಿಮಾರ್ಗವೆಂದು



ಹೇಳಬಹುದು. ಇದರ ಪ್ರಕಾರ, ವೈಯಕ್ತಿಕ ಕ್ಷೇಮದ ಅಥವಾ ಸಾಮಾಜಿಕ ಕ್ಷೇಮದ ಅಥವಾ ಕ್ಷೇಮಾಭಿವೃದ್ಧಿಯ ಪರಮಾವಧಿ ಸಮಸ್ಯೆಯ ಬಗೆಗೆ ನಾವು ತೊಂದರೆ ತೆಗೆದುಕೊಳ್ಳಬೇಕಾಗಿಲ್ಲ. ಪ್ರೊಫೆಸರ್ ಪಿಗೌನ ಅನುಯಾಯಿಗಳಾದ ಅರ್ಥಶಾಸ್ತ್ರಜ್ಞರು ಆರ್ಥಿಕ ಕ್ಷೇಮವನ್ನು ಸಾರ್ವತ್ರಿಕ ಕ್ಷೇಮದ ಭಾಗವೆಂದು ಗಣಿಸುತ್ತಾರೆ. 'ಆರ್ಥಿಕ ಕ್ಷೇಮ ಎಲ್ಲರ ಕ್ಷೇಮದೊಡನೆ ಹೊಂದಿಕೊಳ್ಳುತ್ತದೆಂದು ಅಥವಾ ಸರ್ಕಾರ ನಿರ್ದಯೆಯಿಂದ ಸ್ವಾತಂತ್ರ್ಯವನ್ನು ಸಹ ಲೆಕ್ಕಿಸದೆ, ಕುಟುಂಬದ ಸೌಕರ್ಯಗಳನ್ನು ಆಧ್ಯಾತ್ಮಿಕ ಅಗತ್ಯ ಮುಂತಾದವುಗಳನ್ನು ಮುಂದುವರಿಸಿಕೊಂಡು ಹೋಗಬೇಕಾಗುತ್ತದೆಂದು ಯಾರೂ ಭಾವಿಸುವುದಿಲ್ಲ'[೪೨] ಆಧುನಿಕ ಅರ್ಥಶಾಸ್ತ್ರಜ್ಞರು ಜನಹಿತ ಅರ್ಥಶಾಸ್ತ್ರದ ಬಗ್ಗೆ ನಡೆಸುವ ಚರ್ಚೆಯಂತಲ್ಲದೆ ಇತರರ ಅಗತ್ಯಗಳನ್ನು ಅಡ್ಡಿಪಡಿಸುವ ಯಾವುದೇ ಕ್ರಿಯಾಮಾರ್ಗವನ್ನು ವ್ಯಕ್ತಿ ತೊರೆಯಬೇಕಾಗಿರುವುದರಿಂದ, ಕ್ಷೇಮಪರಾಕಾಷ್ಠೆಯ ಸಮಸ್ಯೆ ಗಾಂಧಿವ್ಯವಸ್ಥೆಯಲ್ಲಿ ಏಳುವುದಿಲ್ಲ. 'ಇತರರ ಅಗತ್ಯಗಳ ಬಗ್ಗೆ ಕಾತರವಿರಲಿ, ಇತರರಿಗೆ ತೊಂದರೆಯಾಗುವ ರೀತಿಯಲ್ಲಿ ನಿನ್ನ ಅಗತ್ಯಗಳ ಬಗ್ಗೆ ಲಕ್ಷ್ಯ ಹರಿಸಬೇಡ' ಎಂಬುದು ವಿನೋಬ ಅವರ ಅಭಿಮತ. ಗಾಂಧಿ ಪರಿಕಲ್ಪನೆಯ ಸರ್ವೋದಯ ಸಿದ್ಧಾಂತದ ಪ್ರಕಾರ ವೈಯಕ್ತಿಕ ಕ್ಷೇಮ ಸರ್ವಕ್ಷೇಮದ ನಿಯಮಕ್ಕೆ ಒಳಪಟ್ಟಿರುವುದರಿಂದ, ಜನಹಿತ ಅರ್ಥಶಾಸ್ತ್ರಜ್ಞರು ಸ್ವೀಕರಿಸಿರುವ ಮಾರ್ಗಕ್ಕಿಂತ ಗಾಂಧಿಮಾರ್ಗ ಉತ್ತಮವೆಂದು ತೋರುತ್ತದೆ. ಏಕೆಂದರೆ ಪರಮಾವಧಿಯ ಹಿತ ಅರ್ಥಶಾಸ್ತ್ರಜ್ಞರ ಗುರಿ; ಈ ಗುರಿ ಯಾವಾಗ ಸರ್ವಹಿತದೊಡನೆ ಹೊಂದಿಕೊಳ್ಳುತ್ತದೆ; ಅಂದರೆ ಯಾವಾಗ ಅದು ಕೇವಲ ಪರಾಕಾಷ್ಠೆಯನ್ನು ತಲುಪುತ್ತದೆಂಬುದರ ಬಗ್ಗೆ ನಮಗೆ ಖಾತರಿಯಿಲ್ಲ. ಪಾಶ್ಚಾತ್ಯ ಅರ್ಥಶಾಸ್ತ್ರಜ್ಞರು ಅಭಿವೃದ್ಧಿಪಡಿಸಿರುವ ಜನಹಿತ ಕಲ್ಪನೆಯೊಡನೆ ಹೋಲಿಸಿದಾಗ, ಗಾಂಧಿಕಲ್ಪನೆಯ ಜನಹಿತ ಅತ್ಯಂತ ಉತ್ಕೃಷ್ಟವಾದ್ದರಿಂದ ಈ ವಿಷಯವನ್ನು ಹೆಚ್ಚು ಎಳೆಯಬೇಕಾಗಿಲ್ಲ.

ಕೆಲವರಿಗೆ ಸರ್ವೋದಯ ಪ್ರಜಾಸಮಾಜವಾದದಂತೆ ತೋರುತ್ತದೆ. ಸರ್ಕಾರದ ಅಧಿಕಾರವನ್ನು ಬಳಸಿ, ಸಮಾಜವಾದವನ್ನು ಬಳಸುವುದರ ಬದಲು ಜನರ ಸ್ವಪ್ರೇರಿತ ಪ್ರಯತ್ನದ ಮೂಲಕ ಸಮಾಜವಾದೀ ಜೀವನದ ರೂಪಗಳನ್ನು ಸೃಷ್ಟಿಸಿ, ಅಭಿವೃದ್ಧಿಪಡಿಸಬೇಕಾದ್ದೇ ಈ ಹೊತ್ತಿನ ಪರಿಹಾರವೆಂಬುದು ಜಯಪ್ರಕಾಶ ನಾರಾಯಣರ ಚಿಂತನೆಯಾಗಿದೆ. ಪ್ರಜಾ ಸಮಾಜವಾದದ ಸ್ಥಾಪನೆಯೇ ಅವರ ಚಿಂತನೆಯ ಮಥಿತಾರ್ಥ. ಸರ್ಕಾರಿಯೇತರ ಸಮಾಜವಾದದ ರೂಪಗಳಿಗೆ ಗಮನ ಹರಿಸಬೇಕೆಂದು ಸೂಚಿಸಲಾಗಿದೆ. ಜಗತ್ತಿನ ಸುವ್ಯವಸ್ಥೆಗೆ ಸರ್ವೋದಯ

---

೪೨. A.C. Pigou, *Some Aspects of Welfare Economics,* American Eco. Review, June 1951.

ನೆರವಾಗಬಹುದೆಂದು ಭವಿಷ್ಯ ನುಡಿಯಲಾಗಿದೆ. ವಿನೋಬಾಜಿಯವರ ನಾಯಕತ್ವದ ಚಳುವಳಿಯಲ್ಲಿ ಈ ತತ್ವದ ಪ್ರಯೋಗವನ್ನು ಕಾಣಬಹುದು. ಧರ್ಮದರ್ಶಿತ್ವದ ಭಾವನೆಯ ಕ್ರಿಯಾರೂಪವೇ ಈ ಚಳುವಳಿ.

* * * *



# ೯. ಗಾಂಧೀಜಿ ಅರ್ಥಶಾಸ್ತ್ರ : ಸಮೀಕ್ಷೆ ಮತ್ತು ಮೌಲ್ಯ ನಿರ್ಣಯ

ನಮ್ಮ ಚರ್ಚೆಯ ಉದ್ದೇಶಕ್ಕಾಗಿ ಈ ವಿಷಯಕ್ಕೆ ಗಾಂಧಿಯಾನ ಅರ್ಥಶಾಸ್ತ್ರವೆಂದು ನಾಮಕರಣ ಮಾಡಿದ್ದರೂ ಆರ್ಥಿಕ ಸಮಸ್ಯೆಗಳ ಗಣನೆಯಲ್ಲಿ ಗಾಂಧೀಜಿ ಪ್ರಯೋಗಾರ್ಹವಾದ ಪ್ರತ್ಯೇಕ ಕವಳಿಗೆಯ ನಿಯಮಗಳನ್ನಾಗಲಿ, ಮಾದರಿಗಳನ್ನಾಗಲಿ ಪ್ರತಿಪಾದಿಸಲಿಲ್ಲ. ವಾಸ್ತವವಾಗಿ ಅವರು ಅರ್ಥಶಾಸ್ತ್ರವೆಂಬ ವಿಷಯದ ಅಸ್ತಿತ್ವವನ್ನೆ ನಿರಾಕರಿಸಿದರು. ರಾಜಕೀಯ ಪ್ರಶ್ನೆಯಾಗಲಿ, ಆರ್ಥಿಕ ವಿಷಯಗಳಾಗಲಿ, ಅವರ ವಿವೇಚನೆಯಲ್ಲಿ ಅಪಸರಣವಿರಲಿಲ್ಲ, ಏಕ ರೂಪವಿತ್ತು. ಗಾಂಧಿಯವರ ರಾಜಕೀಯ ಒಲವಿನಲ್ಲಾಗಲಿ, ಪಾಶ್ಚಾತ್ಯ ನಾಗರಿಕತೆಯ ಅವರ ನಿರಾಕರಣೆಯಲ್ಲಾಗಲಿ ವಿಪರ್ಯಾಸವಿದೆಯೆಂಬ ಪ್ರೊ. ಟಾಯನ್‌ಬಿಯ ಅಭಿಪ್ರಾಯಗಳನ್ನು ಈ ಮೊದಲೇ ವಿವೇಚಿಸುವ ಅವಕಾಶ ನಮಗಿತ್ತು. ಮೂಲಭೂತ ತತ್ತ್ವಗಳಾದ ಅಹಿಂಸೆ ಮತ್ತು ಸತ್ಯಗಳಿಂದ ಗಾಂಧೀ ಮಾರ್ಗ ಹೊರಹೊಮ್ಮಿರಲಾಗಿ ವಿಪರ್ಯಾಸವಿರಲಿಲ್ಲವೆಂದು ಸ್ಪಷ್ಟಪಡಿಸಲಾಯಿತು. ಅಸತ್ಯ ಮತ್ತು ಹಿಂಸೆಗಳಿಂದ ಗಾಂಧೀಯ ಅರ್ಥಶಾಸ್ತ್ರ ಶುದ್ಧೀಕರಣಗೊಳ್ಳಬೇಕು. ಬರಿಯ ಸಿದ್ಧಾಂತದಲ್ಲಿ ಅವರಿಗೆ ಆಸಕ್ತಿಯಿರಲಿಲ್ಲ. ರಾಜಕೀಯ ಸಮಸ್ಯೆಯನ್ನಾಗಲಿ ಆರ್ಥಿಕ ಸಮಸ್ಯೆಯನ್ನಾಗಲಿ ವಿಶ್ಲೇಷಣೆ ಮಾಡಿದಾಗ, ಅವಳಿ ತತ್ತ್ವಗಳಾದ ಅಹಿಂಸೆ ಮತ್ತು ಸತ್ಯಗಳ ದೃಷ್ಟಿಯಿಂದ ಅವರದನ್ನು ಪರಿಶೀಲಿಸುತ್ತಿದ್ದರು. ಭಾರತೀಯರ ಅದೃಷ್ಟವನ್ನು (ಸ್ಥಿತಿ) ಉತ್ತಮಗೊಳಿಸುವುದೆ ಅವರ ಪ್ರಮುಖೋದ್ದೇಶವಾಗಿತ್ತು. ಅವರನ್ನು ಅರ್ಥಶಾಸ್ತ್ರದ ಕ್ಷೇತ್ರದಲ್ಲಿ ಯಶಸ್ವಿಯಾದ ಆನ್ವಯಿಕ ಅರ್ಥಶಾಸ್ತ್ರಜ್ಞರೆಂದೇ ಪರಿಗಣಿಸಬಹುದು. ಅವರ ನೀತಿ ತತ್‌ಕ್ಷಣದ ಪ್ರಾಯೋಗಿಕ ಸಾಧ್ಯತೆಯನ್ನು ಹೊಂದಿತ್ತು. ಕಾರ್ಯಕ್ರಮವನ್ನು ನಡೆಸಬಹುದಾದ ಸಂಸ್ಥೆಯ ಅಥವಾ ಸಂಪನ್ಮೂಲಗಳ ಕೊರತೆಯಿಂದಾಗಿ ಅದನ್ನು ಮುಳುಗಿಸಲಾಗದು. ಅರ್ಥಶಾಸ್ತ್ರದ ವಸ್ತು ವಿಷಯಗಳನ್ನು ನಿರೂಪಿಸುವ ಗೋಜಿಗೆ ಅವರು ಹೋಗಲಿಲ್ಲ. ೧೯೧೬ರಲ್ಲಿ ಅಲಹಾಬಾದಿನ ಮಾಯಿರ್ ಕಾಲೇಜಿನಲ್ಲಿ, ಅರ್ಥಶಾಸ್ತ್ರದ ಬಗೆಗಿನ ತಮ್ಮ ಅಜ್ಞಾನ ಗಾಢವಾದದ್ದೆಂಬ ಆರೋಪವನ್ನು ಅಂಗೀಕರಿಸುತ್ತ, ಸಮಸ್ಯೆಯ ಯಥಾರ್ಥತೆಯನ್ನು ಕಂಡುಕೊಳ್ಳಲು

ಅಂತರ್ಜ್ಞಾನ ತಮ್ಮ ಸಹಾಯಕ್ಕಿದೆಯೆಂದವರು ಸ್ಪಷ್ಟಪಡಿಸಿದರು. 'ಯೇಸು ಮಹಾ ಅರ್ಥಶಾಸ್ತ್ರಜ್ಞ, ನಾವು ಸಾಕಷ್ಟು ಆರ್ಥಿಕ ಜ್ಞಾನವನ್ನು ನಮ್ಮ ಪ್ರಾಚೀನ ಗ್ರಂಥಗಳಿಂದ ಸಂಗ್ರಹಿಸಬಹುದು,' ಎಂದು ಹೇಳಲು ಅದೇ ದೃಷ್ಟಿ ಅವರಿಗೆ ಪ್ರೇರಣೆಯಾಗುತ್ತದೆ. ಅರ್ಥಶಾಸ್ತ್ರ ವಿಷಯದ ಬಗ್ಗೆ ಅವರು ಉದಾಹರಣೆಗಳನ್ನು ಉದ್ಧರಿಸಲಿಲ್ಲವಾದರೆ, ಅವರಿಗೆ ರಕ್ಷಣೆ ಅನಾವಶ್ಯಕ. ಇಂದಿನ ಕೆಲವು ಅರ್ಥಶಾಸ್ತ್ರಜ್ಞರು ಸಾಕಷ್ಟು ಹೃದಯ ಶೋಧನೆ ನಡೆಸಿದ ನಂತರ ಅದೇ ಅಭಿಪ್ರಾಯಕ್ಕೆ ಬರುತ್ತಾರೆ. ಪ್ರೊ. ಬೌಲ್ಡಿಂಗ್‌ರ ಅಭಿಪ್ರಾಯವನ್ನಿಲ್ಲಿ ಉದ್ಧರಿಸಬಹುದಾಗಿದೆ : ಅರ್ಥಶಾಸ್ತ್ರವೆಂಬ ಪ್ರತ್ಯೇಕ ಶಾಖೆ ಇಲ್ಲವೆಂದು ಹೇಳಿದ್ದಾದರೆ, ವೃತ್ತಿಗಾರ ತಾತ್ತ್ವಿಕನಿಗೆ ತಳಮಳವುಂಟಾಗುತ್ತದೆ. ಆದರೂ ಸಮಾಜದ ಸಮಸ್ಯೆಗಳಿಗೆ ಅನ್ವಯಿಸಬಹುದಾದ ಸಮಾಜ ವಿಜ್ಞಾನ ಒಂದೇ ಒಂದೆಂದು ನಾನು ನಿಧಾನವಾಗಿ ಆ ತೀರ್ಮಾನಕ್ಕೆ ಬರುತ್ತಿದ್ದೇನೆ.[೪೩] ಈ ಸಂದರ್ಭದಲ್ಲಿ ಕಾಮ್ಟೆಯ ಅಭಿಪ್ರಾಯಗಳು ನೆನಪಿಗೆ ಬರುತ್ತವೆ: ಸಮಾಜದಲ್ಲಿ ಮನುಷ್ಯನ ಸಾಧನೆಯ ಲಾಭದಾಯಕ ಅಧ್ಯಯನದ ಹರವು ಇಡೀ ಸಮಾಜವಿಜ್ಞಾನದೊಂದಿಗೆ ಸಮವ್ಯಾಪ್ತಿಯುಳ್ಳದ್ದಾಗಿರಬೇಕು ಎಂದವನು ಹೇಳಿದ್ದುಂಟು. ಗಾಂಧಿಮಾರ್ಗದ ಮಟ್ಟಿಗೆ, ಸಮಾಜ ವಿಜ್ಞಾನಗಳ ಭೌತಿಕ ಮತ್ತು ನೈತಿಕ ಕ್ಷೇತ್ರಗಳೆರಡರಲ್ಲಿಯೂ ಮನುಷ್ಯನ ಚರ್ಯೆಯನ್ನು ಸಮಗ್ರವಾಗಿ ಗ್ರಹಿಸುವುದೇ ಗಾಂಧಿಯವರ ನಿಲವು.

ದೇಶ ಎದುರಿಸುತ್ತಿರುವ ಆರ್ಥಿಕ ಸಮಸ್ಯೆಯನ್ನು ಬಿಡಿಸುವ ಪ್ರಯತ್ನದಲ್ಲಿ ಗಾಂಧೀಜಿಯ ಪಾತ್ರಕ್ಕೆ ಬೆಲೆ ಕಟ್ಟುವ ಮುನ್ನ, ಗಾಂಧೀಜಿ ಈ ಕ್ಷೇತ್ರವನ್ನು ಪ್ರವೇಶಿಸಿದಾಗ ಭಾರತದಲ್ಲಿದ್ದ ಪರಿಸ್ಥಿತಿಯನ್ನು ಕುರಿತು ಸಂಕ್ಷಿಪ್ತವಾಗಿ ಗಮನಿಸಬೇಕಾಗಿದೆ. ಇಂಡಿಯಾ ಆ ಸಮಯದಲ್ಲಿ ವಿದೇಶೀಯರ ಆಳ್ವಿಕೆಗೊಳಪಟ್ಟಿತ್ತು. ಅದರ ಬಹುಸಂಖ್ಯೆಯ ಪ್ರಜೆಗಳು ಹಳ್ಳಿಗಳಲ್ಲಿ ವಾಸಿಸುತ್ತಿದ್ದರು. ಅವರು ತಮ್ಮ ಸರಳ ಜೀವನವನ್ನು ದಟ್ಟ ದಾರಿದ್ರ್ಯಕ್ಕೆ ವಿಧಿಯಿಲ್ಲದೆ ಒತ್ತಾಯದಿಂದ ಬದಲಾಯಿಸಿಕೊಳ್ಳಬೇಕಾಯಿತು. ಗಾಂಧಿಯವರು ಬಡತನದ ಸಮಸ್ಯೆಯನ್ನು ಮಾತ್ರವೇ ಪರಿಹರಿಸಲು ಯತ್ನಿಸುತ್ತಿರಲಿಲ್ಲ. ಅವರು ಅವಳಿ ಕಾರ್ಯಕ್ರಮಗಳನ್ನು ಕೈಗೊಂಡಿದ್ದರು; ಒಂದು ಕಡೆ ಬ್ರಿಟಿಷರು ಇಂಡಿಯಾ ತ್ಯಜಿಸುವಂತೆ ಏರ್ಪಾಡು ಮಾಡಬೇಕಾಗಿತ್ತು : ಅದು ರಾಜಕೀಯ ಕಾರ್ಯಕ್ರಮವಾಗಿತ್ತು. ಮತ್ತೊಂದು ಕಡೆ, ಹಳ್ಳಿಗಳಲ್ಲಿ ಕೀಳುಮಟ್ಟದ ಜೀವನವನ್ನು ನಡೆಸುತ್ತಿದ್ದ ಜನರಿಗೆ ಭರವಸೆಯನ್ನು ತಂದುಕೊಡಬೇಕಾಗಿತ್ತು ; ಇದು ಆರ್ಥಿಕ ಕಾರ್ಯಕ್ರಮವಾಗಿತ್ತು. ಈ ಬಗ್ಗೆ ಅವರು ಜನರ ಬಲವನ್ನವಲಂಬಿಸಿಕೊಂಡಿದ್ದರು. ಆರ್ಥಿಕ ಕ್ಷೇತ್ರದ ಗಾಂಧಿಯವರ ಕಾರ್ಯಕ್ರಮವನ್ನು ಇಂಡಿಯಾದಲ್ಲಿದ್ದ ಬ್ರಿಟಿಷ್ ಸರ್ಕಾರ ಸಂದೇಹದಿಂದ ಕಾಣುತ್ತಿತ್ತು. ಏಕೆಂದರೆ

೪೩. K.E. Boulding, *A Reconstruction of Economics,* p. vii.



ಇಂಡಿಯಾದಲ್ಲಿದ್ದ ಹಳ್ಳಿಗಳ ಕಾರಣವನ್ನೆತ್ತಿಕೊಂಡದ್ದು ವಿನಾಶ ಕಾರ್ಯಕ್ಕೆ ಜಾಣತನದ ಉಪಾಯ ಎಂದವರು ಯೋಚಿಸಿದರು. ಒಂದಲ್ಲ ಅನೇಕ ಸಲ ಗಾಂಧಿಯವರು ಈ ತಪ್ಪಭಿಪ್ರಾಯವನ್ನು ತಿದ್ದಿದರು. ವಿದೇಶೀಯ ಆಳ್ವಿಕೆ ಕೊನೆಗೊಂಡ ನಂತರ ದೇಶದ ಬಡತನವನ್ನು ನಿವಾರಿಸಬಹುದೆಂದವರು ತಿಳಿದಿದ್ದರೂ, ಈ ಸಮಸ್ಯೆ ಅಲ್ಲಿಯವರೆಗೆ ಕಾಯಕೂಡದು, ತಡಮಾಡದೆ ಅದಕ್ಕೊಂದು ಪರಿಹಾರವನ್ನು ಕಂಡುಹಿಡಿಯಬೇಕೆಂದವರು ಭಾವಿಸಿದರು. ಇಂಡಿಯಾದ ಹಳ್ಳಿಗಳ ಪುನರುಜ್ಜೀವನಕ್ಕೆ ಸಂಬಂಧಿಸಿದ ತಮ್ಮ ಚಳುವಳಿ ಜನರಲ್ಲಿ ಭವಿಷ್ಯದ ಭರವಸೆಯನ್ನು ಮೂಡಿಸುವ ಸಮಯದಲ್ಲಿಯೇ ಅದು ರಾಜಕೀಯ ಮುಕ್ತಿಗೂ ಅನುವು ಮಾಡಿಕೊಡಬೇಕೆಂಬುದು ಅವರ ಎಣಿಕೆಯಾಗಿತ್ತು. ತಮ್ಮಲ್ಲಿಯೇ ಬಡರೈತರಿಗೆ ವಿಶ್ವಾಸವುಂಟುಮಾಡಬೇಕೆಂಬುದು ಅವರ ಮಹತ್ವದ ಕೊಡುಗೆಯಾಗಿತ್ತು. ಭಾರತೀಯ ಲೆನಿನ್ ಒಬ್ಬ ಕರುಣಾಸ್ಪದರಾದ ರೈತರನ್ನೆಬ್ಬಿಸಿ, ಕ್ರಾಂತಿಗೆ ಪ್ರಚೋದಿಸಬಹುದಾದ ಸಂದರ್ಭದಲ್ಲಿ, ಗಾಂಧಿ ರೈತರಿಗೆ ಭರವಸೆಯನ್ನು ನೀಡಿ, ಮೌನಕ್ರಾಂತಿಯಲ್ಲಿ ಭಾಗವಹಿಸುವಂತೆ ಅಣಿಗೊಳಿಸಿದರು. ಈ ಸನ್ನಿವೇಶದಲ್ಲಿ ನಾವು ಗಾಂಧಿಯವರ ಗ್ರಾಮೀಣ ಕಾರ್ಯಕ್ರಮದ ಪ್ರಾಮುಖ್ಯತೆವನ್ನು ಅರ್ಥ ಮಾಡಿಕೊಳ್ಳಬಲ್ಲೆವು. 'ಬುದ್ಧೀಕರಿಸಿದ ವಾಮಪಂಥದ ಸಾಕ್ಷೀ ಪ್ರಜ್ಞೆಗೆ ಸುತ್ತಲೂ ಅನಕ್ಷರತೆ, ಸಂಕಟ ಮತ್ತು ಹತಾಶೆ ಮಾತ್ರವಲ್ಲದೆ, ಬೇರೇನೂ ಕಾಣಿಸದು; ಮತ್ತು ಪಂಚವಾರ್ಷಿಕ ಯೋಜನೆಗಳ ನೀಲಿನಕ್ಷೆಯ ಮೂಲಕ ಇವುಗಳನ್ನು ನಿವಾರಿಸಬಹುದೆಂದು ನಂಬುತ್ತದೆಯೆಂದು ಒಂದು ಅಭಿಪ್ರಾಯ ಸೂಚಿಸಿದರೆ; ಚಾಲ್ತಿಯಲ್ಲಿರುವ ಮಾದರಿಗಳನ್ನು ನಾಶಮಾಡದೆ, ಅವುಗಳನ್ನುಳಿಸಿಕೊಂಡು, ಉತ್ತಮಗೊಳಿಸುವ ಮೂಲಕ ಅಭಿವೃದ್ಧಿಯ ಮಾರ್ಗಗಳನ್ನು ಸೂಚಿಸಿ, ಭರವಸೆಯ ಸಂದೇಶಗಳನ್ನು ಗಾಂಧೀಜಿ ತಂದರೆಂದು ಮತ್ತೊಂದು ಅಭಿಪ್ರಾಯ ತಿಳಿಸುತ್ತದೆ.[೪೪]

ಕಡಿಮೆ ವೆಚ್ಚದ ದರ್ಜೆಯ ದೇಶಕ್ಕೆ ದಾರಿಯನ್ನು ಸವೆಸುತ್ತ, ಯಂತ್ರಗಳ ಬಳಕೆಯನ್ನು ನಿರಾಕರಿಸುತ್ತ ಗಾಂಧೀಜಿ ಹಿಂಗಣ್ಣಾಗಿದ್ದಾರೆಂದು ಆರೋಪ ಮಾಡಲಾಗಿತ್ತು. ದೇಶವನ್ನು ಹಿಂದು ಹಿಂದಕ್ಕೊಯ್ಯುವ ಆರೋಪವನ್ನವರು ಅಲ್ಲಗಳೆದರು. ಪುನಶ್ಚೇತನದ ಆರೋಪವನ್ನು ಸಹ ಅವರು ತಿರಸ್ಕರಿಸಿದರು. 'ಗಾಂಧೀತತ್ತ್ವ ಪುನಶ್ಚೇತನಕ್ಕಿಂತ ತುಸು ಮೇಲಿತ್ತು. ಹಳೆಯ ಚೌಕಟ್ಟಿನೊಳಗೆ ಅಸ್ಪೃಶ್ಯತೆಯಂಥ ಕೇಡುಗಳನ್ನು ವಿರೋಧಿಸುವ ಕ್ಷೇತ್ರಗಳಲ್ಲಿ ಅದು ಲಾಭದಾಯಕವಾದ ಕೆಲಸವನ್ನು ಮಾಡಿತು. ಆದರೆ ನೂತನ ಭೌತಿಕ ಆರ್ಥಿಕ ಗುರಿಗಳ ಮತ್ತು ಯಾಂತ್ರಿಕ ತಂತ್ರ ಕೌಶಲಗಳ ನಡುವೆ ರಾಜಿ ಮಾಡಿಕೊಳ್ಳುವ ಪ್ರಮುಖ ಸಮಸ್ಯೆಗಳನ್ನೆದುರಿಸಲು

೪೪. Ramaswarup, *Gandhism and Communism,* p. 11.

ಅದು ಪ್ರಯತ್ನ ನಡೆಸಲಿಲ್ಲ. ಆದ್ದರಿಂದ, ವ್ಯಾಪಾರೀ ಮತ್ತು ಬಂಡವಾಳಷಾಹಿ ವರ್ಗಗಳೊಡನೆ ಪ್ರಭಾವಶಾಲಿಯಾಗಿದ್ದರೂ ಅದು ಅವರ ಆರ್ಥಿಕ ವ್ಯವಹಾರಗಳಲ್ಲಿ ನೈತಿಕ ಸಂಯಮವನ್ನು ಪ್ರೇರಿಸಲಿಲ್ಲ ; ಅಷ್ಟೇ ಅಲ್ಲ, ಇಂದಿನ ಪ್ರಪಂಚದಲ್ಲಿ ಅತ್ಯಂತ ಕೊಳ್ಳೆಯ ಸ್ವಭಾವದ ಜನರ ಮಧ್ಯಕ್ಕವರನ್ನು ನೂಕಿತ್ತು, ಗಾಂಧೀ ತತ್ತ್ವ ಸೋತಿತ್ತು. ಯಾಂತ್ರಿಕ ತಂತ್ರ ಕೌಶಲವನ್ನು ಸ್ವೀಕರಿಸಬೇಕಾದ ಅಗತ್ಯವನ್ನು ನಿಷ್ಕಪಟವಾಗಿ ಒಪ್ಪಿಕೊಳ್ಳಲಿಲ್ಲವಾದ್ದರಿಂದ ಅದು ಸೋಲನ್ನನುಭವಿಸಬೇಕಾಯಿತು.[೪೫] ಯಂತ್ರೋಪಕರಣದ ಬಗೆಗಿನ ಗಾಂಧಿಯವರ ಅನುಚಿತ ಖಂಡನೆ (ಪ್ರೊ. ಡೆಲಿಸ್ಲಿ ಬರ್ನ್ಸ್ ಅವರ ಹೇಳಿಕೆ) ಮೂಲಭೂತ ಪ್ರಮಾದವೆಂದು ಮೇಲಣ ಅಭಿಪ್ರಾಯದ ಮತ್ತೊಂದು ಪ್ರಭೇದ ತಿಳಿಸುತ್ತದೆ. ದುರುಪಯೋಗ ಮಾಡಿಕೊಳ್ಳಬಹುದಾದ ಯಾವುದೇ ಆಯುಧವಾದರೂ ನೈತಿಕ ತಪ್ಪೆಂದು ನಾವು ತಿಳಿಯಬೇಕೆಂಬುದು ಅದರ ಅಂತರಾರ್ಥ. ಆದರೆ ರಾಟೆಯೂ ಸಹ ಒಂದು ಯಂತ್ರ. ಮೂಗಿನ ಮೇಲಿನ ಕನ್ನಡಕವೂ ಯಂತ್ರರಚನೆಯೇ ಆಗಿದೆ. ಈ ಆಕ್ಷೇಪಕ್ಕೆ ಗಾಂಧಿವಾದಿ ರಿಚರ್ಡ್ ಬಿ. ಗ್ರೆಗ್‌ನ ಲೇಖನಿಯಿಂದ ಹೊರಬಿದ್ದ ಮುಂದಿನ ಸಾಲುಗಳು ಉತ್ತರ ನೀಡುತ್ತವೆ; 'ಗಾಂಧಿಯವರ ಸೂಚನೆ ಯಂತ್ರೋಪಕರಣವನ್ನಾಗಲಿ, ವಿಜ್ಞಾನವನ್ನಾಗಲಿ ತಿರಸ್ಕರಿಸುವುದಿಲ್ಲ. ಈಗ ಬಳಕೆಯಾಗದ ನಿರುದ್ಯೋಗಿಗಳ ಮಾನುಷ ಶಕ್ತಿಯ ನಿಧಿಗೆ ಅದು ಸರಳ ಯಂತ್ರೋಪಕರಣವನ್ನು ಪ್ರವೇಶಗೊಳಿಸುತ್ತದೆ. ಅದು ವಿಶಿಷ್ಟ ಯಂತ್ರಗಳನ್ನು ಆರಿಸಿಕೊಳ್ಳುತ್ತದೆ; ಏಕೆಂದರೆ ಅವನ್ನು ಜನಸಾಮಾನ್ಯರ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳಿಗೆ ತಕ್ಕಂತ ಅಳವಡಿಸಿಕೊಳ್ಳಲಾಗಿದೆ; ಅಷ್ಟೇ ಅಲ್ಲ, ಕಷ್ಟಗಳು ಮೊದಲೇ ಅಪಾರವಾಗಿರುವಾಗ, ವಿಶಿಷ್ಟ ಮಾದರಿಯ ಯಂತ್ರೋಪಕರಣಗಳ ಬಳಕೆ ಅಧಿಕತರವಾದ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಸೃಷ್ಟಿಸುವುದಿಲ್ಲ.'[೪೬] ಆಲ್ಡಸ್ ಹಕ್ಸ್ಲೆ ಸೂಚಿಸಿದ ತೃಪ್ತಿಕರವಾದ ಮಧ್ಯಮ ಮಾರ್ಗದ ಪರವಾಗಿ ಗಾಂಧಿ ಸಹ ಪ್ರಚಾರ ಮಾಡುತ್ತಿದ್ದರು. 'ಅತಿ ಯಾಂತ್ರಿಕ ಕಾರ್ಯಕ್ಷಮತೆ ಸ್ವಾತಂತ್ರ್ಯದ ಶತ್ರು; ಅದು ಅನಮ್ಯತೆಯ ಮತ್ತು ಸಹಜತೆಯ ನಷ್ಟದ ಕಡೆಗೊಯ್ಯುತ್ತದೆ. ಅಲ್ಪ ಸಾಮರ್ಥ್ಯ ಸಹ ಸ್ವಾತಂತ್ರ್ಯದ ಶತ್ರು : ಏಕೆಂದರೆ ಅದು ಶಾಶ್ವತ ದಾರಿದ್ರ್ಯ ಮತ್ತು ಅರಾಜಕತೆಯಲ್ಲಿ ಪರಿಣಾಮ ಹೊಂದುತ್ತದೆ. ಈ ಎರಡು ಅತಿಗಳ ನಡುವೆ ತೃಪ್ತಿಕರವಾದ ಮಧ್ಯಮ ಮಾರ್ಗವೊಂದಿದೆ. ಅದರಿಂದಾಗಿ ನಾವು ಹೆಚ್ಚಿಲ್ಲದ ಸಾಮಾಜಿಕ ಮತ್ತು ಮನೋ ವೈಜ್ಞಾನಿಕ ಬೆಲೆಯನ್ನು ತೆತ್ತು, ಆಧುನಿಕ ಯಂತ್ರ ಕೌಶಲದ ಎಲ್ಲ ಪ್ರಮುಖ ಪ್ರಯೋಜನಗಳನ್ನು ಪಡೆಯಬಹುದು'[೪೭] ಎಂದವನು ನಿರೂಪಿಸಿದನು.

೪೫. D.R. Gadgil, *Pacific Affairs,* June, 1951.
೪೬. *Essays and Reflections in Honour of Mahatma Gandhi,* p. 85.
೪೭. Op. cit, p. 405.



ತಂತ್ರ ವಿಜ್ಞಾನದ ಸಮಸ್ಯೆಗೆ ಸಂಬಂಧಿಸಿದ ಗಾಂಧಿವಾದಿಗಳಲ್ಲಿ ಬಹು ಜನರು ತಪ್ಪು ಕಂಡುಹಿಡಿದಿರುವಾಗ, ಆಧುನಿಕ ಯಂತ್ರ ಕೌಶಲವನ್ನು ಬಳಸಲು ಭಾರಿ ಪ್ರಯತ್ನಗಳು ನಡೆಯುತ್ತಿರುವ ಈ ಯುಗದಲ್ಲಿ ಅವರ ಕಾರ್ಯಕ್ರಮದಲ್ಲಿ ಉತ್ತಮ ಗುಣಗಳು ಇಲ್ಲದಿಲ್ಲ. ಮಾ–ಬಾಪಿಸಮ್ ಎಂದು ಕರೆಯಲ್ಪಡುವ 'ಮಾತೃಪಿತೃ' ಮನೋಧರ್ಮವೆನ್ನಬಹುದಾದ ಪರಾಧೀನತೆಯ ಮನೋಭಾವವನ್ನು ಹಳ್ಳಿಗರು ಪ್ರದರ್ಶಿಸುತ್ತಾರೆಂದು ಕೆಲವರು ವಿದೇಶೀಯ ಕ್ಷೇತ್ರ ಕಾರ್ಯಕರ್ತರು ಗಮನಿಸಿದ್ದರು. ಸ್ವಸಹಾಯ ಮೂಲಕದ ಕಲಾ ಕೌಶಲದ ಗಾಂಧಿ ತತ್ತ್ವ 'ಮಾ–ಬಾಪ್' ಮನೋಧರ್ಮದ ನಿಶ್ಚೇಷ್ಟಿತ ಭ್ರಮೆಗಳಿಗೆ ನೇರವಾದ ಸವಾಲಾಗಿದೆ. ಸ್ವಸಹಾಯ ಮೂಲಕದ ಬದಲಾವಣೆಯ ಗಾಂಧಿ ಕಾರ್ಯಕ್ರಮ ಲಕ್ಷಾಂತರ ಮಂದಿ ಸಾಮಾಜಿಕ ಕಾರ್ಯಕರ್ತರು ಅವಲಂಬಿಸಿರುವ ಯೋಜನೆಯಾಗಿದೆ. ರೈತರು ತಮ್ಮ ಕಲಾಕೌಶಲದ ಹತೋಟಿಯನ್ನಪೇಕ್ಷಿಸುತ್ತಾರೆ. ಸಂಪೂರ್ಣವಾಗಿ ಹತೋಟಿ ಮೀರಿದ ನೂತನ ಕಲಾಕೌಶಲದ ಸಾಮರ್ಥ್ಯ ಬೆದರಿಸಿದಾಗ ಅವರು ಸಹನೀಯ ಮಾತೃಪಿತೃತ್ವದಿಂದ ಪ್ರತಿಕ್ರಿಯಿಸುತ್ತಾರೆ.[೪೮]

ಸಾಮಾನ್ಯವಾಗಿ ಸ್ವೋಪಜ್ಞ ಚಿಂತಕರು ತಮ್ಮ ವಿಮರ್ಶೆಗಳಿಂದ ಗುರುತಿಸಿಕೊಳ್ಳುತ್ತಾರೆಂದೂ, ಆದರೆ ತಾವು ಬಹುವಾಗಿ ಖಂಡಿಸುವ ಕೆಲವು ಪರಿಸ್ಥಿತಿಗಳನ್ನು ಉತ್ತಮಪಡಿಸಲು ಸಲಹೆ ನೀಡುವಲ್ಲಿ ಅವರು ಸೋತಿರುವರೆಂದೂ ಹೇಳಲಾಗಿದೆ. ಆದರೆ ಈ ಆರೋಪಣೆಯನ್ನು ಗಾಂಧೀಜಿಯ ಮೇಲೆ ಹೇರಲಾಗದು. ಏಕೆಂದರೆ ರಚನಾತ್ಮಕ ವಿಮರ್ಶಕರು. ಯಾರಾದರೂ ಇರುವುದಾದರೆ, ಗಾಂಧಿಯೊಬ್ಬರೇ; ಆಧುನಿಕ ಭಾರತಕ್ಕೆ ಸಂಬಂಧಿಸಿದಂತೆ, ಅವರೊಬ್ಬರೇ ಸರಿ. ಇಂಡಿಯಾವನ್ನು ಪೀಡಿಸುವ ರೋಗದ ಬಗ್ಗೆ ಅವರಿಗೆ ಸ್ಪಷ್ಟವಾದ ತಿಳಿವಳಿಕೆಯಿತ್ತು; ಮತ್ತು ಸುಲಭಗ್ರಾಹ್ಯವೂ ಸುಲಭ ಪ್ರಯೋಗೀಯವೂ ಆದ ಸರಳ ನೀತಿಯನ್ನವರು ರೂಪಿಸಿದರು. ಅವರ ರಚನಾತ್ಮಕ ಕಾರ್ಯಕ್ರಮದ ಬಗ್ಗೆ ಹಲವಾರು ಟೀಕೆಗಳಿದ್ದವು. ಆದರವರು ತಮ್ಮ ರೋಗ ಪರೀಕ್ಷೆಯ ವಿಧಾನ ಸರಿಯೆಂದೂ, ತಮ್ಮ ಯೋಜನೆಯನ್ನೊಪ್ಪಿಕೊಳ್ಳುವ ಜನ ತಾವು ಎಸಗುತ್ತಿರುವ ಕ್ರಿಯೆಯಲ್ಲಿ ಶ್ರದ್ಧೆಯಿಟ್ಟಿರುವುದಾದರೆ ತಾವು ಸೂಚಿಸಿರುವ ಉಪಾಯ ಪರಿಣಾಮಕಾರಿಯಾಗುತ್ತದೆಂದವರು ತಮ್ಮ ಟೀಕಾಕಾರರಿಗೆ ಮನವರಿಕೆ ಮಾಡಿಕೊಟ್ಟರು. ಆರ್ಥಿಕ ಕ್ಷೇತ್ರದಲ್ಲಿ, ಅದರಲ್ಲಿಯೂ ಖಾದಿ ಕಾರ್ಯಕ್ರಮಕ್ಕೆ ಸಂಬಂಧಿಸಿದ ಗಾಂಧಿಯ ಭಾವನೆಗಳ ಯಶಸ್ಸಿಗೆ ಮಹತ್ತರವಾದ ಕಾರಣವೊಂದಿತ್ತು. ಅವರ ಅನನ್ಯವಾದ ವ್ಯಕ್ತಿತ್ವವೇ ಅದು. ವೆಬೀರಿಯನ್ ಅರ್ಥದಲ್ಲದನ್ನು ಮೋಹಕ

೪೮. Mackim Marriot, *Economic Development and Cultural Change,* p. 261.

ಮಾಂತ್ರಿಕ ಶಕ್ತಿಯೆಂದು ವರ್ಗೀಕರಿಸಬೇಕಾಗುತ್ತದೆ. ಮ್ಯಾಕ್ಸ್‌ವೆಬರ್‌ನ ಪ್ರಕಾರ, ವಿಶಿಷ್ಟ ವ್ಯಕ್ತಿತ್ವದ ಕೆಲವೊಂದು ಗುಣಕ್ಕೆ 'ಮಾಂತ್ರಿಕತೆ' ಎಂಬ ಪದವನ್ನು ಬಳಸಬಹುದು; ಅದರ ಪ್ರಕಾರ ಅವನನ್ನು ಸಾಧಾರಣ ಮನುಷ್ಯರಿಂದ ಅಗಲಿಸಿ, ಅಲೌಕಿಕ, ಅಪೌರುಷೇಯ ಅಥವಾ ಕೊನೆಯ ಪಕ್ಷ ವಿಶಿಷ್ಟವೂ ಅಸಾಧಾರಣವೂ ಆದ ಶಕ್ತಿ ಅಥವಾ ಗುಣಗಳನ್ನು ಹೊಂದಿರುವ ಅದ್ಭುತ ವ್ಯಕ್ತಿಯೆಂದು ತಿಳಿಯಬೇಕಾಗಿದೆ. ಇದೊಂದು ಗುಣವಿಶೇಷಗಳ ಸಂಗ್ರಹವಲ್ಲ ; ನಾಯಕರ ಮತ್ತು ಅನುಯಾಯಿಗಳ ಸಂಬಂಧ; ಖಚಿತವೂ ಅಸಾಧಾರಣವೂ ಆದ ಪಾವಿತ್ರ್ಯ, ಶೌರ್ಯ ಅಥವಾ ಒಬ್ಬ ವ್ಯಕ್ತಿಯ ಆದರ್ಶಗುಣಕ್ಕೆ ಮತ್ತು ನಿರ್ದಿಷ್ಟ ಪ್ರಮಾಣದ ಮಾದರಿಗಳಿಗೆ ಅಥವಾ ಸಾಕ್ಷಾತ್ಕಾರಗೊಂಡ ಅಥವಾ ಅವರು ವಿಧಿಸಿದ ಆಜ್ಞೆಗೆ ಒಂದು ಪ್ರಮಾಣದ ನಿಷ್ಠೆಯೇ ಆ ಸಂಬಂಧವನ್ನು ನಿರ್ಣಯಿಸುತ್ತದೆ. ಹಳ್ಳಿಗರು ಒಪ್ಪಿಕೊಂಡಿರುವ ಅಭಿವೃದ್ಧಿ ಕಾರ್ಯಕ್ರಮದ ಹಂಚಿಕೆಯನ್ನು ವಿವರಿಸುತ್ತಾ ಮಿಲ್ಟನ್ ಸಿಂಗರ್ ಒಬ್ಬ ಹಳ್ಳಿಗನ ಹೇಳಿಕೆಯನ್ನು ಉದ್ಧರಿಸುತ್ತಾನೆ ; 'ಹಳ್ಳಿಗಳನ್ನು ಅಭಿವೃದ್ಧಿಪಡಿಸಬೇಕೆಂದು ಗಾಂಧೀಜಿ ನುಡಿದರು; ಹಳ್ಳಿಗಳಿಗಾಗಿ ಪಂಚವಾರ್ಷಿಕ ಯೋಜನೆಯನ್ನು ತಯಾರಿಸಿದ ನೆಹ್ರೂರವರಂಥ ಶಿಷ್ಯ ಅವರಿಗಿದ್ದರು. ನೆಹ್ರೂರವರ ಅನುಯಾಯಿಗಳಾಗಿರುವ ನಾವು ನಮ್ಮ ಹಳ್ಳಿಯಲ್ಲಿ ಯೋಜನೆಯನ್ನು ಕಾರ್ಯಗತಗೊಳಿಸಲು ಅವರಿಗೆ ಎಲ್ಲ ನೆರವು ನೀಡುತ್ತೇವೆ.' ನೆಹ್ರೂ ಸಹ ಮೋಹಕ ನಾಯಕರೆಂದು ಪ್ರಸಿದ್ಧರಾಗಿದ್ದಾರೆ; ಅವರು ಭೌತಿಕವಾಗಿ ಗಾಂಧೀಜಿಯವರ ಅನುಯಾಯಿಯಾದರೂ ಗಾಂಧೀಜಿಯ ಆರ್ಥಿಕ ಕಾರ್ಯಕ್ರಮದ ಕಡೆಗೆ ಗಮನ ಹರಿಸಿಲ್ಲ. ಅಭಿವೃದ್ಧಿ ಸಂಬಂಧವಾದ ಇಂದಿನ ಆರ್ಥಿಕ ಕಾರ್ಯಕ್ರಮಗಳು ಗಾಂಧೀಜಿಯ ಪ್ರಭಾವಕ್ಕೇಕೆ ಸ್ವಲ್ಪವೇ ತೆರೆದುಕೊಂಡಿವೆಯೆಂಬುದಕ್ಕೆ ಇದೇ ಕಾರಣ. ವೆಬೇರಿಯನ್ ಕಲ್ಪನೆಯ ಮತ್ತೊಬ್ಬ ನಾಯಕರೆಂದರೆ ವಿನೋಬಾಜಿಯವರು. ಅವರು ತಮ್ಮ ಕಾರ್ಯಕ್ರಮವನ್ನು ಕಟ್ಟುನಿಟ್ಟಾಗಿ ಗಾಂಧೀಜಿ ಮಾರ್ಗದಲ್ಲಿ ನಿರ್ವಹಿಸುತ್ತಾರೆ. ಅವರು ತಮ್ಮ ಕ್ಷೇತ್ರದಲ್ಲಿ ಯಶಸ್ವಿಯಾಗಿರುವುದು ಸ್ಪಷ್ಟ. ಅಖಿಲ ಭಾರತೀಯ ಖ್ಯಾತಿಯ ಸಮಾಜವಾದಿ ನಾಯಕರೊಬ್ಬರು ಸರ್ವೋದಯ ಸಿದ್ಧಾಂತಕ್ಕೆ ಪರಿವರ್ತನೆಗೊಂಡಿರುವುದೇ ಇದಕ್ಕೆ ನಿದರ್ಶನ. ಅವರೇ ಜಯಪ್ರಕಾಶ ನಾರಾಯಣರು. ಗಾಂಧೀಜಿಯ ಚಿಂತನೆ ಎಷ್ಟರಮಟ್ಟಿಗೆ ಭವಿಷ್ಯದಲ್ಲಿ ಪರಿಣಾಮಕಾರಿಯಾಗುತ್ತದೆನ್ನುವುದು ಇಂದಿನ ಆರ್ಥಿಕಾಭಿವೃದ್ಧಿಯ ಬಗೆಗೆ ಗಾಂಧಿವಾದಿಗಳು ನೀಡುವ ವ್ಯಾಖ್ಯೆಯನ್ನವಲಂಬಿಸಿದೆ. ಗಾಂಧಿಯವರು ವಾದಿಸುವ ಯಂತ್ರ ತಂತ್ರ ಕೌಶಲದ ಬಗ್ಗೆ ಅಷ್ಟೊಂದು ಕಠಿನ ಮಾರ್ಗವನ್ನನುಸರಿಸಲು ಸಾಧ್ಯವಿಲ್ಲದಿರಬಹುದು. ಆರ್ಥಿಕಾಭಿವೃದ್ಧಿಯ ನಿಜವಾದ ಉದ್ದೇಶವನ್ನು ಪೂರೈಸಲು ಬೇಕಾದ ತಾಂತ್ರಿಕತೆಯನ್ನು ಉತ್ತಮಪಡಿಸುವ ಸಂಗತಿ ಅದಾಗಿರುತ್ತದೆ. ಇತ್ತೀಚಿನ



ದಿನಗಳಲ್ಲಿ ಗಾಂಧಿವಾದಿಗಳು ಮತ್ತು ಯೋಜಕರು ಜತೆ ಜತೆಯಾಗಿ ಪ್ರಯತ್ನಿಸುವ ಹಂಚಿಕೆ ನಡೆದಿದೆ. ಇದರಿಂದಾಗಿ ನಮ್ಮ ಯೋಜನಾ ವಿಧಾನದಲ್ಲಿ ಹೊಂದಾಣಿಕೆಯಾಗುವ ಭರವಸೆಯಿದೆ.

ಭಾರತದ ಯೋಜನೆಯ ಮೇಲೆ ಗಾಂಧೀಜಿಯ ಕೊಡುಗೆ ಪರಿಷ್ಕಾರಕ ಪ್ರಭಾವವನ್ನು ಬೀರುತ್ತದೆ. ಪಾಶ್ಚಾತ್ಯ ತಾಂತ್ರಿಕತೆಯ ಹುಚ್ಚು ಆರಾಧನೆಯ ವಿರುದ್ಧವಾಗಿ ಗಾಂಧೀಜಿಯವರು ನೀಡಿದ ಎಚ್ಚರಿಕೆ ಈಗಲೂ ಅವರ ಪದ್ಧತಿಯನ್ನನುಸರಿಸುವ ಕೆಲವು ನಾಯಕರ ಮನಸ್ಸಿನಲ್ಲಿ ಹಸುರಾಗಿದೆ. ಯು.ಎನ್. ದೇಬರ್ ಅಂಥವರು ಗಾಂಧೀಜಿಪ್ರಣೀತ ಅರ್ಥಶಾಸ್ತ್ರದ ಬಗ್ಗೆ ನಿರಾಶಾವಾದಿಗಳಾಗಿದ್ದಾರೆ. 'ವಿಭಜನೆ ಮತ್ತು ಒಕ್ಕೂಟದ ಇಂಡಿಯಾ ನಡುವೆ ಹಾಗೂ ಸ್ವಾತಂತ್ರ್ಯೋತ್ತರ ಕಾಲದಲ್ಲಿ ನಡೆದ ಅನೇಕ ಘಟನೆಗಳಿಗೆ ವಿರುದ್ಧವಾಗಿ ಅತ್ಯಂತ ಪ್ರಭಾವಶಾಲಿಯಾದ ಬಾಪು ಗಟ್ಟಿಯಾಗಿ ನಿಲ್ಲಲಾಗಲಿಲ್ಲ' ಎಂದು ದೇಬರ್ ವ್ಯಕ್ತಪಡಿಸಿದರು. ಎಂಥ ಸಮರ್ಥ ಮನುಷ್ಯನಾದರೂ ತನ್ನಿಷ್ಟಕ್ಕೆ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಹೊಂದಿದ್ದಾನೆ; ಕೆಲವೊಮ್ಮೆ ಸಣ್ಣ ಅಥವಾ ದೊಡ್ಡ ಸಮೂಹದ ಪರವಾಗಿ ಆಯ್ಕೆ ಮಾಡಬಲ್ಲ. ಎಷ್ಟೇ ಆದರೂ, ಮಾನವ ದೌರ್ಬಲ್ಯದಿಂದ ಕೂಡಿದ ಮತ್ತು ಸರ್ಕಾರಿ ಅಧಿಕಾರ, ಹಣದ ಚೀಲ, ಮತ್ತು ಬುದ್ಧಿಮತ್ತೆಯಿಂದ ಆಸರೆ ಪಡೆದ ವ್ಯವಸ್ಥೆ ಎದುರಾದಾಗ ಮನುಷ್ಯ ಅನಿವಾರ್ಯವಾದದ್ದನ್ನು ಒಪ್ಪಿಕೊಳ್ಳಲೇಬೇಕು. ಆದರೆ ಇಂದಿನ ದಿನಗಳ ಇಂಡಿಯಾದ ಯೋಜನೆಯ ಸ್ವರೂಪ ಹೇಗಿದೆಯೆಂದರೆ, ಈಗಲೂ ಗಾಂಧೀಜಿಯ ಸಣ್ಣದನಿ ಎಲ್ಲೆಡೆಯೂ ಕೇಳಿಸುತ್ತದೆ. ಹಿಂದೆ ಹೇಳಿದ ಹಾಗೆ 'ಮನುಷ್ಯ ಮತ್ತು ಸಂಘಟನಾ ಸಾಮರ್ಥ್ಯಗಳು ಒಳಗೊಳ್ಳಲಾಗದಂಥ ಶ್ರೇಷ್ಠತಮ ಪ್ರಮಾಣದಲ್ಲಿ ಅನೇಕ ಅಭಿವೃದ್ಧಿಶೀಲ ದೇಶಗಳ ನಾಯಕರು ಯೋಚಿಸುತ್ತಿದ್ದಾರೆ ಮತ್ತು ಯೋಜಿಸುತ್ತಿದ್ದಾರೆ. ಈಗಲೂ ತಮ್ಮ ಪೂರ್ವಗ್ರಹದ ಮೂಲಕ ಬೆಳವಣಿಗೆಯ ಗತಿಯ ಕಡೆಗೆ ನೋಡುವ ಪಾಶ್ಚಾತ್ಯ ರಾಷ್ಟ್ರಗಳು ಈ ದಿಕ್ಕಿನಲ್ಲಿ ಅವುಗಳಿಗೆ ಚಿತಾವಣೆ ಮಾಡುತ್ತ, ಉತ್ತೇಜನ ನೀಡುತ್ತಿವೆ.'[೪೯] ಪ್ರಾಯಶಃ ಅಭಿವೃದ್ಧಿಯ ಬಗ್ಗೆ ಭಾರತ ಹೊಸದಾಗಿ ಯೋಚಿಸಲು ಇದು ಪ್ರೇರಿಸುತ್ತದೆ ; ಮತ್ತು ಈ ಕ್ರಮದಲ್ಲಿ ಆರ್ಥಿಕ ಕ್ಷೇತ್ರಕ್ಕೆ ಗಾಂಧೀಜಿಯ ಕೊಡುಗೆ ಪ್ರಯೋಜನಕಾರಿಯಾಗುತ್ತದೆ.

* * * *

೪೯. Malcolm D. Rivkin, *'Let us think small for Development'*. International Development Review, March 1963, p. 24.